ಸಂಪುಟ: 04 ಸಂಚಿಕೆ: 85 ಪುಟಗಳು: 08 ಶನಿವಾರ 08 ಜೂನ್ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ಮನುಷ್ಯನಿಗೆ ಜೀವನದಲ್ಲಿ ಬಹಳಷ್ಟು ಸಂಕಷ್ಟಗಳು ಬೇಕಾಗುತ್ತವೆ. ಏಕೆಂದರೆ ಯಶಸ್ಸನ್ನು ಸಂಭ್ರಮಿಸಲು ಅವು ಬೇಕಾಗುತ್ತವೆ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ನೀಟ್ ಪರೀಕ್ಷೆಯ ಅಕ್ರಮ.. ಸೂಕ್ತ ತನಿಖೆಗೆ ಸಿಎಂ ಸಿದ್ದು ಆಗ್ರಹ

• ಉದಯವಾಹಿನಿ, ಬೆಂಗಳೂರು

ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿದ್ದು, ಸೂಕ್ತ ತನಿಖೆಯಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿ, ನಿಗದಿತ ವೇಳಾಪಟ್ಟಿಯಂತೆ ನೀಟ್ ಪರೀಕ್ಷೆ ಮೇ 5ರಂದು ನಡೆಸಲಾಯಿತು. ಮತ್ತು ಪರೀಕ್ಷೆಯ ಫಲಿತಾಂಶವು ಜೂ.14ರಂದು ಪ್ರಕಟವಾಗಬೇಕಿತ್ತು.

ಆದರೆ ಇದ್ದಕ್ಕಿದ್ದಂತೆ ಫಲಿತಾಂಶವನ್ನು ಜೂ.4 ರಂದು ಪ್ರಕಟಿಸಲಾಗಿದೆ. ಅದೇ ದಿನದಂದು ಲೋಕಸಭೆ ಚುನಾವಣೆಯ ಫಲಿತಾಂಶ ಬಂದಿದ್ದು, ಇಡೀ ದೇಶವೇ ಲೋಕಸಭೆ ಚುನಾವಣೆಯ ಫಲಿತಾಂಶವನ್ನು ಕೇಳುವುದರಲ್ಲಿ ನಿರತವಾಗಿತ್ತು. ಈ ಗದ್ದಲದಲ್ಲಿ ನೀಟ್ ಫಲಿತಾಂಶವನ್ನು ತರಾತುರಿಯಲ್ಲಿ ಬಿಡುಗಡೆ ಮಾಡಿದ್ದು,ಪರೀಕ್ಷೆಯ ಅಕ್ರಮಗಳನ್ನು ಮುಚ್ಚಿಹಾಕಬಹುದು ಎಂಬ ಕಾರಣಕ್ಕಾಗಿಯೇ ಎಂದು ಸಿಎಂ ಪ್ರಶ್ನಿಸಿದ್ದಾರೆ. ಅಲ್ಲದಿದ್ದರೆ ಸರ್ಕಾರ ತರಾತುರಿಯಲ್ಲಿ ಫಲಿತಾಂಶ ಬಿಡುಗಡೆ ಮಾಡಿದ್ದು ಯಾಕೆ ಎಂದು ಕೇಂದ್ರ ಸರ್ಕಾರ ಉತ್ತರಿಸಲಿ ಎಂದಿದ್ದಾರೆ.

## ವಾಲ್ಮೀಕಿ ನಿಗಮದ ಹಗರಣ: ಸಚಿವರಿಗೆ ರಾಹುಲ್ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿದ ಆರೋಪದಡಿ ದಾಖಲಿಸಲಾಗಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಕೋರ್ಟ್‌ಗೆ ಹಾಜರಾಗಲು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಬೆಂಗಳೂರಿಗೆ ಆಗಮಿಸಿದ್ದರು. ಇದೇ ಸದಂರ್ಭದಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಸಂಸತ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಸಂಸದರು, ಪಾರಾಜೀತ ಅಭ್ಯರ್ಥಿಗಳ ಜೊತೆ ರಾಹುಲ್ ಗಾಂಧಿ ನೇತೃತ್ವದಲ್ಲಿ ಸಭೆ ನಡೆಸಿದ್ದಾರೆ. ವಾಲ್ಮೀಕಿ ನಿಗಮದ ಹಗರಣ ಬಯಲಿಗೆ ಬಂದ ಹಿನ್ನಲೆ ಸಚಿವರಿಗೆ ರಾಹುಲ್ ಗಾಂಧಿ ಖಡಕ್ ಎಚ್ಚರಿಕೆ ನೀಡಿದ್ದಾರೆ. ರಾಜ್ಯ ಸರ್ಕಾರದ ವರ್ಚಸ್ಸಿಗೆ ದಕ್ಕೆ ಬರದ ಹಾಗೆ ನೋಡಿಕೊಳ್ಳಿ, ಸರ್ಕಾರ ಇಕ್ಕಟ್ಟಿಗೆ ಸಿಲುಕಬಾರದು. ವಿರೋಧ ಪಕ್ಷಗಳ ವಾಗ್ದಾಳಿಗೆ ಸಿಲುಕದಂತೆ ಕಣ್ಣು, ಕಿವಿ ಅಲರ್ಟ್ ಮಾಡಿ ಕೆಲಸ ಮಾಡಿ ಎಂದು ಎಲ್ಲಾ ಸಚಿವರಿಗೆ ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ.

## ಚಂದನ್-ನಿವೇದಿತಾ ದಾಂಪತ್ಯ ಅಂತ್ಯ : ವಿಚ್ಛೇದನ ಮಂಜೂರು

• ಉದಯವಾಹಿನಿ, ಬೆಂಗಳೂರು

4 ವರ್ಷಗಳ ಚಂದನ್-ನಿವೇದಿತಾ ದಾಂಪತ್ಯ ಅಂತ್ಯಗೊಂಡಿದ್ದು, ಕೋರ್ಟ್ ವಿಚ್ಛೇದನ ಮಂಜೂರು ಮಾಡಿದೆ.ಬೆಂಗಳೂರಿನ 2 ನೇ ಹೆಚ್ಚುವರಿ ಕೌಟುಂಬಿಕ ಕೋರ್ಟ್ ವಿಚ್ಛೇದನ ಮಂಜೂರು ಮಾಡಿ ಆದೇಶಿಸಿದೆ. ಮಗು ಮಾಡಿಕೊಳ್ಳುವ ವಿಚಾರಕ್ಕೆ ಇವರಿಬ್ಬರ ನಡುವೆ ದಾಂಪತ್ಯ ಕಲಹ ಉಂಟಾಗಿತ್ತು ಎನ್ನಲಾಗಿದೆ. ಕನ್ನಡ ಬಿಗ್ ಬಾಸ್ ನಿಂದ ಆರಂಭವಾಗಿದ್ದ ಈ ಜೋಡಿಯ ಪ್ರೀತಿ ಬಳಿಕ ಮೈಸೂರು ಯುವ ದಸರಾ ವೇದಿಕೆಯಲ್ಲಿ ಚಂದನ್ ಶೆಟ್ಟಿ ನಿವೇದಿತಾಗೆ ಪ್ರಪೋಸ್ ಮಾಡುವ ಮೂಲಕ ಗಮನ ಸೆಳೆದಿದ್ದರು. ಇಬ್ಬರ ಮದುವೆಗೆ ಎರಡೂ ಕುಟುಂಬದವರು ಒಪ್ಪಿದ್ದರು. ಚಂದನ್ ಶೆಟ್ಟಿ ಮತ್ತು ನಿವೇದಿತಾ ಗೌಡ ಅವರನ್ನು ಸ್ಯಾಂಡಲ್‌ವುಡ್‌ನ ಕ್ಯೂಟ್ ಕಪಲ್ ಅಂತ ಎಲ್ಲಾರೂ ಕರೆಯುತ್ತಾರೆ. ಸಾಮಾಜಿಕ ಜಾಲತಾಣದಲ್ಲೂ ಈ ಜೋಡಿ ಬಹಳ ಸದ್ದು ಮಾಡಿತ್ತು. ಒಟ್ಟಿಗೆ ರೀಲ್ಸ್ ಮಾಡುತ್ತಾ ಜನರಿಗೆ ಸಖತ್ ಎಂಟರ್ ಟೈನ್ ಮೆಂಟ್ ನೀಡಿತ್ತು. ಆದ್ರೆ, ಧಿಡೀರ್ ಆಗಿ ಈ ಜೋಡಿ ವಿಚ್ಛೇದನಕ್ಕೆ ಅರ್ಜಿ ಹಾಕಿ ಇದೀಗ ಡೈವೋರ್ಸ್ ಕೂಡ ಪಡೆದಿದೆ ಎಂಬ ಸುದ್ದಿ ಅಚ್ಚರಿ ಉಂಟು ಮಾಡಿದೆ.

## ಇದು ನನ್ನ ವೈಯಕ್ತಿಕ ಸೋಲು ಅದನ್ನು ಒಪ್ಪಿಕೊಳ್ಳುತ್ತೇನೆ : ಡಿಸಿಎಂ

• ಉದಯವಾಹಿನಿ, ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಅತ್ಯಂತ ಪ್ರಮುಖವಾದಂತಹ ಕ್ಷೇತ್ರ ಹಾಗೂ ಜಿದ್ದಾಜಿದ್ದಿ ಕ್ಷೇತ್ರ ಅಂದರೆ ಬೆಂಗಳೂರು ಗ್ರಾಮಾಂತರವಾಗಿತ್ತು. ಈ ಒಂದು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾಕ್ಟರ್ ಸಿ ಮಂಜುನಾಥ್ ಕಾಂಗ್ರೆಸ್ ಅಭ್ಯರ್ಥಿ ಡಿಕೆ ಸುರೇಶ ವಿರುದ್ಧ ಭರ್ಜರಿ ಜಯ ದಾಖಲಿಸಿದ್ದಾರೆ. ತಮ್ಮನ ಸೋಲಿನ ವಿಚಾರವಾಗಿ ಡಿಕೆ ಶಿವಕುಮಾರ್ ಪ್ರತಿಕ್ರಿಯೆ ನೀಡಿದ್ದು ಇದು ನನ್ನ ವಯಕ್ತಿಕ ಸೋಲು ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಗ್ರಾಮಾಂತರದಲ್ಲಿ ಡಿಕೆ ಸುರೇಶ್ ಸೋಲಿನ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅವರು, ಇದು ನನ್ನ ವೈಯಕ್ತಿಕ ಸೋಲು. ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ಬೆಂಗಳೂರಿನಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು. ಬೆಂಗಳೂರು ಗ್ರಾಮಾಂತರದಲ್ಲಿ ಓವರ್ ಕಾನ್ಫಿಡೆನ್ಸ್ ನಲ್ಲಿ ಇದ್ದೆ. ಬಿಜೆಪಿ ನಾಯಕರು ಕೂಡ ಒಳ್ಳೆಯ ತಂತ್ರಗಾರಿಕೆಯನ್ನು ಮಾಡಿದ್ದರು ಎಂದರು.

# ಸರ್ವಾನುಮತದ ಸ್ಪಷ್ಟೀಕರಣ

## ನಾಳೆ ನಮೋ ಪ್ರಮಾಣ

● ಹಳೆ ಸಂಸತ್ ಭವನದಲ್ಲಿ ಸಭೆ, ● ಮೋದಿ ಎನ್‌ಡಿಎ ನಾಯಕ, ● ಸರ್ವಾನುಮತದ ನಿರ್ಧಾರಗಳು, ● ಪರಸ್ಪರ ನಂಬಿಕೆ ಈ ಮೈತ್ರಿಯ ತಿರುಳು: ಮೋದಿ




• ಉದಯವಾಹಿನಿ, ನವದೆಹಲಿ

ಮೋದಿ ಅವರನ್ನು ದೆಹಲಿಯಲ್ಲಿ ಶುಕ್ರವಾರ ನಡೆದ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ಈ ಮೂಲಕ 3ನೇ ಅವಧಿಗೆ ದೇಶದ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಹಾದಿ ಸುಗಮವಾಗಿದೆ.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಸಂಸದೀಯ ಪಕ್ಷದ ನಾಯಕರಾಗಿ ಮೋದಿ ಅವರನ್ನು ಅಧಿಕೃತವಾಗಿ ಆಯ್ಕೆ ಮಾಡಲಾಗಿದ್ದು, ಜೂ.9ರಂದು ಮೋದಿ ಅವರು 3ನೇ ಬಾರಿಗೆ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುವರು. ನವದೆಹಲಿಯ ನಡೆದ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಸರ್ವಾನುಮತದಿಂದ ನಾಯಕನನ್ನಾಗಿ ಆಯ್ಕೆ ಮಾಡಲಾಯಿತು. ಎನ್‌ಡಿಎ ನಾಯಕರಾಗಿ ಆಯ್ಕೆಯಾಗಿರುವ ನರೇಂದ್ರ ಮೋದಿ ಅವರು ರಾಷ್ಟ್ರಪತಿ ದ್ರೌಪದಿಮುರ್ಮು ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕು ಮಂಡಿಸುವರು.

ಇದಾದ ಬಳಿಕ ರಾಷ್ಟ್ರಪತಿ ಅವರು ಲೋಕಸಭಾ ಚುನಾವಣೆಯಲ್ಲಿ ಬಹುಮತ ಪಡೆದಿರುವ ಎನ್‌ಡಿಎ ಒಕ್ಕೂಟವನ್ನು ಸರ್ಕಾರ ರಚನೆಗೆ ಆಹ್ವಾನ ನೀಡುವ ಪ್ರಕ್ರಿಯೆಗಳನ್ನು ಪೂರೈಸುವರು.ಕಳೆದ ಎರಡು ದಿನಗಳ ಹಿಂದೆ ನವದೆಹಲಿಯಲ್ಲಿ ನಡೆದಿದ್ದ ಎನ್‌ಡಿಎ ನಾಯಕರ ಸಭೆಯಲ್ಲಿ ಮೋದಿ ಅವರನ್ನು ಎನ್‌ಡಿಎ ನಾಯಕರನ್ನಾಗಿ ಔಪಚಾರಿಕವಾಗಿ ಆಯ್ಕೆ ಮಾಡಲಾಗಿತ್ತು. ಅಧಿಕೃತವಾಗಿ ಮೋದಿ ಅವರನ್ನು ಎನ್‌ಡಿಎ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ಬಿಜೆಪಿಯ ಹಿರಿಯ ನಾಯಕ ರಾಜನಾಥ್ ಸಿಂಗ್ ಅವರು ಬಿಜೆಪಿಯ ಸಂಸದೀಯ ಪಕ್ಷದ ನಾಯಕ ನರೇಂದ್ರ ಮೋದಿ ಅವರನ್ನು ಎನ್‌ಡಿಎ ನಾಯಕನ್ನಾಗಿ ಆಯ್ಕೆ ಮಾಡುವ ಪ್ರಸ್ತಾಪವನ್ನು ಮಂಡಿಸಿದರು. ಬಿಜೆಪಿಯ ಹಿರಿಯ ನಾಯಕರಾದ ಅಮಿತ್ ಶಾ, ನಿತಿನ್ ಗಡ್ಕರಿ, ಜೆಡಿಎಸ್ ನಾಯಕ ಎಚ್.ಡಿ ಕುಮಾರಸ್ವಾಮಿ,ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು, ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್, ಎಲ್‌ಜೆಪಿ ನಾಯಕ ಚಿರಾಗ್ ಪಾಸ್ವಾನ್ ಹಿಂದೂಸ್ತಾನ್ ಆವಾಮಿ ಮೋರ್ಚಾ ಅಧ್ಯಕ್ಷ ನಿತಿನ್ ರಾಮ್ ಮಾಂಜಿ, ಸೇರಿದಂತೆ ಎನ್ ಡಿಎ ಮಿತ್ರ ಪಕ್ಷದ ನಾಯಕರು ಅನುಮೋದಿಸಿದರು. ಎನ್‌ಡಿಎ ಮಿತ್ರ ಪಕ್ಷಗಳ ಈ ಸಂಸದೀಯ ಪಕ್ಷದ ಸಭೆಯಲ್ಲಿ ಸರ್ವಾನುಮತದಿಂದ ನಾಯಕರಾಗಿ ಆಯ್ಕೆಯಾಗಿರುವ ಮೋದಿ ಅವರು ಇದೇ ತಿಂಗಳ 9 ರಂದು ದೇಶದ ಪ್ರಧಾನಿಯಾಗಿ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸುವರು.

ಸಭೆಯಲ್ಲಿ ಬಿಜೆಪಿಯ ಹಿರಿಯ ನಾಯಕ ಪ್ರಹ್ಲಾದ್ ಜೋಶಿ ಅವರು ಇದೇ ಭಾನುವಾರ ಜೂನ್ 9ರಂದು ಮೋದಿ ದೇಶದ ಮುಂದಿನ ಪ್ರಧಾನಿಯಾಗಿ ಸತತ ಮೂರನೇ ಬಾರಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಖಚಿತಪಡಿಸಿದರು. ಸಮಾರಂಭವು ನಾಳೆ ಸಂಜೆ 6ಗಂಟೆಗೆ ನಡೆಯಲಿದೆ. ಎನ್‌ಡಿಎ ಸಂಸದರಲ್ಲದೆ, ಮುಖ್ಯಮಂತ್ರಿಗಳು ಸೇರಿದಂತೆ ಮೈತ್ರಿಕೂಟದ ಹಿರಿಯ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾಅವರು ಮೋದಿ ನಾಯಕತ್ವವನ್ನು ಬೆಂಬಲಿಸುವ ನಿರ್ಣಯ ಪ್ರಸ್ತಾಪಿಸಿದಾಗ ಮಿತ್ರಪಕ್ಷಗಳು ಮತ್ತು ಸಂಸದರು ಅದನ್ನು ಅನುಮೋದಿಸಿದರು. ಮೋದಿ ಅವರು ಎನ್‌ಡಿಎ ಸಂಸದರ ನಾಯಕರಾಗಿ ಆಯ್ಕೆಯಾದ ನಂತರ, ಮೈತ್ರಿಕೂಟದಹಿರಿಯ ಸದಸ್ಯ ಟಿಡಿಪಿಯ ಎನ್ ಚಂದ್ರಬಾಬು ನಾಯ್ಡು, ಜೆಡಿಯುನ ನಿತೀಶ್ ಕುಮಾರ್ ಮತ್ತು ಶಿವಸೇನೆಯ ಏಕನಾಥ್ ಶಿಂಧೆ ಅವರು ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಎನ್‌ಡಿಎ 293 ಸಂಸದರನ್ನು ಹೊಂದಿದ್ದು, 543 ಸದಸ್ಯರ ಲೋಕಸಭೆಯಲ್ಲಿ ಬಹುಮತದ 272 ಕ್ಕಿಂತ ಹೆಚ್ಚು ಇದೆ. ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ಜೆಪಿ ನಡ್ಡಾ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಹೊಸ ಸರ್ಕಾರದಲ್ಲಿ ತಮ್ಮ ಪ್ರಾತಿನಿಧ್ಯದ ಪಾಲಿಗೆ ಸೌಹಾರ್ದಯುತ ಸೂತ್ರವನ್ನು ರೂಪಿಸಲು ಮಿತ್ರಪಕ್ಷಗಳೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾರೆ.

**1** ಸಂಸದೀಯ ಸಭೆಯಲ್ಲಿ ಮೋದಿ... ಮೋದಿ.. ಘೋಷಣೆ: ದೇಶದ ಪ್ರಧಾನಿಯಾಗಿ ಜೂ.9ರಂದು ಪದಗ್ರಹಣ

**2** ನಿತೀಶ್, ನಾಯ್ಡು , ಪವನ್, ಎಚ್‌ಡಿಕೆ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ನಾಯಕ ಮೋದಿ

**3** ಎನ್‌ಡಿಎ ಪ್ರಧಾನಿ ಅಭ್ಯರ್ಥಿಯಾಗಿ ನರೇಂದ್ರ ಮೋದಿ, ಪ್ರಸ್ತಾವನೆಗೆ ಅನುಮೋದಿಸಿದ ಎಚ್‌ಡಿಕೆ

**4** ಸಭೆಯಲ್ಲಿ ಎನ್‌ಡಿಎ ನಾಯಕರ ಉಪಸ್ಥಿತಿ

### ಚಂದ್ರಬಾಬು ನಾಯ್ಡು ಮಾತು

ಸಭೆಯಲ್ಲಿ ಮಾತನಾಡಿದ ಚಂದ್ರಬಾಬು ನಾಯ್ಡು ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ, ಮೋದಿ ಸರಿಯಾದ ಸಮಯಕ್ಕೆ ಸೂಕ್ತ ನಾಯಕರಾಗಿ ಆಯ್ಕೆಯಾಗಿದ್ದಾರೆ. ಮೋದಿ ನೇತೃತ್ವದಲ್ಲಿ 3ನೇ ಬಾರಿ ಸರ್ಕಾರ ರಚಿಸುತ್ತಿರುವುದು ಐತಿಹಾಸಿಕ ದಿನ ಎಂದು ಬಣ್ಣಿಸಿದರು.

### ಅಭಿನಂದನೆಗಳ ಮಹಾಪೂರ

ಎನ್‌ಡಿಎ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾದ ನರೇಂದ್ರ ಮೋದಿ ಅವರನ್ನು ಎನ್‌ಡಿಎ ನಾಯಕರು ಸೇರಿದಂತೆ ಹಲವು ಹಿರಿಯ ನಾಯಕರು ಎದ್ದು ನಿಂತು ಅಭಿನಂಧನೆ ಸಲ್ಲಿಸಿದರು. ಎನ್ ಡಿ ಎ ನಾಯಕರಾಗಿ ಆಯ್ಕೆಯಾದ ಬಳಿಕ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು , ದೇಶದ ಸಮಗ್ರ ಅಭಿವೃದ್ಧಿ ಜೊತೆಯಾಗಿ ಕೆಲಸ ಮಾಡೋಣ, ತಮ್ಮ ಮೇಲೆ ನಂಬಿಕೆ ಇಟ್ಟ ಎನ್ ಡಿಎ ಎಲ್ಲಾ ನಾಯಕರಿಗೆ ಧನ್ಯವಾದಗಳು ಎಂದರು ದೇಶದ ಕೋಟ್ಯಂತರ ಕಾರ್ಯಕರ್ತರ ನಿರಂತರ ಪರಿಶ್ರಮದ ಫಲವಾಗಿ ದೇಶದಲ್ಲಿ ಮೂರನೇ ಬಾರಿಗೆ ಅಧಿಕಾರ ವಹಿಸಿಕೊಳ್ಳುವ ಅವಕಾಶ ಸಿಕ್ಕಿದೆ. ಎನ್‌ಡಿಎ ನಾಯಕರಾಗಿ ಆಯ್ಕೆ ಮಾಡಿದ ಎಲ್ಲಾರಿಗೂ ಮತ್ತೊಮ್ಮೆ ಅಬಾರಿ ಎಂದರು.

### ಮೂರನೇ ಅವಧಿ ಮತ್ತೊಮ್ಮೆ ಮೋದಿ


### ಜೂ.9ರಂದು ಪ್ರಮಾಣ,ಅಧಿಕೃತ ಘೋಷಣೆ

ದೇಶದ ಪ್ರಧಾನಿಯಾಗಿ ಮೋದಿ ಅವರು ಜೂ.9ರಂದು ಪ್ರಮಾಣವಚನ ಸ್ವೀಕರಿಸುವರು ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್‌ಜೋಷಿ ಅಧಿಕೃತವಾಗಿ ಪ್ರಕಟಿಸಿದರು. ದೆಹಲಿಯಲ್ಲಿ ನಡೆದ ಎನ್‌ಡಿಎ ಸಭೆಯ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಲ್ಹಾದ್‌ಜೋಷಿ ಅವರು ಜೂ. 9ರಂದು ಸಂಜೆ 6 ಗಂಟೆಗೆ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಹೇಳಿದರು.




ಎನ್‌ಡಿಎ ಮೈತ್ರಿಕೂಟದ ನಾಯಕರಾಗಿ ಪ್ರಧಾನಿ ಮೋದಿ ಆಯ್ಕೆಯಾಗಿದ್ದು ದೇಶದ ಸರ್ವಾಂಗೀಣ ಅಭಿವೃದ್ಧಿ ಎನ್ ಡಿಎ ಉದ್ದೇಶವಾಗಿದೆ. ಮೂರನೇ ಬಾರಿಗೆ ಮೋದಿ ಅವರು ದೇಶವನ್ನು ಮುನ್ನೆಡೆಸಲಿದ್ದಾರೆ

-ಜೆಪಿ ನಡ್ಡಾ ಬಿಜೆಪಿ ಅಧ್ಯಕ್ಷ



140 ಕೋಟಿ ದೇಶದ ಜನರ ಆಶಯ ಈಡೇರಲಿದೆ .ಕಾಶ್ಮೀರದಿಂದ ಕನ್ಯಾಕುಮಾರಿ ಈಶಾನ್ಯ ಭಾಗದಿಂದ ಪಶ್ಚಿಮ ಭಾಗದವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಹತ್ತು ವರ್ಷದಲ್ಲಿ ಹಿಂದೆಂದೂ ಕಂಡು ಕೇಳರಿಯದ ಅಭಿವೃದ್ಧಿಕಾರ್ಯ ಕೈಗೊಂಡಿದ್ದಾರೆ

-ಅಮಿತ್ ಶಾ, ಮಾಜಿ ಗೃಹ ಸಚಿವ



3 ತಿಂಗಳ ಪ್ರಚಾರದಲ್ಲಿ ನರೇಂದ್ರ ಮೋದಿ ಅವರು ಒಂದು ದಿನವೂ ವಿಶ್ರಾಂತಿ ಪಡೆಯದೆ ಪ್ರಚಾರ ನಡೆಸಿದ್ದಾರೆ. ಕಳೆದ ಹತ್ತು ವರ್ಷದಲ್ಲಿ ಭಾರತದ ಆರ್ಥಿಕತೆ 5ನೇ ಸ್ಥಾನಕ್ಕೆ ಏರಿದ್ದು ಪ್ರಧಾನಿ ನರೇಂದ್ರ ಮೋದಿ ಅವರ ಮೂರನೇ ಅವಧಿಯಲ್ಲಿ 3ನೇ ಸ್ಥಾನಕ್ಕೆ ಏರಲಿದೆ.

- ಚಂದ್ರಬಾಬು ನಾಯ್ಡು, ಟಿಡಿಪಿ ಮುಖ್ಯಸ್ಥ



ಮೋದಿ ದೇಶದ ಸೇವೆ ಮಾಡಿದ್ದಾರೆ, ಮುಂದಿನ ಅವಧಿಯಲ್ಲಿ ಏನು ಬಾಕಿ ಉಳಿದಿದೆ ಅದನ್ನು ಮಾಡಲಿದ್ದಾರೆ. ಅಲ್ಲಿ ಇಲ್ಲಿ ವಿರೋಧ ಪಕ್ಷದವರು ಗೆದ್ದಿದ್ದಾರೆ ಮುಂದಿನ ಬಾರಿ ಎಲ್ಲಾರೂ ಸೋಲಲಿದ್ದಾರೆ. ಮೋದಿ ಅವರಿಗೆ ಈಗ ಮತ್ತೊಂದು ಅವಕಾಶ ಸಿಕ್ಕಿದೆ ಅವರಿಗೆ ನಮ್ಮ ಬೆಂಬಲವಿದೆ.

-ನಿತೀಶ್ ಕುಮಾರ್ , ಜೆಡಿಯು ಮುಖ್ಯಸ್ಥ

## ನರೇಂದ್ರ ಮೋದಿ ಕ್ಯಾಬಿನೆಟ್‌ನಲ್ಲಿ ಕುಮಾರಸ್ವಾಮಿ ಮಂತ್ರಿ ಸ್ಥಾನ

• ಉದಯವಾಹಿನಿ, ಬೆಂಗಳೂರು

### ನೀರಾವರಿ ವಿಷಯದಲ್ಲಿ ನ್ಯಾಯ



ದೆಹಲಿಗೆ ಹೋಗಿ ಸಚಿವನಾಗುವುದಕ್ಕಿಂತ ನಾಡಿನ ಜನತೆಯ ಸಮಸ್ಯೆಗೆ ಪರಿಹಾರ ನೀಡಬೇಕು. ನೀರಾವರಿ ವಿಷಯದಲ್ಲಿ ನ್ಯಾಯ ಪಡೆಯಬೇಕು. ಮಂತ್ರಿ ಸ್ಥಾನ ಅನಂತರದ ಮಾತು ಎಂದು ಮಾಜಿ ಮುಖ್ಯಮಂತ್ರಿ ಹೆಚ್ ಡಿ ಕುಮಾರಸ್ವಾಮಿ ಹೇಳಿದರು.ಈ ಕುರಿತು ಮಾಧ್ಯಮಗಳ ಜೊತೆಗಳ ಮಾತನಾಡಿದ ಅವರು, ನನ್ನ ಕಡೆಯಿಂದ ಕೇಂದ್ರಕ್ಕೆ ಯಾವ ಮುಜುಗರವೂ ಇರುವುದಿಲ್ಲ. ಮೈತ್ರಿ ಧರ್ಮ ಪಾಲನೆ ಮಾಡುತ್ತೇವೆ. ರಾಜ್ಯದ ಎಲ್ಲಾ ಸಂಸದರ ಜತೆ ಒಟ್ಟಾಗಿ ಕೆಲಸ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತೇವೆ ಎಂದು ಕುಮಾರಸ್ವಾಮಿ ಹೇಳಿದರು. ಚನ್ನಪಟ್ಟಣ ಉಪ ಚುನಾವಣೆ ವಿಚಾರವಾಗಿ ಮಾತನಾಡಿ, ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಗೆ ಇನ್ನೂ ಸಮಯಾವಕಾಶವಿದೆ. ಆರು ತಿಂಗಳು ಸಮಯವಿದೆ. ಈ ಬಗ್ಗೆ ನಾನು ಮತ್ತು ಸಿ.ಪಿ.ಯೋಗೇಶ್ವರ್ ಕುಳಿತು ಮಾತನಾಡಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು. ಶಿಕ್ಷಕರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಾದ ಎಸ್ ಎಲ್ ಬೋಜೇಗೌಡರು ಮತ್ತು ಕೆ.ವಿವೇಕಾನಂದ ಅವರು ದೊಡ್ಡ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಜಯ ಗಳಿಸಿರುವುದಕ್ಕೆ ಕುಮಾರಸ್ವಾಮಿ ಅವರು ಸಂತಸ ವ್ಯಕ್ತಪಡಿಸಿದರು.

## ಬಿಜೆಪಿಯವರಲ್ಲಿ ಬರೀ ಸೇಡು..ದ್ವೇಷ ತುಂಬಿದೆ


• ಉದಯವಾಹಿನಿ, ಬೆಂಗಳೂರು

ಬೇಕು ಅಂತಲೇ ರಾಹುಲ್ ಗಾಂಧಿ ಅವರನ್ನು ಬಿಜೆಪಿಯವರು ಟಾರ್ಗೆಟ್ ಮಾಡಿದ್ದಾರೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ವಾಗ್ದಾಳಿ ನಡೆಸಿದರು. ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಬಿಜೆಪಿಯವರಲ್ಲಿ ಬರೀ ಸೇಡು..ದ್ವೇಷ ತುಂಬಿದೆ.

ಬಿಜೆಪಿ ವಿರುದ್ಧ ನೀಡಿರುವ ಜಾಹೀರಾತು ಸಂಬಂಧ ಅದರಲ್ಲಿ ರಾಹುಲ್ ಗಾಂಧಿ ಪಾತ್ರವೇನಿದೆ ಈ ರೀತಿಯ ಅಪಪ್ರಚಾರದ ಮಾಡಿರುವ ಬಿಜೆಪಿಯವರ ಅನೇಕ ಪ್ರಕರಣಗಳ ಪಟ್ಟಿ ನಮ್ಮ ಬಳಿ ಇವೆ. ಸಮಯ ಬಂದಾಗ ಹೊರಗಿಡುತ್ತೇವೆ ಎಂದು ಕಿಡಿ ಕಾರಿದರು. ಇನ್ನು ಇಂದು ಕೋರ್ಟ್‌ಗೆ ವಿಚಾರಣೆ ಹಾಜರಾದ ಸಂಸದ ರಾಹುಲ್ ಗಾಂಧಿ ಅವರು ಬಳಿಕ ನೂತನ ಸಂಸದರನ್ನು ಭೇಟಿಯಾಗಿ ಅಭಿನಂದಿಸಿದರು. ಮುಂದೆ ಯಾವ ರೀತಿ ಕೆಲಸ ಮಾಡಬೇಕು. ಕೇಂದ್ರದಿಂದ ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ಹೋರಾಡಲು ಸಿದ್ಧತೆ ಮಾಡಿ ಎಂದು ಸಲಹೆ ನೀಡಿದ್ದಾರೆಂದು ಡಿಕೆಶಿ ಮಾಹಿತಿ ನೀಡಿದರು.

## ಹಗರಣ ಮುಚ್ಚಿಹಾಕುವ ಯತ್ನವೇ? ಸಿಎಂ ರಾಜೀನಾಮೆಯೇ?

• ಉದಯವಾಹಿನಿ, ಬೆಂಗಳೂರು



ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಅವ್ಯವಹಾರ ಹಗರಣವನ್ನು ಮುಚ್ಚಿಹಾಕಲು ಕೆಪಿಸಿಸಿ ಕಚೇರಿಯಲ್ಲಿ ಸಭೆ ನಡೆಸಲು ರಾಹುಲ್ ಗಾಂಧಿಯವರು ಬಂದಿದ್ದಾರಾ? ಅಥವಾ ಮುಖ್ಯಮಂತ್ರಿಯವರ ರಾಜೀನಾಮೆ ಪಡೆಯಲು ಸಭೆ ಕರೆದಿದ್ದಾರಾ ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಅವರು ಪ್ರಶ್ನಿಸಿದರು.

ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ದಲಿತರ ಹಣವನ್ನು ಲೂಟಿ ಹೊಡೆದ ಸರಕಾರವಿದು. ನೀವು ಈ ಸರಕಾರದ ರಾಜೀನಾಮೆ ಪಡೆಯಲು ಬಂದಿದ್ದೀರಾ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಯವರನ್ನು ಕೇಳಿದರು. ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ರಾಜೀನಾಮೆಯೇ? ಪಕ್ಷದಿಂದ ಉಚ್ಚಾಟಿಸುವಿರಾ? ಅವರನ್ನು ಬಂಧಿಸುವಿರಾ? ಸಾಕ್ಷಿ ನಾಶ ಮಾಡುವ ಬಗ್ಗೆ ಮಹತ್ವದ ಸಭೆ ನಡೆಸಿದ್ದ ಸಚಿವ ಶರಣಪ್ರಕಾಶ್ ಪಾಟೀಲರನ್ನು ಬಂಧಿಸುವಿರಾ? ಅವರ ಉಚ್ಚಾಟನೆ ಮಾಡುವಿರಾ ಎಂದು ಸರಣಿ ಪ್ರಶ್ನೆಗಳನ್ನು ಮುಂದಿಟ್ಟರು. ಹಗರಣರಡಿ ದೊಡ್ಡ ಜಾಲ ಇದ್ದಂತಿದೆ. ಎಲ್ಲಾರೂ ಅನುಕೂಲ ಪಡೆದುಕೊಂಡಂತೆ ಕಾಣುತ್ತಿದೆ. ಹಾಗಾಗಿ ಎಲ್ಲಾ ಸಂದೇಹಗಳಿಗೆ ಉತ್ತರ ಕೊಟ್ಟು ಕ್ರಮ ವಹಿಸಬೇಕಿದೆ.

ಕರ್ಮಕಾಂಡ ಮಾಡಿ ಭಂಡತನದಲ್ಲಿ ಏನೂ ಉತ್ತರ ಕೊಡದೆ ನಾಗೇಂದ್ರ ಅವರ ರಾಜೀನಾಮೆಯನ್ನು ಅತ್ಯಂತ ಕಷ್ಟಪಟ್ಟು ಪಡೆದಿದ್ದಾರೆ ಎಂದು ಟೀಕಿಸಿದರು. ಅವರ ಬಂಧನ ಆಗಬೇಕಿತ್ತು. ಬಂಧಿಸುವ ಕಾರ್ಯವನ್ನು ಸಿಬಿಐನವರಿಗೆ ಬಿಡಿ ಎಂದು ವ್ಯಂಗ್ಯವಾಗಿ ತಿಳಿಸಿದರು.

### ಬಹುಕೋಟಿ ಹಗರಣ.. ಸರ್ಕಾರದ ಮತ್ತೆರಡು ವಿಕೆಟ್ ಪತನ ಸಾಧ್ಯತೆ!

ಈ ಹಗರಣದಲ್ಲಿ ಸಚಿವ ಶರಣಪ್ರಕಾಶ್ ಪಾಟೀಲ್ ಮತ್ತು ಬಸವನಗೌಡ ದದ್ದಲ್ ಇಬ್ಬರೂ ಪಾಲು ಇದೆ ಎಂದು ಚಲುವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ಪ್ರಕರಣದ 8ನೇ ಆರೋಪಿ ಅಕೌಂಟೆಂಟ್ ಪರಶುರಾಮ್ ಕೋರ್ಟಿಗೆ ಅಫಿಡವಿಟ್ ಹಾಕಿದ್ದಾರೆ. ಇದರಲ್ಲಿ ಮೇ.25ರಂದು ವಾಲ್ಮೀಕಿ ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ಹಾಗೂ ಸಚಿವ ಶರಣಪ್ರಕಾಶ್ ಪಾಟೀಲ್ ಸಭೆ ಮಾಡಿದ್ದಾರೆ.. ಸಭೆಯು ಶರಣಪ್ರಕಾಶ್ ಪಾಟೀಲ್ ಕಚೇರಿಯಲ್ಲಿ ನಡೆದಿರುತ್ತದೆ ಎಂದು ಅಫಿಡವಿಟ್ಟಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೇ ಆ ಸಭೆಯ ಸಿಸಿಟಿವಿ ಸಾಕ್ಷ್ಯಕಲೆ ಹಾಕುವಂತೆ ಆರೋಪಿ ಕೋರ್ಟಿಗೆ ಹೇಳಿದ್ದಾರೆ ಎನ್ನಲಾಗಿದೆ.

### ಸರ್ಕಾರ ಸಾಕ್ಷ್ಯನಾಶ ಮಾಡುವ ಪ್ರಯತ್ನ

## ಸರ್ಕಾರಿ ನೌಕರರಿಗೆ ಸಿಎಂ, ಡಿಸಿಎಂ ಮತ್ತೊಂದು ಭರವಸೆ

### ಕರ್ನಾಟಕದ ಸರ್ಕಾರಿ ನೌಕರರು ಲೋಕಸಭೆ ಚುನಾವಣೆ ನೀತಿ ಸಂಹಿತೆ ವಾಪಸ್ ಪಡೆದ ಹಿನ್ನಲೆಯಲ್ಲಿ ಸಂತಸ

• ಉದಯವಾಹಿನಿ, ಬೆಂಗಳೂರು

ಲೋಕಸಭೆ ಚುನಾವಣೆ 2024ರ ಫಲಿತಾಂಶ ಘೋಷಣೆಯಾಗಿದೆ. ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ಹಿನ್ನಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಲೋಕಸಭೆ ಚುನಾವಣೆ ನೀತಿ ಸಂಹಿತೆಯನ್ನು ಗುರುವಾರ ವಾಪಸ್ ಪಡೆದಿದೆ. ಕರ್ನಾಟಕದ ಸರ್ಕಾರಿ ನೌಕರರು ಲೋಕಸಭೆ ಚುನಾವಣೆ ನೀತಿ ಸಂಹಿತೆ ವಾಪಸ್ ಪಡೆದ ಹಿನ್ನಲೆಯಲ್ಲಿ ಸಂತಸಗೊಂಡಿದ್ದಾರೆ.

ರಾಜ್ಯದ ಸರ್ಕಾರಿ ನೌಕರರು ಕೆ. ಸುಧಾಕರ್ ರಾವ್ ನೇತೃತ್ವದ ರಾಜ್ಯ 7ನೇ ವೇತನ ಆಯೋಗದ ವರದಿಯನ್ನು ಸರ್ಕಾರ ಯಾವಾಗ ಜಾರಿಗೊಳಿಸಲಾಗುತ್ತದೆ? ಎಂದು ಕಾದು ಕುಳಿತಿದ್ದಾರೆ. 7ನೇ ವೇತನ ಆಯೋಗದ ವರದಿ ಜಾರಿಗೆ ಮಾರ್ಚ್ ತಿಂಗಳಿನಿಂದ ಲೋಕಸಭೆ ಚುನಾವಣೆ ನೀತಿ ಸಂಹಿತೆ ಅಡ್ಡಿಯಾಗಿತ್ತು. ಈಗ ನೀತಿ ಸಂಹಿತೆ ವಾಪಸ್ ಪಡೆಯಲಾಗಿದ್ದು, ಸರ್ಕಾರಿ ನೌಕರರಲ್ಲಿ ಹೊಸ ಭರವಸೆ ಮೂಡಿದೆ. ಈಗಾಗಲೇ ರಾಜ್ಯ ಸರ್ಕಾರಿ ನೌಕರರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಭೇಟಿಯಾಗಿದೆ. ಭರವಸೆಯನ್ನು ನೀಡಿದ ಉಭಯ ನಾಯಕರು: ರಾಜ್ಯ ಸರ್ಕಾರಿ ನೌಕರ ಸಂಘದ ರಾಜ್ಯಾಧ್ಯಕ್ಷ ಸಿ. ಎಸ್. ಷಡಾಕ್ಷರಿ ಮತ್ತು ರಾಜ್ಯ ಸಂಘದ ಪದಾಧಿಕಾರಿಗಳು ದಿನಾಂಕ 3/6/2024ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಭೇಟಿ ಮಾಡಿದರು. 7ನೇ ವೇತನ ಆಯೋಗದ ವರದಿ ಅನುಷ್ಠಾನಗೊಳಿಸುವಂತೆ ಮನವಿ ಮಾಡಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಮನವಿಯನ್ನು ಆಲಿಸಿದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳು ನೀತಿ ಸಂಹಿತೆ ಮುಕ್ತಾಯವಾದ ನಂತರ 7ನೇ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಭರವಸೆಯನ್ನು ನಿಯೋಗಕ್ಕೆ ನೀಡಿದ್ದಾರೆ.

### ನೌಕರರಲ್ಲಿ ಹೊಸ ಭರವಸೆ

ಕರ್ನಾಟಕದಲ್ಲಿ ಲೋಕಸಭೆ ಚುನಾವಣೆ ನೀತಿ ಸಂಹಿತೆ ವಾಪಸ್ ಪಡೆಯಲಾಗಿದೆ. ಆದರೆ ಕರ್ನಾಟಕ ವಿಧಾನಸಭೆಯಿಂದ ವಿಧಾನ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲು ಚುನಾವಣೆ ಘೋಷಣೆಯಾಗಿತ್ತು. ಗುರುವಾರ ಈ ಚುನಾವಣೆಗೆ 11 ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದಾರೆ. ಅಭ್ಯರ್ಥಿಗಳು ಅವಿರೋಧ ಆಯ್ಕೆಯಾದ ಕಾರಣ ಜೂನ್ 13ರಂದು ನಡೆಯಬೇಕಿದ್ದ ಚುನಾವಣೆ ನಡೆಯುವುದಿಲ್ಲ. ಆದರೆ ಜೂನ್ 16ರ ತನಕ ರಾಜ್ಯದಲ್ಲಿ ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಆ ಬಳಿಕ ಸರ್ಕಾರ 7ನೇ ವೇತನ ಆಯೋಗದ ವರದಿ ಜಾರಿ ಕುರಿತು ತೀರ್ಮಾನ ಕೈಗೊಳ್ಳುವ ನಿರೀಕ್ಷೆ ಇದೆ. ಮಾರ್ಚ್ 16ರಂದು ಕೆ. ಸುಧಾಕರ್ ರಾವ್ ನೇತೃತ್ವದ ರಾಜ್ಯ 7ನೇ ವೇತನ ಆಯೋಗದ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ವರದಿಯನ್ನು ನೀಡಿದೆ. ಆದರೆ ಅಂದು ಮಧ್ಯಾಹ್ನದಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವರದಿ ಬಗ್ಗೆ ಯಾವುದೇ ಕ್ರಮ ಇನ್ನೂ ಆಗಿಲ್ಲ.

ವರದಿ ಸ್ವೀಕಾರ ಮಾಡಿದ್ದ ಮುಖ್ಯಮಂತ್ರಿಗಳು, ರಾಜ್ಯದ 7ನೇ ವೇತನ ಆಯೋಗವು ಇಂದು ವರದಿಯನ್ನು ಸಲ್ಲಿಸಿದ್ದು ಮೂಲ ವೇತನದ ಶೇಕಡ 27.5 ರಷ್ಟು ಹೆಚ್ಚಳ ಮಾಡಲು ಶಿಫಾರಸು ಮಾಡಿದೆ. ವರದಿಯನ್ನು ಪರಿಶೀಲಿಸಿ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಲಿದೆ ಎಂದು ಭರವಸೆ ನೀಡಿದ್ದಾರೆ.



### ಸಲಹೆಗಳ ಆಧಾರದಲ್ಲಿ ಸರ್ಕಾರ ತೀರ್ಮಾನ

ವೇತನ ಆಯೋಗದ ಅವಧಿಯನ್ನು ಮೂರು ತಿಂಗಳು ವಿಸ್ತರಿಸಲಾಗಿತ್ತು. ಈ ಅವಧಿಯು ಮಾರ್ಚ್ 15ರಂದು ಮುಕ್ತಾಯಗೊಂಡಿದೆ. ನಿನ್ನೆ ನಾನು ಮೈಸೂರಿನಲ್ಲಿದ್ದ ಕಾರಣ ವರದಿ ಸ್ವೀಕರಿಸಲು ಸಾಧ್ಯವಾಗಿರಲಿಲ್ಲ. ಅದಕ್ಕಾಗಿ ಇಂದು ವರದಿಯನ್ನು ಸ್ವೀಕರಿಸಲಾಗಿದೆ ಎಂದು ಸಿದ್ದರಾಮಯ್ಯ ಮಾರ್ಚ್ 16ರಂದು ಟ್ವೀಟ್ ಮಾಡಿದ್ದರು. ವರದಿಯಲ್ಲಿ ಕನಿಷ್ಠ ಮೂಲ ವೇತನವನ್ನು ರೂ.17,000 ದಿಂದ ರೂ. 27,000ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಲಾಗಿದೆ. ಇದರೊಂದಿಗೆ ಇನ್ನೂ ಅನೇಕ ಶಿಫಾರಸುಗಳಿದ್ದು ವರದಿಯನ್ನು ಆರ್ಥಿಕ ಇಲಾಖೆಗೆ ನೀಡಲಾಗಿದೆ. ಆರ್ಥಿಕ ಇಲಾಖೆಯು ವರದಿಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ನಂತರ ನೀಡುವ ಸಲಹೆಗಳ ಆಧಾರದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ತಿಳಿಸಿದ್ದರು.

| ಈ ದಿನದ ದರ | | | | |
|---|---|---|---|---|
| ಪೆಟ್ರೋಲ್: 99.84 ₹/L | ಡೀಸೆಲ್ : 85.93 ₹/L | ಬಂಗಾರ: ₹7,265/Gram(24ct) | ₹6,660/Gram(22ct) | ಬೆಳ್ಳಿ: ₹91.90/Gram |



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ತಳೆದ ಬಹುತ್ವಂ ಪುಸಿ ನಿನಗಂತು

ನಿಜಗುಣರ ಪರಮಾರ್ಥ ಗೀತೆಯ ಮಾತು. ಅಹಂಕಾರ ಮನಸ್ಸು ಆಕಾಶ ವಾಯು ಮುಂತಾದವು ಸ್ವಾಭಾವಿಕವಾಗಿ ಒಂದೇ. ಆದಾಗ್ಯೂ ಅನೇಕವಾಗಿ ತೋರುತ್ತವೆ. ಉದಾಹರಣೆಗೆ ಮನೆಯಲ್ಲಿರುವ ಆಕಾಶ, ಮಠದಲ್ಲಿರುವ ಆಕಾಶ, ಬಿಂದಿಗೆಯಲ್ಲಿರುವ ಆಕಾಶ ದೇಹದೊಳಗಿನ ಆಕಾಶ ದೇಹದ ಹೊರಗಿನ ಆಕಾಶ ಬೇರೆ ಬೇರೆಯಾಗಿ ಕಂಡರೂ ಆಕಾಶ ಒಂದೇ ಹೊರತು ಬೇರೆ ಬೇರೆ ಇಲ್ಲ. ಹಾಗೆಯೇ ತೋರುವ ಈ ಶರೀರಗಳು ಅನೇಕವಾಗಿ ಕಾಣುತ್ತಿವೆ. ಈ ಜಲ ಆ ಜಲ ಗಂಗೆ ಯಮುನೆ, ಈ ಅಗ್ನಿ ಆ ಅಗ್ನಿ ಸಣ್ಣ ದೊಡ್ಡ ಅಗ್ನಿ, ಈ ಮನೆಯ ಆ ಮನೆಯ ಅಗ್ನಿ, ಈ ವಾಯು ಆ ವಾಯು, ಬಿರುಗಾಳಿ ಸುಳಿಗಾಳಿ ಅನೇಕ ಅನೇಕ. ಒಂದೊಂದು ದೇಹದ ಬಗೆ ಬಗೆಯ ಅಹಂಕಾರ, ಬಗೆ ಬಗೆಯ ಮನಸ್ಸು. ಆದರೆ ವಾಸ್ತವದಲ್ಲಿ ಇವೆಲ್ಲ ಒಂದೇ. ಅದರಂತೆ ನಿನಗೆ ಅನೇಕತ್ವ ತೋರಿದೆ. ಈ ಭೂಮಿ ಆ ಭೂಮಿ ಕಪ್ಪು ಎರೆ ಮರಡಿ ಕೆಂಪು ಬಗೆ ಬಗೆಯ ಭೂಮಿ ಎಂಬ ಭೇದ ತೋರಿದರೂ ಭೂಮಿ ಒಂದೇ ಆಗಿರುವಂತೆ ನೀನು ಒಬ್ಬನೇ ಎಲ್ಲ ಜೀವಾತ್ಮನೂ ನೀನೇ. ನಿನ್ನಲ್ಲಿ ತೋರುವ ಬಗೆ ಬಗೆತನ ಎಂಬುದು ಸುಳ್ಳು, ಶಾಶ್ವತವಲ್ಲ.

# ರಾಜ್ಯದಲ್ಲಿ ಸೌರ ಪಂಪ್‌ಸೆಟ್‌ಗಾಗಿ 18 ಲಕ್ಷ ರೈತರ ನೋಂದಣಿ

■ ಇಂಧನ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಹೇಳಿಕೆ ■ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ನೀರಾವರಿಗೆ ಸಾಂಪ್ರದಾಯಿಕ ಇಂಧನದ ಬದಲಿಗೆ ಸೌರಶಕ್ತಿ ಬಳಸುವ ಮೂಲಕ ಇಂಧನ ಸ್ವಾವಲಂಬನೆ ಸಾಧಿಸುವ ಕುಸುಮ್ ಯೋಜನೆಯಡಿ ಸೌರ ಪಂಪ್‌ಸೆಟ್ ಪಡೆಯಲು ರಾಜ್ಯದ 18 ಲಕ್ಷ ರೈತರು ನೋಂದಣಿ ಮಾಡಿದ್ದಾರೆ ಎಂದು ಇಂಧನ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಹೇಳಿದ್ದಾರೆ. ಪಿಎಂ ಕುಸುಮ್ ಯೋಜನೆಯ ಸಮರ್ಪಕ ಅನುಷ್ಠಾನ ಕುರಿತು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಧಾನಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ ಮಹಾಭಿಯಾನ್ (ಕುಸುಮ್) ಕುರಿತ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ನೀರಾವರಿಗೆ ಸಾಂಪ್ರದಾಯಿಕ ವಿದ್ಯುತ್ ಅವಲಂಬನೆಯನ್ನು ಕಡಿಮೆ ಮಾಡಿ, ಸೌರಶಕ್ತಿಯ ಬಳಕೆ ಮೂಲಕ ರೈತರು ಸ್ವಾವಲಂಬನೆ ಸಾಧಿಸಲು ಕುಸುಮ್ ಯೋಜನೆ ರೂಪಿಸಲಾಗಿದೆ. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ಯೋಜನೆಯ ಅನುಷ್ಠಾನದ ಹೊಣೆ ಹೊತ್ತಿದ್ದು, ರಾಜ್ಯದ ಎಲ್ಲಾ ಎಸ್ಕಾಂಗಳು ಪೂರಕವಾಗಿ ಕೆಲಸ ಮಾಡುತ್ತಿವೆ, ಎಂದರು.

ಕೃಷಿ ಕ್ಷೇತ್ರವನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ



ಉದಯವಾಹಿನಿ ಚಿತ್ರ

ಇಂಧನ ಅಭಿವೃದ್ಧಿ ನಿಗಮ

ಸೌರಶಕ್ತಿ ಬಳಕೆಯ ಉತ್ತೇಜನಕ್ಕೆ ಸರ್ಕಾರದಿಂದ ಹೆಚ್ಚಿನ ಸಹಾಯಧನ ನೀಡಲಾಗುತ್ತಿದೆ. ಜತೆಗೆ, ಕುಸುಮ್ ಬಿ ಯೋಜನೆಯಡಿ ರೈತರಿಗೆ ಸೌರ ಫಲಕಗಳು, ಸಬ್‌ಮರ್ಸಿಬಲ್/ಸರ್ಫೇಸ್ ಡಿಸಿ ಪಂಪ್‌ಗಳು, ಮೌಂಟಿಂಗ್ ಸ್ಟ್ರಕ್ಚರ್, ಪ್ಯಾನಲ್ ಬೋರ್ಡ್, ಪೈಪ್ ಮತ್ತು ಕೇಬಲ್ ಸರಬರಾಜು ಮಾಡಲಾಗುತ್ತದೆ. ಸೌರ ಪಂಪ್ ಸೆಟ್ ಬಳಕೆಯಿಂದ 8 ಗಂಟೆಗಳ ಕಾಲ ಹಗಲಿನ ವೇಳೆಯಲ್ಲಿ ವಿದ್ಯುತ್ ಪೂರೈಕೆಯಾಗಲಿದೆ. ಇದರಿಂದ ರಾತ್ರಿ ವೇಳೆ ರೈತರು ಕೃಷಿ ಚಟುವಟಿಕೆಗಳಿಗೆ ಪರದಾಡಬೇಕಿಲ್ಲ, ಎಂದು ವಿವರಿಸಿದರು. ಕುಸುಮ್ ಯೋಜನೆಯನ್ನು ಅನುಷ್ಠಾನಗೊಳಿಸಿರುವ ರಾಜ್ಯಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ತಮ್ಮ ಅನುಭವ ಹಂಚಿಕೊಂಡರು. ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ

> **ಕುಸುಮ್ ಸಿ ಯೋಜನೆಯಡಿ ಫೀಡರ್ ಮಟ್ಟದ ಸೌರೀಕರಣ ಮೂಲಕ ರೈತರ ಪಂಪ್ ಸೆಟ್‌ಗಳಿಗೆ ಸೌರ ಶಕ್ತಿಯಿಂದ ವಿದ್ಯುತ್ ಸರಬರಾಜು ಮಾಡಲಾಗುವುದು. ಪ್ರತ್ಯೇಕ ಸೋಲಾರ್ ಪಂಪ್‌ಗಳ ಬದಲಿಗೆ ಕೃಷಿ ಫೀಡರ್‌ಗಳನ್ನು ಸೌರೀಕರಣಗೊಳಿಸುವ ಯೋಜನೆ ಇದಾಗಿದೆ. ಸ್ವಂತ ಬಳಕೆಗಷ್ಟೇ ಅಲ್ಲದೇ, ಸೌರ ವಿದ್ಯುತ್ ಮಾರಾಟ ಮಾಡುವ ಮೂಲಕ ರೈತರು ಹೆಚ್ಚುವರಿ ಆದಾಯವನ್ನು ಪಡೆಯಬಹುದು.**

ಗೌರವ್ ಗುಪ್ತಾ, ಐಆರ್‌ಇಡಿಎ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಕುಮಾರ್ ದಾಸ್, ಎಂಎನ್‌ಆರ್‌ಇ ಜಂಟಿ ಕಾರ್ಯದರ್ಶಿ ದಿನೇಶ್ ಜಗದಾಳೆ, ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮೊಹಮದ್ ರೋಶನ್, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸೌರಶಕ್ತಿಯ ಬಳಕೆ ಮೂಲಕ ರೈತರು ಸ್ವಾವಲಂಬನೆ ಸಾಧಿಸಲು ಕುಸುಮ್ ಈ ಯೋಜನೆ ರೂಪಿಸಲಾಗಿದೆ.

ಕುಸುಮ್ ಬಿ ಯೋಜನೆಯಡಿ, ರೈತರಿಗೆ ಸೌರ ಚಾಲಿತ ಪಂಪ್‌ಸೆಟ್‌ಗಳ ಬಳಕೆಗೆ ಒತ್ತು ನೀಡಲಾಗುತ್ತಿದೆ. ಕೃಷಿ ಕ್ಷೇತ್ರವನ್ನು

> **ಕುಸುಮ್ ಬಿ ಯೋಜನೆಯಡಿ ಜಾಲ ಮುಕ್ತ ಸೌರ ಕೃಷಿ ಪಂಪ್‌ಸೆಟ್ ಅಳವಡಿಸಲು ಒತ್ತು ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ರಾಜ್ಯ ಸರ್ಕಾರದ ಸಬ್ಸಿಡಿ ಪಾಲನ್ನು ಶೇ.30ರಿಂದ 50ಕ್ಕೆ ಏರಿಸಿದೆ. ಇಂಧನ ಸಚಿವ ಕೆ.ಜೆ ಜಾರ್ಜ್ ಅವರ ಮಾರ್ಗದರ್ಶನದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು, ಈವರೆಗೆ ರಾಜ್ಯದ 18 ಲಕ್ಷ ರೈತರು ಸೌರಪಂಪ್ ಸೆಟ್ ಪಡೆಯಲು 'ಸೌರಮಿತ್ರ' ವೆಬ್‌ಸೈಟ್ / ಆಯಪ್ ನಲ್ಲಿ ನೋಂದಣಿ ಮಾಡಿದ್ದಾರೆ, ಎಂದು ಗುಪ್ತಾ ತಿಳಿಸಿದರು.**

ಲಾಭದಾಯಕವಾಗಿಸಲು, ಸೌರಶಕ್ತಿ ಬಳಕೆಯ ಉತ್ತೇಜನಕ್ಕೆ ಸರ್ಕಾರದಿಂದ ಹೆಚ್ಚಿನ ಸಹಾಯಧನ ನೀಡಲಾಗುತ್ತಿದೆ. ಕೃಷಿ ಭೂಮಿಯಲ್ಲಿ ಅಳವಡಿಸಲಾಗುವ ಸೋಲಾರ್ ಪಂಪ್‌ಗಳನ್ನು 5 ವರ್ಷಗಳ ಕಾಲ ಪೂರೈಕೆದಾರರೇ ಉಚಿತವಾಗಿ ನಿರ್ವಹಣೆ ಮಾಡಲಿದ್ದಾರೆ. ಐಪಿ ಸೆಟ್‌ಗಳಿಗೆ ಸೌರವಿದ್ಯುತ್ ಮೂಲದಿಂದ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಥಳೀಯವಾಗಿ ವಿದ್ಯುತ್ ಉತ್ಪಾದನೆ ಹೆಚ್ಚುವುದರಿಂದ ರೈತರ ಅಗತ್ಯಕ್ಕೆ ತಕ್ಕಂತೆ ಹಗಲು ವಿದ್ಯುತ್ ಪೂರೈಸಲು ಸಾಧ್ಯವಾಗಲಿದೆ.

## ಬೈಕ್‌ಗೆ- ವಾಟರ್ ಟ್ಯಾಂಕರ್ ಡಿಕ್ಕಿ

• ಉದಯವಾಹಿನಿ, ಬೆಂಗಳೂರು

ವೇಗವಾಗಿ ಬಂದ ವಾಟರ್ ಟ್ಯಾಂಕರ್, ಬೈಕ್‌ಗೆ ಡಿಕ್ಕಿಯಾಗಿದ್ದರಿಂದ ಕಾಲೇಜಿಗೆ ಹೊರಟಿದ್ದ ಅಕ್ಕ-ತಮ್ಮ ಗಂಭೀರವಾಗಿ ಗಾಯಗೊಂಡು ಸಾವನ್ನಪ್ಪಿರುವ ಘಟನೆ ನಗರದ ಹೊರವಲಯದ ಎಲೆಕ್ಟ್ರಾನಿಕ್ ಸಿಟಿ ಸಮೀಪದ ದೊಡ್ಡನಾಗಮಂಗಲದಲ್ಲಿ ನಡೆದಿದೆ. ದೊಡ್ಡ ನಾಗಮಂಗಲದ ಕೆಂಪೇಗೌಡ ಬಡಾವಣೆ ನಿವಾಸಿಗಳಾದ ಮಧುಮಿತ (20), ರಂಜನ್(18) ಮೃತರು. ಬೆಂಗಳೂರಿನ ಎಸ್‌ಎಸ್‌ಎಂಆರ್‌ವಿ ಕಾಲೇಜಿನಲ್ಲಿ ಮಧುಮಿತ ವ್ಯಾಸಂಗ ಮಾಡುತ್ತಿದ್ದಳು. ಮೊದಲ ದಿನ ಅಕ್ಕನನ್ನು ಕಾಲೇಜಿಗೆ ಬಿಟ್ಟು ಬರಲು ತಮ್ಮ ಹೋಗುತ್ತಿದ್ದ. ಈ ವೇಳೆ ವಾಟರ್ ಟ್ಯಾಂಕರ್ ಇಬ್ಬರನ್ನೂ ಬಲಿ ಪಡೆದಿದೆ. ವೇಗವಾಗಿ ಬಂದ ವಾಟರ್ ಟ್ಯಾಂಕರ್ ಬೈಕ್ ಮಿರರ್‌ಗೆ ಡಿಕ್ಕಿಯಾಗುತ್ತಲೇ ಅಕ್ಕ-ತಮ್ಮ ಕೆಳಕ್ಕೆ ಬಿದ್ದಿದ್ದಾರೆ. ಈ ವೇಳೆ ಅವರ ತಲೆ ಮೇಲೆ ಟ್ಯಾಂಕರ್ ಹಿಂಬದಿ ಚಕ್ರ ಹರಿದು ದುರಂತ ಸಂಭವಿಸಿದೆ. ವಾಟರ್ ಟ್ಯಾಂಕರ್ ಚಾಲಕನ ಅತಿ ವೇಗ, ಅಜಾಗರೂಕತೆಯ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಉತ್ತರಕಾಶಿ ಟ್ರೆಕ್ಕಿಂಗ್ ದುರಂತ: ಸಾವು ಗೆದ್ದ ಕನ್ನಡಿಗರು ಬೆಂಗಳೂರಿಗೆ ವಾಪಸ್!

• ಉದಯವಾಹಿನಿ, ಬೆಂಗಳೂರು

ಸಾವಿನ ಕೂಪದಂತಿದ್ದ ಉತ್ತರಕಾಶಿಯ ಸಹಸ್ರತಾಲ್‌ನ ಹಿಮದ ಹೊದಿಕೆಯಿಂದ ಬಚಾವಾದ 13 ಮಂದಿ ಚಾರಣಿಗರು ಕೊನೆಗೂ ಸುರಕ್ಷಿತವಾಗಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಕಣ್ಮರೆಯಾಗಿದ್ದ ತಮ್ಮ ಕುಟುಂಬದವರಿಗಾಗಿ ಸಂಬಂಧಿಕರು, ಮಕ್ಕಳಿಗಾಗಿ ಪೋಷಕರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾತರದಿಂದ ಕಾದು ಕುಳಿತಿದ್ದರು. ತಮ್ಮವರು ಕಾಣಿಸುತ್ತಿದ್ದಂತೆಯೇ ಸಂತೋಷದ ಕಣ್ಣೀರು, ಬಿಗಿಯಾದ ಅಪ್ಪುಗೆ ಹಾಗೂ ಸುರಕ್ಷಿತವಾಗಿ ಮರಳಿದ್ದಕ್ಕಾಗಿ ಕೃತಜ್ಞತೆಯ ಭಾವನೆಗಳು ಅವರ ಮುಖದಲ್ಲಿ ಕಾಣತೊಡಗಿತು. ರಕ್ಷಣೆಗೊಳಗಾದ ಚಾರಣಿಗರನ್ನು ಹೊತ್ತ ವಿಮಾನ ಡೆಹ್ರಾಡೂನ್‌ನಿಂದ ಬೆಂಗಳೂರಿನ ಕೆಐಎಯಲ್ಲಿ ರಾತ್ರಿ 8:46 ಕ್ಕೆ ಇಳಿಯಬೇಕಿತ್ತು. ಆದರೆ, 30 ನಿಮಿಷಗಳಷ್ಟು ತಡವಾಗಿ ರಾತ್ರಿ 9:20 ಕ್ಕೆ ಬಂದಿಳಿಯಿತು. ಈ ವೇಳೆ ಕುಟುಂಬಸ್ಥರು ಹಾಗೂ ಸಂಬಂಧಿಕರು ಸಾಕಷ್ಟು ಆತಂಕಕ್ಕೊಳಗಾಗಿದ್ದರು. ರಾತ್ರಿ 10 ಗಂಟೆ ವೇಳೆ ತಮ್ಮನ್ನು ನೋಡಿದ ಕೂಡಲೇ ನಿಟ್ಟುಸಿರು ಬಿಟ್ಟರು. ಬದುಕುಳಿದವರ ಜೊತೆಗಿದ್ದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮಾತನಾಡಿ, 13 ಮಂದಿ ದೈಹಿಕವಾಗಿ ಆರೋಗ್ಯವಾಗಿದ್ದರೂ ಮಾನಸಿಕವಾಗಿ ಆಘಾತಕ್ಕೊಳಗಾಗಿದ್ದಾರೆ ಎಂದು ಹೇಳಿದರು.

## 2 ಕ್ಷೇತ್ರಗಳಲ್ಲಿ ಗೆದ್ದು ಬೀಗಿದ ಕಾಂಗ್ರೇಸ್ ಕಲಿಗಳು!

• ಉದಯವಾಹಿನಿ, ಬೆಂಗಳೂರು

ಪದವೀಧರರ ಕ್ಷೇತ್ರ, ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೇಸ್‌ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೇಸ್ ಅಭ್ಯರ್ಥಿ ರಾಮೋಜಿ ಗೌಡ ಗೆಲುವು ಸಾಧಿಸಿದ್ದಾರೆ, ಆಗ್ನೇಯ ಕ್ಷೇತ್ರದಲ್ಲಿಯೂ ಕೂಡಾ ಕಾಂಗ್ರೇಸ್ ಅಭ್ಯರ್ಥಿ ಡಿ.ಟಿ ಶ್ರೀನಿವಾಸ್ ಗೆಲುವಿನ ನಗೆ ಬೀರಿದ್ದಾರೆ. ರಾಮೋಜಿ ಗೌಡ 36,729 ಮತಗಳನ್ನು ಪಡೆದು ಗೆದ್ದಿದ್ದರೆ., ಬಿಜೆಪಿ ಅಭ್ಯರ್ಥಿ ಅ.ದೇವೇಗೌಡ 24,88 ಮತಗಳನ್ನು ಪಡೆದು ಸೋಲನುಭವಿಸಿದ್ದಾರೆ. ರಾಮೋಜಿ ಗೌಡ ಪ್ರಥಮ ಪ್ರಶಸ್ಯತ ಮತಗಳಲ್ಲಿಯೇ ಗೆಲುವು ಸಾಧಿಸಿದ್ದು,ಈ ಕ್ಷೇತ್ರದಲ್ಲಿ ಒಟ್ಟು 8,482 ಮತಗಳು ಅಸಿಂಧುಗೊಂಡಿವೆ ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೇಸ್‌ನ ಡಿಟಿ ಶ್ರೀನಿವಾಸ್ 8,909 ಮತಗಳಿಂದ ಗೆಲುವು ಸಾಧಿಸಿದ್ದು, ಬಿಜೆಪಿಯ ವೈ.ಎ ನಾರಾಯಣಸ್ವಾಮಿ 7,142 ಮತಗಳನ್ನು ಪಡೆದು ಸೋಲುಂಡಿದ್ದಾರೆ. ಈ ಕ್ಷೇತ್ರದಲ್ಲಿ ಒಟ್ಟು 704 ಮತಗಳು ತಿರಸ್ಕೃತಗೊಂಡಿದೆ

## ಹಮ್ ದೊ ಹಮಾರಾ ಬಾರಾ ಸಿನಿಮಾ ಪ್ರದರ್ಶನಕ್ಕೆ ನಿಷೇಧಿಸಿ ರಾಜ್ಯ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಮುಸ್ಲಿಂ ಸಮುದಾಯವನ್ನು ಅವಹೇಳನಕಾರಿ ರೀತಿಯಲ್ಲಿ ತೋರಿಸಿದ್ದಕ್ಕಾಗಿ ರಾಜ್ಯದಲ್ಲಿ ಬಾಲಿವುಡ್ ಸಿನಿಮಾ 'ಹಮ್ ದೊ ಹಮಾರಾ ಬಾರಾ' ಪ್ರದರ್ಶನಕ್ಕೆ ನಿಷೇಧಿಸಿ ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶ ಹೊರಡಿಸಲಾಗಿದೆ.ಕರ್ನಾಟಕ ಸಿನಿಮಾ ನಿಯಂತ್ರಣ ಕಾಯ್ದೆ ಅಡಿ ಸರ್ಕಾರದಿಂದ ಈ ಒಂದು ಚಿತ್ರ ಪ್ರದರ್ಶನಕ್ಕೆ ನಿಷೇಧಿಸಲಾಗಿದೆ. ಸಿನಿಮಾದಲ್ಲಿ ಮುಸ್ಲಿಂ ಧರ್ಮದ ಬಗ್ಗೆ ಅವಹೇಳನಕಾರಿ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಸಿನಿಮಾ ವಿರುದ್ಧ ಮುಸ್ಲಿಂ ಸಂಘಟನೆಗಳು ಆರೋಪ ಮಾಡಿದ್ದವು.ಮುಸ್ಲಿಂ ಸಂಘಟನೆಗಳ ಮನವಿ ಮೇರೆಗೆ ವಿವಾದಾತ್ಮಕ ಸಿನಿಮಾಗೆ ಇದೀಗ ರಾಜ್ಯ ಸರ್ಕಾರ ನಿಷೇಧಿಸಿದೆ.

## ಯುವ ಕಾಂಗ್ರೇಸ್ ಕಾರ್ಯದರ್ಶಿ ಎಸ್.ಎಂ ಜಗದೀಶ್ ಉಚ್ಚಾಟನೆ

• ಉದಯವಾಹಿನಿ, ಬೆಂಗಳೂರು

ಪಕ್ಷ ವಿರೋಧಿ ಚಟುವಟಿಕೆಯ ಹಿನ್ನಲೆಯಲ್ಲಿ ಚಿಕ್ಕಬಳ್ಳಾಪುರ ಕೆಪಿಸಿಸಿ ಕಾರ್ಯದರ್ಶಿ ಎಸ್.ಎಂ ಜಗದೀಶ್ ಅವರನ್ನು ಕಾಂಗ್ರೇಸ್ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ಈ ಸಂಬಂಧ ಕರ್ನಾಟಕ ಪ್ರದೇಶ ಕಾಂಗ್ರೇಸ್ ಶಿಸ್ತು ಪಾಲನಾ ಸಮಿತಿಯ ಅಧ್ಯಕ್ಷರಾದಂತ ಕೆ.ರೆಹಮಾನ್ ಖಾನ್ ಆದೇಶ ಹೊರಡಿಸಿದ್ದಾರೆ. ಎಸ್‌ಎಂ ಜಗದೀಶ್, ಕಾರ್ಯದರ್ಶಿ, ಪ್ರದೇಶ ಯುವ ಕಾಂಗ್ರೇಸ್ ಅವರನ್ನು 2024ರ ಲೋಕಸಭಾ ಚುನಾವಣೆಯಲ್ಲಿ ಅನ್ಯ ಪಕ್ಷದ ಅಭ್ಯರ್ಥಿಯೊಂದಿಗೆ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿರುವುದು ತಿಳಿದು ಬಂದಿದೆ ಎಂದಿದ್ದಾರೆ. ಪಕ್ಷದ ನಾಯಕರ ಬಗ್ಗೆ ಸಾರ್ವಜನಿಕವಾಗಿ ಅವಹೇಳನಕಾರಿ ಮಾತನಾಡುತ್ತಿರುವುದು ಕಂಡು ಬಂದಿದ್ದು, ತಮ್ಮ ಈ ಪಕ್ಷ ವಿರೋಧಿ ಚಟುವಟಿಕೆಗಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಕಾಂಗ್ರೇಸ್ ಪಕ್ಷದಿಂದ ಉಚ್ಚಾಟಿಸಲಾಗಿದೆ ಅಂತ ತಿಳಿಸಿದ್ದಾರೆ.

## 5 ಚಾರಣಿಗರ ಮೃತದೇಹ ಬೆಂಗಳೂರಿಗೆ ಆಗಮನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಉತ್ತರಕಾಶಿ ಟ್ರೆಕ್ಕಿಂಗ್ ದುರಂತ

ಉತ್ತರಾಖಂಡಕ್ಕೆ ಚಾರಣಕ್ಕೆ ತೆರಳಿದ್ದ ಕರ್ನಾಟಕದ 9 ಮಂದಿ ಹವಾಮಾನ ವೈಪರಿತ್ಯದ ಕಾರಣ ಹಿಮಪಾತಕ್ಕೆ ಸಿಲುಕಿ ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರ ಮೃತದೇಹಗಳು ಶುಕ್ರವಾರ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದೆ.

ಈಗಾಗಲೇ ಮೃತ ಪದ್ಮಿನಿ ಹೆಗಡೆ, ವೆಂಕಟೇಶ್ ಪ್ರಸಾದ್ ಕೆ, ಆಶಾ ಎಂಬುವವರ ಮೃತದೇಹ ಏರ್ ಪೋರ್ಟ್‌ಗೆ ಬಂದಿದ್ದು, ಕುಟುಂಬಕ್ಕೆ ಮೃತದೇಹ ಹಸ್ತಾಂತರಿಸಲಾಗಿದೆ.ಇದರ ಬೆನ್ನಲ್ಲೇ ಇದೀಗ ಮತ್ತಿಬ್ಬರ ಮೃತದೇಹವನ್ನು ರವಾನಿಸಲಾಗಿದೆ. ಇದೀಗ ಪದ್ಮನಾಭ ಕುಂದಾಪುರ ಕೃಷ್ಣಮೂರ್ತಿ, ಸಿಂಧೂ ವಾಕೇಕಾಲಮ್ ಎಂಬುವವರ ಮೃತದೇಹ ಆಗಮಸಿದ್ದು, ಕುಟುಂಬಕ್ಕೆ ಹಸ್ತಾಂತರಿಸಲಾಗುತ್ತಿದೆ.

ಇದರೊಂದಿಗೆ ಈವರೆಗೆ ಐವರ ಮೃತದೇಹ ಆಗಮಿಸಿದ್ದು, ಇನ್ನೂ ನಾಲ್ವರ ಮೃತದೇಹ ದೆಹಲಿ ಏರ್ ಪೋರ್ಟ್ ನಿಂದ ಬೆಂಗಳೂರಿಗೆ ರವಾನಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

> **ಈ ನಡುವೆ ಚಾರಣ ಆಯೋಜ ನಾಗೇಂದ್ರ ಅವರು ಮಾತನಾಡಿ, ಚಾರಣದ ವೇಳೆ ಯಾವುದೇ ಅವಘಡದಿಂದ 9 ಮಂದಿ ಸಾವನ್ನಪ್ಪಿಲ್ಲ, ಬದಲಾಗಿ ವಿಪರೀತ ಚಳಿ, ಉಸಿರಾಟದ ಸಮಸ್ಯೆಯಿಂದಾಗಿ ಸಾವನ್ನಪ್ಪಿದ್ದಾರೆಂದು ಹೇಳಿದ್ದಾರೆ. ಮೃತದೇಹ ಬೆಂಗಳೂರಿಗೆ ಆಗಮಿಸಿರುವ ಕುರಿತು ಸಚಿವ ಕೃಷ್ಣ ಬೈರೇಗೌಡ ಅವರು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿ ಮಾಹಿತಿ ನೀಡಿದ್ದಾರೆ.**

## ಅಂತಾರಾಷ್ಟ್ರೀಯ ಆಟದ ದಿನ; ವಿಶ್ವಸಂಸ್ಥೆ ಘೋಷಣೆ

• ಉದಯವಾಹಿನಿ, ಬೆಂಗಳೂರು

ವಿಶ್ವಸಂಸ್ಥೆಯು ಜೂನ್ 11 ಅನ್ನು 'ಅಂತರರಾಷ್ಟ್ರೀಯ ಆಟದ ದಿನ' ಎಂದು ಘೋಷಿಸಿದೆ. ಈ ವರ್ಷದಿಂದಲೇ ಇದು ಅನುಷ್ಠಾನಕ್ಕೆ ಬರಲಿದ್ದು ಜಾಗತಿಕ ಮಟ್ಟದಲ್ಲಿ ಉದ್ಘಾಟನೆಯಾಗಲಿದೆ. ವಿಶ್ವಾದ್ಯಂತ ಈ ದಿನವನ್ನು ಮಕ್ಕಳು ಕ್ರೀಡಾ ದಿನವಾಗಿ ಸಂಭ್ರಮಿಸಲಿದ್ದಾರೆ. ಮಕ್ಕಳ ಆಟವಾಡುವ ಹಕ್ಕನ್ನು ರಕ್ಷಿಸಲು ಅಂತಾರಾಷ್ಟ್ರೀಯ ಆಟದ ದಿನವಾಗಿ ಒಂದು ದಿನವನ್ನು ಗುರುತಿಸುವಂತೆ ವಿಶ್ವಸಂಸ್ಥೆಗೆ ಮಕ್ಕಳೇ ಮನವಿ ಮಾಡಿದ್ದರು. ಮನವಿ ಬೆನ್ನಲ್ಲೇ ವಿಶ್ವಸಂಸ್ಥೆ ಜೂನ್.11ನ್ನು ಅಂತಾರಾಷ್ಟ್ರೀಯ ಆಟದ ದಿನ ಎಂದು ಘೋಷಣೆ ಮಾಡಿದೆ. ವಿಶ್ವಸಂಸ್ಥೆ ಅಂಗೀಕಾರ ಬೆನ್ನಲ್ಲೇ ಗ್ರಾಮೀಣಾಭಿವೃದ್ಧಿ ಇಲಾಖೆಯ ಆದೇಶ ಹೊರಡಿಸಿದ್ದು, ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಜೂ. 11ರಂದು ಅಂತಾರಾಷ್ಟ್ರೀಯ ಆಟದ ದಿನವನ್ನಾಗಿ ಆಚರಿಸುವಂತೆ ಸೂಚನೆ ನೀಡಿದೆ. ಅತ್ಯಂತ ದುರ್ಬಲ ವರ್ಗದವರಿಗೆ, ಅದರಲ್ಲೂ ವಿಶೇಷವಾಗಿ ವಿಕಲಚೇತನ ಮಕ್ಕಳು, ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ಕೆಲಸ ಮಾಡುವ ಮಕ್ಕಳು ಕಡಿಮೆ ಆಟವಾಡಲು ಅವಕಾಶವಿದ್ದು, ಇವರ ಮೇಲೆ ವಿಶೇಷ ಗಮನ ನೀಡಬೇಕು ಎಂದು ತಿಳಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಂತಾರಾಷ್ಟ್ರೀಯ ಆಟದ ದಿನದ ಅಂಗವಾಗಿ ಗ್ರಾಮ ಪಂಚಾಯಿತಿ ಜಾಗೃತಿ ಕೇಂದ್ರಗಳಲ್ಲಿ ಎಲ್ಲಾ ಮಕ್ಕಳಿಗಾಗಿ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲು ನಿರ್ಧರಿಸಿದೆ.


ಉದಯವಾಹಿನಿ ಚಿತ್ರ

## ಬೆಂಗಳೂರು ವಿಮಾನ ನಿಲ್ದಾಣದಲ್ಲಿ 9 ಕೆಜಿ ಚಿನ್ನ ಕಳ್ಳಸಾಗಣೆ

• ಉದಯವಾಹಿನಿ, ಬೆಂಗಳೂರು

ವಿದೇಶದಿಂದ ಅಕ್ರಮವಾಗಿ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಇಬ್ಬರು ಮಹಿಳಾ ಪ್ರಯಾಣಿಕರನ್ನು ಕೆಂಪೇಗೌಡ ಅಂತ ರಾಷ್ಟ್ರೀಯ ವಿಮಾನ ನಿಲ್ದಾಣದ ಕಂದಾಯ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ಬಂಧನ ಕ್ಕೊಳಪಡಿಸಿದ್ದು, 6 ಕೋಟಿ ರೂಪಾಯಿ ಮೌಲ್ಯದ 9 ಕೆಜಿಗೂ ಅಧಿಕ ಚಿನ್ನಾಭರಣವನ್ನು ವಶಕ್ಕೆ ಪಡದಿದ್ದಾರೆ. ಬಂಧಿತ ಇಬ್ಬರು ಮಹಿಳೆಯರು ಪಶ್ಚಿಮ ಬಂಗಾಳ ಹಾಗೂ ಹರಿಯಾಣ ಮೂಲದವರೆಂದು ತಿಳಿದುಬಂದಿದೆ. ಜೂನ್ 4 ರಂದು ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಬರುತ್ತಿರುವ ಥಾಯ್ ಏರ್‌ವೇಸ್ ವಿಮಾನದಲ್ಲಿ ಚಿನ್ನ ಕಳ್ಳಸಾಗಣೆಗೆ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರಕಿತ್ತು. ಮಾಹಿತಿ ಆಧಾರದ ಮೇಲೆ ತಪಾಸಣೆ ನಡೆಸಿದಾಗ ಹ್ಯಾಂಡ್ ಬ್ಯಾಗ್‌ನಲ್ಲಿ ಗಟ್ಟಿ ಹಾಗೂ ಕಚ್ಚಾ ರೂಪದಲ್ಲಿ 6.8 ಕೆ.ಜಿ ಚಿನ್ನ ಪತ್ತೆಯಾಗಿದೆ. ವಿಮಾನ ನಿಲ್ದಾಣದಲ್ಲೇ ಬಿಟ್ಟು ಹೋಗಿದ್ದ ಹ್ಯಾಂಡ್‌ಬ್ಯಾಗ್‌ನಲ್ಲಿ ಸಿಕ್ಕ ದಾಖಲೆಯ ಆಧಾರದಲ್ಲಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. 4.77 ಕೋಟಿ ಮೌಲ್ಯದ ಚಿನ್ನ ಜಪ್ತಿ ಮಾಡಲಾಗಿದ್ದು, ತನಿಖೆ ಮುಂದುವರಿದಿದೆ.

## ರಿಯಾಯಿತಿ ಬಸ್ ಪಾಸ್ ಪಡೆಯಲು ವಿದ್ಯಾರ್ಥಿಗಳು ಪರದಾಟ!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ವಿದ್ಯಾರ್ಥಿಗಳಿಗೆ ನೀಡುವ ರಿಯಾಯಿತಿ ದರದ ಬಸ್ ಪಾಸ್ ಪಡೆಯಲು ವಿದ್ಯಾರ್ಥಿಗಳು ಪರದಾಡುವಂತಹ ಪರಿಸ್ಥಿತಿ ಎದುರಾಗಿದೆ.2024-25ನೇ ಶೈಕ್ಷಣಿಕ ವರ್ಷಕ್ಕೆ ಬಿಎಂಟಿಸಿ ಬಸ್ ಪಾಸ್‌ಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಹಲವು ಸಮಸ್ಯೆ ಎದುರಿಸುತ್ತಿದ್ದಾರೆ.

ಕೆಲವು ವಿದ್ಯಾರ್ಥಿಗಳು ವಿದ್ಯಾಸಂಸ್ಥೆಗಳಿಂದ ಅನುಮೋದನೆ ಪಡೆದಿದ್ದರೂ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ, ಇದಕ್ಕೆ ಒಟಿಪಿ ಬರದಿರುವುದು ಕಾರಣವಾಗುತ್ತಿದೆ ಎಂದು ದೂರಿದ್ದಾರೆ. ಈ ಸಮಸ್ಯೆ ವಿದ್ಯಾರ್ಥಿನಿಯರಿಗೆ ಎದುರಾಗುತ್ತಿಲ್ಲ. ಇದಕ್ಕೆ ಕಾರಣ ಶಕ್ತಿ ಯೋಜನೆಯಾಗಿದೆ. ಯೋಜನೆಯಡಿಯಲ್ಲಿ ವಿದ್ಯಾರ್ಥಿನಿಯರು ಆಧಾರ್ ಕಾರ್ಡ್ ಬಳಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಬಹುದಾಗಿದೆ. 2023-24ಕ್ಕೆ ನೀಡಲಾದ ಬಸ್ ಪಾಸ್ ಮೇ 31 ರಂದು ಮುಕ್ತಾಯಗೊಂಡಿದೆ.

ಕಳೆದ ವರ್ಷ, ನಾವು ಬಸ್ ಪಾಸ್ ಪಡೆಯುವವರೆಗೆ ಕಾಲೇಜು ಪ್ರವೇಶ ರಶೀದಿ ತೋರಿಸುವ ಮೂಲಕ ಪ್ರಯಾಣಿಸಲು ಅವಕಾಶ ನೀಡಲಾಗಿತ್ತು. ವರ್ಷ ಆಯ್ಕೆಯನ್ನು ನೀಡದೆ ಬಸ್ ಪಾಸ್ ಪಡೆಯಬೇಕು ಅಥವಾ ಟಿಕೆಟ್ ಖರೀದಿಸಬೇಕು ಎಂದು ಹೇಳುತ್ತಿದ್ದಾರೆಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಅರ್ಜಿ ಭರ್ತಿ ಮಾಡಿ ಕಾಲೇಜು ಆಡಳಿತ ಮಂಡಳಿಯಿಂದ ಅನುಮೋದನೆ ಪಡೆದ ನಂತರ ಅದನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಪ್ರಯತ್ನಿಸಿದೆವು. ಆದರೆ, ಸಾಧ್ಯವಾಗುತ್ತಿಲ್ಲ. ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಒಟಿಪಿ ಒದಗಿಸಬೇಕಾಗಿದೆ, ಆದರೆ, ಒಟಿಪಿ ಬರುತ್ತಿಲ್ಲ. ಆನ್‌ಲೈನ್‌ನಲ್ಲಿ ಹಲವಾರು ಬಾರಿ ಪ್ರಯತ್ನಿಸಿದೆ. ಬೆಂಗಳೂರುಒನ್ ಕೇಂದ್ರಕ್ಕೂ ಭೇಟಿ ನೀಡಿದೆ. ಬಿಎಂಟಿಸಿ ಸರ್ವರ್‌ನಲ್ಲಿ ಸಮಸ್ಯೆ ಇರುವ ಕಾರಣ ಒಟಿಪಿ ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಬಸ್ ಪಾಸ್‌ಇಲ್ಲದ ಕಾರಣ ಪ್ರತೀನಿತ್ಯ ಹಣ ನೀಡಿ ಪ್ರಯಾಣಿಸಬೇಕಾಗಿದೆ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

## ರಾಯರ ಮಠದ 66ನೇ ವಾರ್ಷಿಕೋತ್ಸವ

• ಉದಯವಾಹಿನಿ, ಬೆಂಗಳೂರು

ಪ್ರಕಾಶನಗರದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಜೂನ್ 11, ಮಂಗಳವಾರದಂದು, ಪರಮಪೂಜ್ಯ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಉಪಸ್ಥಿತಿಯಲ್ಲಿ, ಶ್ರೀಮಠದ 66ನೇ ವಾರ್ಷಿ ಕೋತ್ಸವ, ಪವನ ಪರಿ ಮಳ ಪ್ರಸಾರಿಣೀ ಸಮಿತಿಯ 39ನೇ ವಾರ್ಷಿಕೋತ್ಸವದ ಪ್ರಯುಕ್ತ ಜರುಗುವ ಬೆಳಗಿನ ಕಾರ್ಯಕ್ರಮಗಳು ಶ್ರೀ ಗುರುರಾಯರ ಬೃಂದಾವನಕ್ಕೆ ಮಧು ಅಭಿಷೇಕ, ಫಲ-ಪಂಚಾಮೃತ ಅಭಿಷೇಕ, ಕನಕಾಭಿಷೇಕ, ವಿಶೇಷ ಅಲಂಕಾರ, ಶ್ರೀಪಾದಂಗಳವರಿಂದ ತಪ್ತ ಮುದ್ರಾಧಾರಣೆ, ಸಂಸ್ಥಾನ ಪೂಜೆ, ಶ್ರೀಪಾದಂಗಳವರ ಅನುಗ್ರಹ ಸಂದೇಶ, ಮಹಾ ಮಂಗಳಾರತಿ.


ಉದಯವಾಹಿನಿ ಚಿತ್ರ

**ಸಂಜೆಯ ಕಾರ್ಯಕ್ರಮಗಳು :** 5 ಗಂಟೆಗೆ ವರ್ಧಂತಿ ಉತ್ಸವ ಸಮಾರಂಭ. ಅಧ್ಯಕ್ಷತೆ : ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು. ವರ್ಧಂತಿ ಉತ್ಸವದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರುಗಳಾದ ಶ್ರೀ ಸತ್ತಿಗೇರಿ ಧೀರೇಂದ್ರಾಚಾರ್ಯ (ತತ್ವಜ್ಞಾನ ಕ್ಷೇತ್ರ), ಡಾ|| ದೀಪಕ್ ವಿ. ಹಲ್ದಪುರ್ (ವೈದ್ಯಕೀಯ ಕ್ಷೇತ್ರ), ಡಾ|| ಎನ್. ಆರ್. ಲಲಿತಾಂಬ (ಶಿಕ್ಷಣ ಕ್ಷೇತ್ರ), ಶ್ರೀ ನಾವೆಲ್ಟಿ ಜಿ. ವೆಂಕಟೇಶ್ (ಸಾಹಿತ್ಯ ಕ್ಷೇತ್ರ) ಡಾ|| ಆರ್. ಕೋಮಲ (ಸಮಾಜ ಸೇವಾ ಕ್ಷೇತ್ರ) ಇವರುಗಳಿಗೆ ಗೌರವಾರ್ಪಣೆ, ಸುಮಾರು 12 ವರ್ಷಗಳಿಂದ ನಡೆಯುತ್ತಿದ್ದ ಮಹಾಭಾರತ ಪ್ರವಚನ ಮಾಲಿಕೆಯ ಮಹಾಮಂಗಳೋತ್ಸವ, ವೇದಘೋಷ ಭಜನೆಗಳೊಂದಿಗೆ ಮಹಾಭಾರತ ಗ್ರಂಥದ ಮೆರವಣಿಗೆ ನಂತರ ಸಮಾರೋಪ ಸಮಾರಂಭಗಳು ಜರುಗಲಿದ್ದು,

ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀಮಠದ ಪದಾಧಿಕಾರಿಗಳು ವಿನಂತಿಸಿದ್ದಾರೆ.

**1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರು**

## ಆಕಾಂಕ್ಷಿಗಳ ಭವಿಷ್ಯ ಅತಂತ್ರ ಡಿಸಿಎಂ ಡಿಕೆಶಿ ಕಿಡಿ

• ಉದಯವಾಹಿನಿ, ಬೆಂಗಳೂರು

ಅನಿಶ್ಚಿತವಾಗಿದೆ 24 ಲಕ್ಷ ನೀಟ್ ಆಕಾಂಕ್ಷಿಗಳ ಭವಿಷ್ಯ ಬಿಜೆಪಿ ಸರ್ಕಾರ ಏಕೆ ಮೌನವಾಗಿದೆಎನ್ಟಿಎ ಏಕೆ ತುಟಿಕ್ ಪಿಟಿಕ್ ಅಂತಿಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಕಿಡಿಕಾರಿದ್ದಾರೆ.ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿರುವ ಡಿಸಿಎಂ ಡಿಕೆಶಿ ನೀಟ್ ಫಲಿತಾಂಶದಲ್ಲಿ ಖಂಡಿತವಾಗಿಯೂ ಒಂದು ಮಹಾ ಪ್ರಮಾದವಾಗಿದೆ. ಅದರ ವಿವರಣೆ ಹೀಗಿದೆ. ಪರೀಕ್ಷೆ ಬರೆದ 67 ವಿದ್ಯಾರ್ಥಿಗಳು 720/720 ಅಂಕ ಪಡೆದಿದ್ದಾರೆ. ಕಳೆದ ವರ್ಷಗಳಲ್ಲಿ ಕೇವಲ 1 ಅಥವಾ 2 ಟಾಪರ್ಗಳಿದ್ದರು. ನೀಟ್ ಪರೀಕ್ಷೆಯಲ್ಲಿ ನೆಗೆಟಿವ್ ಅಂಕಗಳಿದ್ದೂ 67 ಮಂದಿ ಟಾಪರ್ಗಳಾಗಿದ್ದು ಹೇಗೆ 67 ಟಾಪರ್ಗಳ ಪೈಕಿ 44 ಟಾಪರ್ಗಳು ಗ್ರೇಸ್ ಮಾರ್ಕ್ಸ್ ಪಡೆದವರಾ ಗಿದ್ದಾರೆ. ಆಶ್ಚರ್ಯ ಅಂದ್ರೆ, ಟಾಪರ್ಗಳಾಗಿರುವ 62ರಿಂದ 67ರವರೆಗಿನ ಸೀರಿಯಲ್ ಸಂಖ್ಯೆಯ ವಿದ್ಯಾರ್ಥಿಗಳು ಫರೀದಾಬಾದ್ನ ಒಂದೇ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದವರು. ಓಇಇಖಿ ಆಕಾಂಕ್ಷಿಗಳಲ್ಲಿ ಹೆಚ್ಚಿನವರು ಒಳ್ಳೆಯ ಹಿನ್ನಲೆಯಿಂದ ಬಂದವರು. ಇಂತಹ ಮಹಾ ಪ್ರಮಾದದಿಂದ ಅವರ ಆಕಾಂಕ್ಷೆಗಳಿಗೆ ಪೆಟ್ಟಾಗಿದೆ. ವೈದ್ಯರಾಗುವ ನ್ಯಾಯಯುತ ಅವಕಾಶವನ್ನು ನಿರಾಕರಿಸಲು ಯಾರು ಹೊಣೆಗಾರರಾಗಿದ್ದಾರೆ -ನೀಟ್ ಫಲಿತಾಂಶವನ್ನು ಜೂನ್ 14 ರ ಬದಲಿಗಿ ಮುಂಚಿತವಾಗಿ ಜೂನ್ 4 ರಂದು ಏಕೆ ಘೋಷಿಸಲಾಯಿತು ಮಹಾ ಪ್ರಮಾದದಿಂದಾಗಿ ನೀಟ್ ಪರೀಕ್ಷೆ ಬರೆದ ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭ್ರಷ್ಟಾಚಾರಕ್ಕೆ ನಮ್ಮ ಮಕ್ಕಳು ಬಲಿಯಾಗಬೇಕೇ ಇದಕ್ಕೆ ಹೊಣೆಗಾರರು ಯಾರು ಲಕ್ಷಾಂತರ ಮಕ್ಕಳ ಭವಿಷ್ಯ ಅತಂತ್ರಕ್ಕೆ ಸಿಲುಕಿದೆ. ಕೇಂದ್ರ ಸರ್ಕಾರ ಮಾತ್ರ ಕಮಕ್ ಕಿಮಕ್ ಎನ್ನುತ್ತಿಲ್ಲ. ಅತಂತ್ರದಲ್ಲಿ ಸಿಲುಕಿರುವ ನಮ್ಮ ಮಕ್ಕಳ ದೇಶದ ಈ ಪ್ರಶ್ನೆಗೆ ಈಗಲೇ ಉತ್ತರ ಬೇಕಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಕಿಡಿಕಾರಿದ್ದಾರೆ.



## ಭವಾನಿ ರೇವಣ್ಣ ಕಾರು ಚಾಲಕ ಅಜಿತ್ ಎಸ್‌ಐಟಿ ವಶಕ್ಕೆ.!

• ಉದಯವಾಹಿನಿ, ಬೆಂಗಳೂರು

ಮಹಿಳೆ ಕಿಡ್ನ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಭವಾನಿ ರೇವಣ್ಣ ಕಾರು ಚಾಲಕ ಅಜಿತ್ ಅವರನ್ನು ಎಸ್‌ಐಟಿ ವಶಕ್ಕೆ ಪಡೆದಿದೆ. ಚಿಕ್ಕಮಗಳೂರಿನ ಸಂಬಂಧಿಕರ ಮನೆಯಲ್ಲಿದ್ದ ಭವಾನಿ ರೇವಣ್ಣ ಕಾರು ಚಾಲಕ ಅಜಿತ್‌ರನ್ನು ಎಸ್‌ಐಟಿ ಅಧಿಕಾರಿಗಳು ನಿನ್ನೆ ವಶಕ್ಕೆ ಪಡೆದುಕೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಮಹಿಳೆ ಕಿಡ್ನ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಪತ್ತೆಯಾಗಿದ್ದ ಭವಾನಿ ರೇವಣ್ಣಗೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದು, ಈ ಬೆನ್ನಲ್ಲೇ ಎಸ್‌ಐಟಿ ವಿಚಾರಣೆಗೆ ಹಾಜರಾಗಿದ್ದಾರೆ.ವಕೀಲರ ಜೊತೆ ಬಂದ ಭವಾನಿ ರೇವಣ್ಣ ಎಸ್‌ಐಟಿವಿಚಾರಣೆಗೆ ಹಾಜರಾಗಿದ್ದಾರೆ ಎಂದು ತಿಳಿದು ಬಂದಿದೆ. ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಭವಾನಿ ರೇವಣ್ಣ ವಿರುದ್ಧ ನ್ಯಾಯಾಲಯ ಬಂಧನ ವಾರೆಂಟ್ ಜಾರಿ ಮಾಡಿತ್ತು. 15 ದಿನಗಳಿಂದ ನಾಪತ್ತೆಯಾಗಿರುವ ಭವಾನಿ ರೇವಣ್ಣ ಅವರ ಬಂಧನಕ್ಕೆ ಎಸ್‌ಐಟಿ ತೀವ್ರ ಶೋಧ ನಡೆಸಿದ್ದು, ಸುಳಿವು ಸಿಕ್ಕಿರಲಿಲ್ಲ. ಅಲ್ಲದೇ ಅವರ ವಿರುದ್ಧ ಕೋರ್ಟ್ ವಾರಂಟ್ ಜಾರಿಗೊಳಿಸಿತ್ತು.

# ತನಿಖೆ ನಡೆಸಲು ಛಲವಾದಿ ನಾರಾಯಣಸ್ವಾಮಿ ಆಗ್ರಹ

■ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಹಗರಣ ■ ನಿಗಮದ ಬಳಿ ಉತ್ತರವಿಲ್ಲ

• ಉದಯವಾಹಿನಿ, ಬೆಂಗಳೂರು

ಹಣಕಾಸು ಖಾತೆ ಹೊಂದಿದ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಭಾರಿ ಹಗರಣ ನಡೆದಿರುವ ಯಾವುದೇ ಸಾಧ್ಯತೆ ಇಲ್ಲ. ಆದ್ದರಿಂದ ಮುಖ್ಯಮಂತ್ರಿಯವರ ವಿರುದ್ಧ ಸಿಬಿಐ ತನಿಖೆ ನಡೆಯಲಿ ಎಂದು ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರು ಆಗ್ರಹಿಸಿದರು.

ಈ ಕುರಿತು ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ನಾಗೇಂದ್ರರೊಬ್ಬರೇ ರಾಜೀನಾಮೆ ಕೊಟ್ಟರೆ ಸಾಲದು. ಮುಖ್ಯಮಂತ್ರಿಗಳೂ ಜವಾಬ್ದಾರಿ ಹೊತ್ತು ರಾಜೀನಾಮೆ ಕೊಡಬೇಕು ಎಂದು ತಿಳಿಸಿದರು. ನಿನ್ನೆವರೆಗೆ ಕಾಂಗ್ರೇಸ್ ಸರಕಾರದ ಹಗರಣಗಳ ವಿರುದ್ಧ ನಮ್ಮ ಹೋರಾಟ ನಡೆದಿತ್ತು. ಅದು ಈಗಲೂ ಮುಂದುವರೆದಿದೆ ಎಂದು ಸ್ಪಷ್ಟಪಡಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಹಗರಣ ನಡೆದಿದೆ. ಇದು ಯಾವುದೇ ಟೆಂಡರ್ ಕೊಟ್ಟಿದ್ದಲ್ಲ. ಯಾವುದೋ ಸರಕಾರಿ ಕಾರ್ಯಕ್ಕೆ ಉಪಯೋಗಿಸಿದ್ದಲ್ಲ. ಬೇರೆ ಬೇರೆ ಖಾತೆ ತೆರೆದು ಹೈದರಾಬಾದ್‌ಗೆ ವರ್ಗಾಯಿಸಿದ್ದಾರೆ ಎಂದು ಆಕ್ಷೇಪಿಸಿದರು. ಯಾಕೆ ಈ ಹಣ ವರ್ಗಾಯಿಸಿದ್ದಾರೆ ಎಂಬುದಕ್ಕೆ ಸರಕಾರದ ಬಳಿ, ನಿಗಮದ ಬಳಿ ಉತ್ತರವಿಲ್ಲ ಎಂದರು.



ಉದಯವಾಹಿನಿ ಚಿತ್ರ

ಸಿದ್ದು ವಿರುದ್ಧ ವಾಗ್ದಾಳಿ

ಮೊತ್ತವನ್ನು ಚುನಾವಣೆಗೆ ಬಳಕೆಗಾಗಿ ವರ್ಗಾಯಿಸಿದರೇ ಎಂಬ ಬಗ್ಗೆ ಕೂಲಂಕಷ ಪರಿಶೀಲನೆ ಆಗಬೇಕು. ಒಂದೆಡೆ ಎಸ್‌ಐಟಿ ತನಿಖೆ ನಡೆದಿದ್ದು, ಯೂನಿಯನ್ ಬ್ಯಾಂಕ್ ಪತ್ರದನ್ವಯ ಸಿಬಿಐ ಕೂಡ ಕೇಸಿನ ತನಿಖೆ ಕೈಗೆತ್ತಿಕೊಂಡಿದೆ.

ಒಂದೇ ಕೇಸನ್ನು ಎರಡು ಸಂಸ್ಥೆಗಳು ತನಿಖೆ ಮಾಡಲಾಗದು. ಈ ಕೇಸನ್ನು ಮುಚ್ಚಿ ಹಾಕಲು ಸಿದ್ದರಾಮಯ್ಯರ ಸರಕಾರ ನಿರತವಾಗಿತ್ತು ಎಂದ ಅವರು, ನಮ್ಮ ಹೋರಾಟದ ಒತ್ತಡ, ರಾಜ್ಯಪಾಲರ ಭೇಟಿ ಬಳಿಕ ನಾಗೇಂದ್ರ ಅವರ ರಾಜೀನಾಮೆ ಕೊಟ್ಟಿದ್ದಾರೆ. ಬೇರೆ ನಿಗಮಗಳಲ್ಲೂ ಹೀಗೆ ಆಗಿದೆಯೇ? ಯಾವ ಕಾರಣಕ್ಕೆ ಖಾತೆಗಳನ್ನು ತೆರೆಯಲಾಯಿತು? ಯಾವ ಕಾರಣಕ್ಕೆ ತೆಲಂಗಾಣದ ಈ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದ್ದೀರಿ? ಇದುವರೆಗೂ ಸರಕಾರ ಉತ್ತರ ಕೊಟ್ಟಿಲ್ಲ. ಯಾಕೆ ಅದನ್ನು ಮುಚ್ಚಿಡುತ್ತಾ ಇದ್ದೀರಿ? ಎಂದು ಛಲವಾದಿ ನಾರಾಯಣಸ್ವಾಮಿ ಅವರು ಪ್ರಶ್ನಿಸಿದರು. ಒಂದೇ ನಿಗಮದಲ್ಲಿ ಈ ರೀತಿ ಆಗಿದೆಯೇ? ಬೇರೆ ನಿಗಮಗಳಲ್ಲೂ ಹೀಗೆ ಆಗಿದೆಯೇ? ಸರಕಾರದಿಂದ ಉತ್ತರ ಬಂದಿಲ್ಲ. ಸಿದ್ದರಾಮಯ್ಯನವರು ಹೇಳುವುದೇ ಒಂದು ಮಾಡುವುದೇ ಒಂದು ಎಂದು ನಾವು ಮೊದಲಿನಿಂದಲೇ ಹೇಳಿದ್ದೇವೆ. ಎಲ್ಲಿ ನಿಮ್ಮ ದಲಿತ ಪ್ರೇಮ ಸಿದ್ದರಾಮಯ್ಯನವರೇ? ಸಂವಿಧಾನ ನಾವೇ ರಕ್ಷಿಸುವುದು ಎನ್ನುತ್ತಾರೆ. ಎಲ್ಲಿ ರಕ್ಷಣೆ ಮಾಡಿದ್ದೀರಿ ಎಂದು ಕೇಳಿದರು. ಇವತ್ತು ಸಂವಿಧಾನಕ್ಕೆ ಬೆಲೆ ಬಂದಿದ್ದರೆ ನಾಗೇಂದ್ರರ ರಾಜೀನಾಮೆ ಮೂಲಕ ಪೂಜ್ಯ ಅಂಬೇಡ್ಕರ್ ಅವರ ಸಂವಿಧಾನಕ್ಕೆ ಗೌರವ ಬಂದಿದೆ ಎಂದು ವಿಶ್ಲೇಷಣೆ ಮಾಡಿದರು.

> **ಬಿಜೆಪಿಯ ಸಂಘಟಿತ ಹೋರಾಟ ಇಲ್ಲದೆ ಇದ್ದರೆ ಕೇಸನ್ನು ಅಲ್ಲಿಗೇ ಮುಚ್ಚಿ ಹಾಕುತ್ತಿದ್ದರು. ಹಿಂದೆ ರೇಣುಕಾ ರಾಜೇಂದ್ರ ಅವರು ಒಂದು ಆಪಾದನೆಯಲ್ಲಿ ಸಿಲುಕಿದ್ದರು. ಕೇವಲ 25 ಸಾವಿರ ವ್ಯತ್ಯಾಸದ ಬಗ್ಗೆ ಎ.ಕೆ.ಸುಬ್ಬಯ್ಯ ಅವರು ಮಾಹಿತಿ ಕೊಟ್ಟಿದ್ದರು. ತಕ್ಷಣಕ್ಕೆ ಸಚಿವರು ರಾಜೀನಾಮೆ ಕೊಟ್ಟಿದ್ದರು. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದು ಛಲವಾದಿ ನಾರಾಯಣಸ್ವಾಮಿ ಅವರು ಕೇಳಿದರು.**

> **ಪರಿಶಿಷ್ಟ ವರ್ಗಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣ 187 ಕೋಟಿ. ಪರಿಶಿಷ್ಟ ವರ್ಗಗಳ ಸಚಿವರೇ ಇದ್ದು, ಪರಿಶಿಷ್ಟ ವರ್ಗಗಳಿಗೆ ಅನ್ಯಾಯವಾಗಿದೆ. ಎಸ್‌ಸಿಗಳಿಗಾಗಿ ಮೀಸಲಿದ್ದ ಹಣವನ್ನು ಸಚಿವ ಮಹದೇವಪ್ಪ ಅವರ ಕೈಯಿಂದ ದಲಿತರಿಗೆ ಅನ್ಯಾಯ ಆಗುವಂತೆ ಮಾಡಿದ್ದಾರೆ. ಮುಖ್ಯಮಂತ್ರಿಗಳಿಗೆ ಎಷ್ಟು ಬುದ್ಧಿವಂತಿಕೆ ಇದೆ ಎಂಬುದಕ್ಕೆ ಇದು ಉದಾಹರಣೆ ಎಂದು ಟೀಕಿಸಿದರು. ಇದು ಸರಿಯೇ? ಇದು ದಲಿತರಿಗೆ ಮಾಡುವ ಮೋಸ, ಅನ್ಯಾಯ, ವಂಚನೆ ಅಲ್ಲವೇ ಎಂದು ಕೇಳಿದರು.**

ಅಂತರಾಳದಿಂದ..
EDITORIAL

# ಸರ್ಕಾರ ರಚನೆಗೆ ಯತ್ನ ಇಲ್ಲ

## 'ಇಂಡಿಯಾ' ಕೂಟದ ನಡೆ ಸರಿ

ಸರ್ಕಾರ ರಚಿಸಲು ರಾಷ್ಟ್ರಪತಿಯಿಂದ ಬರುವ ಆಹ್ವಾನವನ್ನು ಬಿಜೆಪಿ ನಿರಾಕರಿಸಿದರೆ, ಸರ್ಕಾರ ರಚಿಸಲು ಬಿಜೆಪಿಗೆ ಸಾಧ್ಯವಾಗದೇ ಇದ್ದರೆ ಅಥವಾ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಉರುಳಿದರೆ ಮಾತ್ರ, ಇಂಡಿಯಾ ಮೈತ್ರಿಕೂಟವು ಸರ್ಕಾರ ರಚನೆಗೆ ಯತ್ನ ನಡೆಸಬಹುದು. ಲೋಕಸಭೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಹಾಗೂ ಚುನಾವಣಾಪೂರ್ವ ರಾಜಕೀಯ ಮೈತ್ರಿಕೂಟದ ನಾಯಕನ ಸ್ಥಾನದಲ್ಲಿರುವ ಬಿಜೆಪಿಯು ಈಗ ಸರ್ಕಾರ ರಚನೆಗೆ ಹಕ್ಕು ಮಂಡಿಸಬಹುದು. ಇಂಡಿಯಾ ಮೈತ್ರಿಕೂಟಕ್ಕಿಂತಲೂ ಎನ್‌ಡಿಎ ಮೈತ್ರಿಕೂಟವು ಹೆಚ್ಚು ಸ್ಥಾನಗಳನ್ನು ಪಡೆದಿದೆ.


ಉದಯವಾಹಿನಿ ಚಿತ್ರ

> ಕೇಂದ್ರದಲ್ಲಿ ಸರ್ಕಾರ ರಚಿಸುವ ಪ್ರಯತ್ನಕ್ಕೆ ಈಗ ಮುಂದಾಗದೇ ಇರುವ ಮೂಲಕ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಒಳ್ಳೆಯ ಕೆಲಸವನ್ನೇ ಮಾಡಿದೆ. ಕೇಂದ್ರದಲ್ಲಿ ಸರ್ಕಾರ ರಚಿಸಲು ಇತರ ಕೆಲವು ಪಕ್ಷಗಳ ಬೆಂಬಲವನ್ನು ಈ ಮೈತ್ರಿಕೂಟವು ಯಾಚಿಸುವ ಉದ್ದೇಶ ಹೊಂದಿದೆ ಎಂಬ ವರದಿಗಳು ಇದ್ದವು. ಆದರೆ ಆ ರೀತಿಯ ಯತ್ನಕ್ಕೆ ಮೈತ್ರಿಕೂಟವು ಮುಂದಾಗಿದ್ದರೆ ಅದು ಜನಾದೇಶಕ್ಕೆ ವಿರುದ್ಧವಾದ ನಡೆ ಆಗುತ್ತಿತ್ತು. ಇಂಡಿಯಾ ಮೈತ್ರಿಕೂಟವು ಈಗಿನ ಪರಿಸ್ಥಿತಿಯಲ್ಲಿ ಬಲಿಷ್ಠವಾದ ಹಾಗೂ ಪರಿಣಾಮಕಾರಿಯಾದ ವಿರೋಧ ಪಕ್ಷವಾಗಿ ಕೆಲಸ ಮಾಡಲಿ ಎಂಬ ಇಂಗಿತವನ್ನು ಮತದಾರರು ವ್ಯಕ್ತಪಡಿಸಿದ್ದಾರೆ.

ಜನಾದೇಶವನ್ನು ಇಂಡಿಯಾ ಮೈತ್ರಿಕೂಟ ಗೌರವಿಸಬೇಕು, ಸರ್ಕಾರ ರಚಿಸುವ ಯತ್ನಗಳಿಗೆ ಮುಂದಾಗಬಾರದು.

ಒಂದು ವೇಳೆ ಸರ್ಕಾರ ರಚಿಸಲುಯತ್ನ ನಡೆಸಿದಲ್ಲಿ ಅದು ಅಪ್ರಜಾಸತ್ತಾತ್ಮಕ ನಡೆ ಆಗಲಿದೆ. ಸಂಸತ್ತಿನ ಒಳಗೆ ಮತ್ತು ಹೊರಗೆ ಪರಿಣಾಮಕಾರಿಯಾದ ಹಾಗೂ ವಿಶ್ವಾಸಾರ್ಹವಾದ ವಿರೋಧ ಪಕ್ಷವಾಗಿ ಕೆಲಸ ಮಾಡುವ, ಹೊಸ ಸರ್ಕಾರವನ್ನು ಅದರ ನೀತಿಗಳು ಹಾಗೂ ಕಾರ್ಯಗಳ ವಿಚಾರದಲ್ಲಿ ಉತ್ತರದಾಯಿ ಆಗಿಸುವ ಹೊಣೆ ಈಗ ಇಂಡಿಯಾ ಮೈತ್ರಿಕೂಟದ ಮೇಲೆ ಇದೆ. ಈ ಕೆಲಸ ಮಾಡಲು ಬೇಕಿರುವ ಶಕ್ತಿಯು ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಲೋಕಸಭೆಯಲ್ಲಿ ಸಿಕ್ಕಿದೆ. ಇದನ್ನು ಉಪೇಕ್ಷಿಸಲು ಸರ್ಕಾರಕ್ಕೆ ಇನ್ನು ಮುಂದೆ ಆಗುವುದಿಲ್ಲ.

ಹಿಂದಿನ ಲೋಕಸಭೆಯಲ್ಲಿ ಮಾಡಿದಂತೆ, ವಿರೋಧ ಪಕ್ಷಗಳ ಮಾತುಗಳನ್ನು ಸಾರಾಸಗಟಾಗಿ ತಳ್ಳಿಹಾಕಲು ಕೂಡ ಸರ್ಕಾರಕ್ಕೆ ಆಗುವುದಿಲ್ಲ. ವಿರೋಧ ಪಕ್ಷಗಳ ಮೈತ್ರಿಕೂಟವು ಈಗ ಸಂಸತ್ತನ್ನು ಮತ್ತೆ ಹಳೆಯ ಒಳ್ಳೆಯ ದಿನಗಳ ಕಡೆ ಒಯ್ಯುವ. ವಿರೋಧ ಪಕ್ಷಗಳ ಜೊತೆ ಸರ್ಕಾರವು ಸಂವಾದ ನಡೆಸುವಂತೆ ಮಾಡುವ, ಶಾಸನಗಳನ್ನು ರೂಪಿಸುವ ಸಂದರ್ಭದಲ್ಲಿ ವಿಸ್ತೃತ ಚರ್ಚೆಗಳು ಆಗುವಂತೆ ನೋಡಿಕೊಳ್ಳುವ ಕೆಲಸ ಮಾಡಬಹುದು. ಈ ಹತ್ತು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರವು ಸಂಸತ್ತನ್ನು ಬಹಳ ಅನಾದರದಿಂದ ಕಂಡಿದೆ.

ಸಂಸತ್ತು ಈ ದೇಶದ ಪಾಲಿನ ಹೃದಯವಿದ್ದಂತೆ, ಸಂಸತ್ತಿಗೆ ಕೊಡಬೇಕಾದ ಮಹತ್ವವನ್ನು ಕೊಡದೇ ಇದ್ದುದು ಬಹಳ ಕಡುಕನ್ನು ಉಂಟು ಮಾಡಿದೆ. ಈಗ ಸಂಸತ್ತಿಗೆ ಮತ್ತೆ ಗೌರವವನ್ನು ತಂದುಕೊಡುವ ಕೆಲಸ ಮಾಡುವ ಅವಕಾಶ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಇದೆ. ಸಂಸತ್ತು ಹಾಗೂ ಇತರ ಸಾಂವಿಧಾನಿಕ ಸಂಸ್ಥೆಗಳಿಗಿಂತ ತಾವು ಮೇಲು ಎಂಬಂತೆ ವರ್ತಿಸಿರುವ ಪ್ರಧಾನಿಯವರು ಸಂಸತ್ತಿನ ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದು ಸಾಧ್ಯವಾದಲ್ಲಿ, ಅದೊಂದು ದೊಡ್ಡ ಯಶಸ್ಸಾಗಲಿದೆ.

ಸಂಸತ್ತಿನ ಹೊರಗಡೆಯೂ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ದೊಡ್ಡ ಜವಾಬ್ದಾರಿಯೊಂದು ಕಾದಿದೆ. ಆ ಜವಾಬ್ದಾರಿಯನ್ನು ನಿರ್ವಹಿಸಲು ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ಜೊತೆಯಾಗಬೇಕಿದೆ. ಇಂಡಿಯಾ ಮೈತ್ರಿಕೂಟವು ಚುನಾವಣಾ ಪೂರ್ವದಲ್ಲಿ ರಚನೆಯಾದ ಒಂದು ಮೈತ್ರಿಕೂಟ. ಅದು ಇನ್ನು ಮುಂದೆ ಬಲಿಷ್ಠವಾದ, ಒಗ್ಗಟ್ಟಿನಿಂದ ಕೆಲಸ ಮಾಡುವ, ಸ್ಪಷ್ಟವಾದ ನೀತಿಗಳು ಹಾಗೂ ಗುರಿಗಳು ಇರುವ ರಾಜಕೀಯ ಮೈತ್ರಿಕೂಟವಾಗಿ ಕೆಲಸ ನಿರ್ವಹಿಸಬೇಕಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಹಲವು ನೀತಿಗಳು, ನಿರ್ಧಾರಗಳ ಬಗ್ಗೆ ಸಾರ್ವಜನಿಕರು ಪರಿಶೀಲನೆ ನಡೆಸುವಂತಹ ಸನ್ನಿವೇಶವನ್ನು ಸೃಷ್ಟಿಸುವಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವು ಯಶಸ್ಸು ಕಂಡಿದೆ. ಅಲ್ಲದೆ, ಚುನಾವಣೆಯಲ್ಲಿ ಚರ್ಚೆಯು ಸಾರ್ವಜನಿಕರ ಬದುಕಿನ ಪ್ರಶ್ನೆಗಳ ಬಗ್ಗೆ ಕೇಂದ್ರೀಕೃತ ಆಗುವಂತೆ ಮಾಡುವಲ್ಲಿಯೂ ಯಶಸ್ಸು ಕಂಡಿದೆ. ಆದರೆ ಹಲವು ಕ್ಷೇತ್ರಗಳಲ್ಲಿ ಈ ಮೈತ್ರಿಕೂಟದ ಅಭ್ಯರ್ಥಿಗಳು ಪಡೆದ ಮತಗಳು ಆಡಳಿತದ ವಿರುದ್ಧದ ಮತಗಳಾಗಿದ್ದವೇ ಹೊರತು, ಮೈತ್ರಿಕೂಟದ ಅಭ್ಯರ್ಥಿಗಳ ಪರವಾಗಿ ಚಲಾವಣೆಯಾದ ಮತಗಳಾಗಿರಲಿಲ್ಲ. ಕೇಂದ್ರ ಸರ್ಕಾರವು ಜನರ ಮುಂದೆ ಇರಿಸುವ ನೀತಿ, ನಿರ್ಧಾರಗಳನ್ನು ಪ್ರಶ್ನಿಸುವ ಕಾರ್ಯಕ್ರಮಗಳನ್ನು ವಿರೋಧ ಪಕ್ಷಗಳ ಮೈತ್ರಿಕೂಟವು ರೂಪಿಸಬೇಕಿದೆ. ಹೊಸದಾಗಿ ರಚನೆ ಆಗಲಿರುವ ಸರ್ಕಾರವು ಹೊಸ ನೀತಿಗಳನ್ನು ರೂಪಿಸಲಿದೆ. ವಿರೋಧ ಪಕ್ಷಗಳ ಮೈತ್ರಿಕೂಟವು ಅವುಗಳನ್ನು ಪರಿಗಣಿಸಿ ತನ್ನ ಪ್ರತಿಕ್ರಿಯೆಗಳನ್ನು ರೂಪಿಸಬೇಕಿದೆ ಎಂಬುದನ್ನು ಮರೆಯುವಂತಿಲ್ಲ.

# ಮಹಾಭಾರತ



## ಶಲ್ಯ ಪರ್ವ

• ಹಿಂದಿನ ಸಂಚಿಕೆಯಿಂದ

ಶಲ್ಯನು ಸಿಂಹದಂತೆ ಯುಧಿಷ್ಠಿರನ ಮೇಲೆ ಎರಗಲು, ಯುಧಿಷ್ಠಿರನು ಕೃಷ್ಣನನ್ನು ಸ್ಮರಿಸಿ ಭೀಕರವಾದ ಭಲ್ಲೆಯೊಂದನ್ನು ಕೈಗೆತ್ತಿಕೊಂಡನು. ಅದು ಕಾರ್ತಿಕೇಯನ ಕೈಯಲ್ಲಿಯ ಶಕ್ತ್ಯಾಯುಧದಂತೆ ತೋರುತ್ತಿದ್ದಿತು. ಅದು ಮಹಾವೇಗದಿಂದ ಬಂದು ಶಲ್ಯನ ಎದೆಯನ್ನು ಸರ್ಪವು ಬಿಲವನ್ನು ಹೋಗುವಂತೆ ಪ್ರವೇಶಿಸಿತು. ಕೌರವಸೇನಾಪತಿಯು ತಕ್ಷಣವೇ ಮಡಿದು ರಥದಿಂದ ನೆಲಕ್ಕುರುಳಿದನು. ಕೊನೆಯದಾಗಿ ಭೂತಾಯಿಯನ್ನು ಆಲಿಂಗಿಸಿಕೊಳ್ಳುತ್ತಿರುವವನಂತೆ ತನ್ನ ಎರಡೂ ಕೈಗಳನ್ನು ಅಗಲಿಸಿಕೊಂಡಿದ್ದನು.

★ ★ ★ ★

ಸೇನಾಪತಿಯು ಬಿದ್ದನೆಂದು ಕೌರವರ ಕಡೆ ಹಾಹಾಕಾರವುಂಟಾಯಿತು. ಆದರೂ ಯುದ್ಧವು ಮುಂದುವರೆಯಬೇಕಲ್ಲ! ದುರ್ಯೋಧನನೇ ನೇತೃತ್ವವಹಿಸಿ ಎತ್ತರದ ಧ್ವನಿಯಲ್ಲಿ, ''ಏಕೆ ಹಿಂದುರುಗಿ ಓಡುತ್ತಿರುವಿರಿ? ನೀವು ವೀರರೇ ಆಗಿದ್ದರೂ, ಹೇಡಿಗಳಾಗಿದ್ದರೂ ಸಾವೆಂಬ ಶತ್ರುವು ನಿಮ್ಮನ್ನು ಹೇಗಾದರೂ ಹಿಂಬಾಲಿಸುತ್ತಿರುವುದಲ್ಲವೆ? ಆದ್ದರಿಂದ ಯುದ್ಧಮಾಡಿ ಸಾಯುವುದೇ ಮೇಲು. ಸ್ವರ್ಗದಲ್ಲಿ ನಿಮ್ಮವರನ್ನು ಕೂಡಿಕೊಳ್ಳುವಿರಿ. ನೀವೇಕೆ ಪಾಂಡವರಿಗೆ ಅಂಜುವಿರಿ? ಬನ್ನಿ, ನಾವೆಲ್ಲರೂ ಸಾಧ್ಯವಾದಷ್ಟೂ ಹೋರಾಡೋಣ; ಉಳಿದುದನ್ನು ವಿಧಿ ನೋಡಿಕೊಳ್ಳಲಿ ಎಂದು ಹುರಿದುಂಬಿಸಲು, ಸೈನಿಕರೆಲ್ಲ ಉರಗಪತಾಕನ ಸುತ್ತ ನೆರೆದರು. ದುರ್ಯೋಧನನು ಪ್ರತಿಯಮನಂತೆ ಯುದ್ಧಮಾಡುತ್ತ, ತಾನೊಬ್ಬನೇ ಪಾಂಡವ ಸೈನ್ಯವನ್ನು ಮುಂದುವರೆಯದಂತೆ ತಡೆದನು. ರಾಜನ ಬಾಣಪ್ರವಾಹದ ಮುಂದೆ ಪಾಂಡವವೀರರೆಲ್ಲ ನಿಸ್ಸಹಾಯಕರಾಗಿಬಿಟ್ಟರು. ಶಕುನಿಯು ತನ್ನ ಮಗ ಉಲೂಕನೊಂದಿಗೆ ದುರ್ಯೋಧನನ ಜೊತೆಯಲ್ಲಿ ಯುದ್ಧ ಮಾಡುತ್ತಿದ್ದನು. ಅಳಿದುಳಿದ ಇನ್ನಿತರ ಧಾರ್ತರಾಷ್ಟ್ರರೂ ಅಲ್ಲಿಗೆ ಬಂದರು. ಭೀಮನು ಮುಂದೆ ಹೋಗಿ ಅವರೆಲ್ಲರನ್ನೂ ಎದುರಿಸಿದನು. ಸುದರ್ಶನನೊಬ್ಬನ ಹೊರತಾಗಿ ಉಳಿದ ಧಾರ್ತರಾಷ್ಟ್ರರೆಲ್ಲರೂ ಭೀಮನಿಂದ ಹತರಾದರು. ಘಟನೆಗಳೆಲ್ಲ ಬೇಗಬೇಗನೆ ಜರುಗಿದವು. ಅಳಿದುಳಿದ ತ್ರಿಗರ್ತರ ಜೊತೆಗೆ ಹೋರಾಡುತ್ತಿದ್ದ ಅರ್ಜುನನು ಕೊನೆಗೂ ಸುಶರ್ಮನನ್ನು ಕೊಂದುಹಾಕಿದನು. ಅಲ್ಲಿಗೆ ತ್ರಿಗರ್ತರ ಪರ್ಯವಸಾನ ಪೂರ್ಣವಾಯಿತು.

ಶಕುನಿಯು ರಾವುತರ ನಡುವೆ ಇದ್ದ ದುರ್ಯೋಧನನನ್ನು ನೋಡಿದನು. ರಾಜನಿಗೆ ಉಳಿದಿದ್ದ ಸಹೋದರನೆಂದರೆ ಸುದರ್ಶನನೊಬ್ಬನೇ. ಭೀಮನು ಅರ್ಜುನನೊಡನೆ ಮಹಾವೇಗದಿಂದ ಗಜ ಸೈನ್ಯವನ್ನು ಹಾದು ಅವನಿದ್ದಲ್ಲಿಗೆ ಬಂದು ದುರ್ಯೋಧನನ ಹೊಡೆತಗಳನ್ನು ಸ್ವಲ್ಪವೂ ಲೆಕ್ಕಿಸದೆ ಹೋರಾಡಿ ಅವನನ್ನೂ ಕೊಂದುಹಾಕಿದನು. ಉಳಿದವನು ದುರ್ಯೋಧನನೊಬ್ಬನೇ.

ಈಗ ಉಲೂಕನೊಡನೆ ಶಕುನಿಯು ಗಜಸೈನ್ಯವನ್ನು ತಂದು ಯುದ್ಧವನ್ನು ಸಂಕುಲವಾಗಿಸಿದನು. ನಕುಲ ಸಹದೇವರು ಅವರಿಬ್ಬರೊಡನೆ ಹೋರಾಡಿದರು.

ಮುಂದುವರಿಯುವುದು...

# ರಾಸಾಯನಿಕ ಮುಕ್ತ ಕೃಷಿಯಾಗಬೇಕು



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

• ಉದಯವಾಹಿನಿ, ವಿಶೇಷ

ಬೆಳೆಗಳನು ಬೆಳೆಯುತಲಿ ರೈತರೆಲ್ಲರು ಸಾಗಿ
ಮಳೆಯನ್ನು ಬಯಸುತಲಿ ಕೆಲಸ ಮಾಡಿ
ಕಳೆಯಲ್ಲ ತೆಗೆಯುತಲಿ ಫಲವನ್ನು ಬಯಸುತಲಿ
ಗಳಿಗೆಯನು ಕಾಯುತಲಿ ಲಕ್ಷ್ಮಿ ದೇವಿ.....

ಯಾವುದೇ ಬೆಳೆಗಳನ್ನು ಬೆಳೆಯುವಾಗ ರೈತರೆಲ್ಲರೂ ಒಂದುಗೂಡಿ ಬೆಳೆಯುತ್ತಾರೆ. ಅದೇ ರೀತಿ ಮಳೆಯನ್ನು ಬಯಸುತ್ತಲೇ ಕೆಲಸವನ್ನು ಮಾಡುತ್ತಾರೆ. ಬೆಳೆಯಲ್ಲಿರುವ ಕಳೆಗಳನ್ನು ತೆಗೆದುಹಾಕಿ. ಹಾಕಿದ ಬೆಳೆಗಳಲ್ಲಿ ಫಲವನ್ನು ಬಯಸುತ್ತಾರೆ. ಆ ಬೆಳೆಗೋಸ್ಕರ ಗಳಿಗೆಗಳನ್ನು ಕಾಯುತ್ತಾರೆ. ಹಾಗೆಯೇ ಆ ಬೆಳೆಯನ್ನು ಬೆಳೆಯಬೇಕಾದರೆ ಯಾವುದೇ ರೀತಿಯ ರಾಸಾಯನಿಕ ಮುಕ್ತ ಕೃಷಿ ಮಾಡಲು ನೈಸರ್ಗಿಕವಾದ ಗೊಬ್ಬರಗಳನ್ನು ಬಳಸಬೇಕು. ನಾವು ರೈತರಿಲ್ಲದೆ ಯಾವುದೇ ಬೆಳೆಯನ್ನು ಬೆಳೆಯಲು ಆಗದಂತಹ ಸ್ಥಿತಿಯನ್ನು ನೋಡಲು ಸಾಧ್ಯವಿಲ್ಲ.ದೇಶದಲ್ಲಿ ರಾಸಾಯನಿಕ ಮುಕ್ತ ಕೃಷಿ ಮಾಡಲು ರೈತರು ಕೈಜೋಡಿಸಿ ದಾಗ ಮಾತ್ರ. ಒಳ್ಳೆಯ ಆಹಾರಪದಾರ್ಥಗಳನ್ನು ಬೆಳೆಯಬಹುದು.

ಅಂತಹ ಬೆಳೆಗಳಲ್ಲಿ ತರಕಾರಿಯೂ ಒಂದು. ನಾವು ಉತ್ತಮವಾದ ತರಕಾರಿಗಳನ್ನು ಪಡೆಯಬಹುದು. ನಮ್ಮ ಭಾರತ ದೇಶದಲ್ಲಿ ಬಹಳಷ್ಟು ರೈತರು ಕಷ್ಟಪಡುವುದು ವ್ಯವಸಾಯದಲ್ಲಿ ಎಂಬುದು ಎಲ್ಲರಿಗೂ ಅರಿವಿದೆ.ಅವರ ಶ್ರಮಕ್ಕೆ ಪ್ರತಿಫಲ ಸಿಗುತ್ತಿಲ್ಲ. ಮಧ್ಯಪ್ರದೇಶದ ಅತಿದೊಡ್ಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನಿಗಳು 15 ಬಗೆಯ ಸಾವಯವ ಗೊಬ್ಬರಗಳನ್ನು ಸಿದ್ಧಪಡಿಸಿದ್ದಾರೆ.ಅವರ ಹೆಸರನ್ನು ಜವಾಹರ್ ಫರ್ಟಿಲೈಜರ್ಸ ಎಂದು ಹೆಸರಿಸಲಾಗಿದೆ. ಅದನ್ನು ತಿಳಿದುಕೊಳ್ಳಬೇಕು.ವಿಜ್ಞಾನಿಗಳ ಪ್ರಕಾರ ಜವಾಹರ್ ಗೊಬ್ಬರದ ಬಳಕೆಯಿಂದ ಉತ್ಪಾದನೆ ಹೆಚ್ಚಾಗುವುದರ ಜೊತೆಗೆ ಅವುಗಳ ಗುಣಮಟ್ಟವು ಸಾಕಷ್ಟು ಸುಧಾರಿಸುತ್ತದೆ ಎಂದು ಹೇಳಲಾಗುತ್ತಿದೆ. ಪ್ರಸ್ತುತ ನಮ್ಮ ರೈತರು ಸಾವಯವ ಗೊಬ್ಬರವನ್ನು ಬಳಸುವುದನ್ನು ಕಡಿಮೆ ಮಾಡಿರುವುದು ಬಹಳ ಆತಂಕಕ್ಕೆ ಒಳಗಾಗುವಂತೆ ಮಾಡಿದೆ. ನಮ್ಮ ದೇಶದಲ್ಲಿ ರೈತರೆಲ್ಲ ಒಂದುಗೂಡಿ ಬಳೆಗಳು ಬಗ್ಗೆ ಚರ್ಚೆಯನ್ನು ಮಾಡುವುದು ಅವಶ್ಯಕತೆ ಇದೆ. ಆ ಬೆಳೆಯನ್ನು ಬೆಳೆಯಲು ಬೇಕಾದಂತಹ ವಸ್ತುಗಳ ಬಗ್ಗೆ ತರಬೇತಿಗಳನ್ನು ನೀಡುವ ಅವಶ್ಯಕತೆ ಇದೆ.ದೇಶದಲ್ಲಿ ರಾಸಾಯನಿಕ ಮುಕ್ತ ಕೃಷಿ ಮಾಡಲು ಸಿದ್ಧತೆ ನಡೆದಿದೆ.ಇದಕ್ಕಾಗಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳಿಗೆ ಪರ್ಯಾಯವಾಗಿ ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಅದನ್ನು ರೈತರ ಸಂಘಗಳಲ್ಲಿ ವಿಚಾರಗಳ ತಿಳಿಸುವ ಕಾರ್ಯವನ್ನು ಮಾಡುತ್ತಿದ್ದಾರೆ.ಸಾವಯವ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಗೆ ಒತ್ತು ನೀಡಲಾಗುತ್ತಿದೆ.ಸಾವಯವ ಕೃಷಿ ಮಾಡಲು ರೈತರಿಗೆ ಉತ್ತೇಜನ ನೀಡಲಾಗುತ್ತಿದೆ. ಅದನ್ನು ನಮ್ಮ ರೈತರು ಯಾವುದೇ ನಿಯಮವನ್ನು ಮೀರದಂತೆ ಪಾಲಿಸಬೇಕಾಗಿದೆ ಇದರೊಂದಿಗೆ ಈಗ ಶೂನ್ಯ ಬಜೆಟ್ ನೈಸರ್ಗಿಕ ಕೃಷಿಗೂ ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ. ಇಂದಿನ ಪ್ರಸ್ತುತ ದಿನಮಾನಗಳಲ್ಲಿ ಬೆಳೆಗಳನ್ನು ಬೆಳೆಯುವ ರೈತರು ಕಡಿಮೆಯಾಗುತ್ತಿದ್ದಾರೆ. ರೈತರಿಗೆ ಹೆಚ್ಚಿನ ಆದಾಯ ದೊರೆ ಯದ ಕಾರಣ ನಗರಗಳಿಗೆ ಯುವಕರು ಬೇರೆ ಕೆಲಸಗಳಿಗೆ ಹೋಗುವುದನ್ನು ಕಾಣುತ್ತಿದ್ದೇವೆ. ಹೀಗಿರುವಾಗ ಮಧ್ಯಪ್ರದೇಶದಿಂದ ಶುಭ ಸುದ್ದಿಯೊಂದು ಬಂದಿದೆ.ಅಲ್ಲಿ ಕೃಷಿ ವಿದ್ಯಾಲಯದ ವಿಜ್ಞಾನಿಗಳು ಸಾವಯವ ಗೊಬ್ಬರಗಳನ್ನು ಉತ್ಪಾದಿಸುವಲ್ಲಿ ಉತ್ತಮ ಯಶಸ್ಸು ಸಾಧಿಸಿದ್ದಾರೆ. ಇದು ನಮ್ಮ ರೈತರು ತಿಳಿದಿರುವಂತಹ ವಿಷಯವೇ. ಈ ಗೊಬ್ಬರಗಳನ್ನು ಬಳಸುವುದರಿಂದ ರೈತರು ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿಯನ್ನು ಪಡೆಯಬಹುದು. ಇದರ ಅರಿವನ್ನ ಪ್ರತಿಯೊಬ್ಬರು ಅರಿತುಕೊಂಡು ಅದನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಮತ್ತು ಅದರಲ್ಲಿ ಕೀಟ ಮತ್ತು ರೋಗಗಳ ಅಪಾಯ ಕಡಿಮೆ ಎಂದು ಹೇಳಲಾಗುತ್ತಿದೆ.ಮಾಧ್ಯಮ ವರದಿಗಳ ಪ್ರಕಾರ ರಾಜ್ಯದ ಅತಿದೊಡ್ಡ ಕೃಷಿ ವಿಶ್ವವಿದ್ಯಾಲಯವು ಸಾವಯವ ಗೊಬ್ಬರಗಳನ್ನು ತಯಾರಿಸುವ ಮೂಲಕ ರೈತರ ಈ ಸಮಸ್ಯೆಯನ್ನು ಪರಿಹರಿಸಿವೆ. ನಮ್ಮ ರೈತರು ಬೆಳೆಗಳನ್ನು ಬೆಳೆಯುವಾಗ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಾರೆ. ಹಾಗೆಯೇ ಬಹಳ ವಿಧದ ಪ್ರಯೋಗಗಳನ್ನು ಮಾಡುತ್ತಿರುತ್ತಾರೆ. ಅದರಲ್ಲಿ ಗಮನಾರ್ಹವಾಗಿ ರಾಜ್ಯದ ರೈತರು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು 25 ಪ್ರತಿಶತದಷ್ಟು ಕಡಿತಗೊಳಿಸಿದ್ದಾರೆ.ಇದರೊಂದಿಗೆ ಶೇ 15 ರಿಂದ ಶೇ 20 ರಷ್ಟು ಉತ್ಪಾದನೆಯನ್ನೂ ಹೆಚ್ಚಿಸಲಾಗಿದೆ. ಅದರ ನಿಯಮಗಳನ್ನು ಅರಿತು ಸರಿಯಾಗಿ ಬಳಕೆ ಮಾಡುವುದರಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದು. ಆಗ ರೈತರಿಗೆ ಲಾಭವು ಹೆಚ್ಚಾಗುತ್ತದೆ.


ಉದಯವಾಹಿನಿ ಚಿತ್ರ

> *ಸಾವಯವ ಗೊಬ್ಬರದಿಂದ ಬಹಳಷ್ಟು ಉಪಯೋಗವಿದೆ ಎಂದು ತಿಳಿಸಿದರು. ಸಾವಯವ ಗೊಬ್ಬರದಿಂದ ರೈತರು ದೀರ್ಘಕಾಲ ಕೃಷಿ ಮಾಡಬಹುದು. ಅದರಿಂದ ರೈತರಿಗೆ ಅನುಕೂಲವಿದೆ ಎಂದು ತಿಳಿಸಿದರು ಪರಿಸರ ಮತ್ತು ಮಣ್ಣಿನ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ. ಯಾವುದೇ ಭಯವಿಲ್ಲದೆ ಕಾರ್ಯವನ್ನು ನಿರ್ವಹಿಸಬಹುದು ಎಂದು ತಿಳಿಸಿದರು.

### ಸಾವಯವ ಗೊಬ್ಬರದಿಂದ ಉಪಯೋಗ

ಈ ಗೊಬ್ಬರಗಳನ್ನು ಬಳಸುವುದರಿಂದ ರೈತರು ಕಡಿಮೆ ರಾಸಾಯನಿಕ ಗೊಬ್ಬರಗಳ ನಿರಂತರ ಬಳಕೆಯಿಂದ ಇದು ಮಣ್ಣಿನಲ್ಲಿ ಉಳಿಯುತ್ತದೆ ಎಂದು ನಂಬಲಾಗಿದೆ. ಆದ್ದರಿಂದ ಸಾವಯವ ಗೊಬ್ಬರಗಳನ್ನು ಸತತ ಮೂರು ವರ್ಷದ ವರೆಗೆ ಬಳಸಬೇಕು ಎಂದು ಸಲಹೆ ನೀಡಿದರು. ಅವರು ತಿಳಿಸಿದಂತೆ ರೈತರು ಬಳಕೆಯನ್ನು ಅನುಸರಿಸಬೇಕೆಂದು ತಿಳಿಸಿದರು. ನಂತರ ರೈತರು ರಾಸಾಯನಿಕ ಗೊಬ್ಬರಗಳಿಂದ ಮುಕ್ತರಾಗುತ್ತಾರೆ. ವಿಧಾನವೆಂದರೆ ಮೊದಲ ವರ್ಷ 25 ಪ್ರತಿಶತ ರಾಸಾಯನಿಕ ಗೊಬ್ಬರಗಳನ್ನು ಬಳಸಲಾಗುತ್ತಿದ್ದು, ಅದನ್ನು ಅರಿತಿದ್ದರು. ಎರಡನೇ ವರ್ಷ 50 ಪ್ರತಿಶತ ಹಾಗೂ ಮೂರನೇ ವರ್ಷ 75 ಪ್ರತಿಶತದಷ್ಟು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ ಅದರ ಉಪಯೋಗವನ್ನು ಪಡೆದುಕೊಂಡಿದ್ದರು. ನಾಲ್ಕನೇ ವರ್ಷದಲ್ಲಿ ಸಂಪೂರ್ಣ ಸಾವಯುವ ಗೊಬ್ಬರಗಳನ್ನು ಬಳಸಲಾಗುತ್ತಿದೆ. ಇಂದಿಗೂ ಪ್ರಸ್ತುತ ದಿನಮಾನಗಳಲ್ಲಿ ರೈತರು ಈ ವಿಧಾನಗಳನ್ನು ಅಳವಡಿಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಹೇಳಬೇಕೆಂದರೆ ರೈತರ ಕಷ್ಟವನ್ನು ಅರಿಸಿಕೊಂಡ ಜವಾಹರ್ ಕೃಷಿ ವಿಶ್ವವಿದ್ಯಾಲಯ ವಿಜ್ಞಾನಿಗಳು ಸಿದ್ದಪಡಿಸಿದ ರಸಗೊಬ್ಬರಗಳು ಎರಡು ವಿಧವಾಗಿದ್ದು,ರೈತರಿಗೆ ಪುಡಿ ದ್ರವ ಗೊಬ್ಬರಗಳು ಸಿಗುತ್ತವೆ. ಎಂಬುದು ಎಲ್ಲರಿಗೂ ಪ್ರಚಾರಗೊಳಿಸಿ ರೈತರು ಯಾವ ಗೊಬ್ಬರಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದರ ಮೇಲೆ ಅವಲಂಬಿಸಿರುತ್ತದೆ ಎಂಬುದನ್ನು ತಿಳಿಸಿದರು. ರೈತರು ಒಂದು ವರ್ಷದ ವರೆಗೆ ದ್ರವರೂಪದ ಗೊಬ್ಬರಗಳನ್ನು ಬಳಸುವ ಬದಲು ಆರು ತಿಂಗಳು ಕಾಲ ಪುಡಿಮಾಡಿದ ಸಾವಯವ ಗೊಬ್ಬರಗಳನ್ನು ಕೃಷಿಗೆ ಬಳಸಬಹುದು. ಎಂಬುದನ್ನು ರೈತರಿಗೆ ತಿಳಿಸಲಾಯಿತು. ಅದನ್ನು ಯಾವ ರೀತಿಯಾಗಿ ಬಳಸಬೇಕೆಂಬುದನ್ನು ರೈತರಿಗೆ ಅರಿವು ಮೂಡಿಸಿದರು ಅದರ ಉಪಯೋಗಗಳನ್ನು ತಿಳಿಸಿದರು. ಸಾವಯವ ಗೊಬ್ಬರಗಳ ಬಳಕೆಯ ಪ್ರಯೋಗಗಳು ಯಾವುವು ಎಂಬುದನ್ನು ತಿಳಿಸಿದರು.

★ ಇದು ಬಹಳಷ್ಟು ಕಡಿಮೆ ಬೆಲೆಯಲ್ಲಿ ದೊರೆಯುತ್ತದೆ ಎಂದು ತಿಳಿಸಿದರು. ಈ ಗೊಬ್ಬರಗಳು ಅಗ್ಗವಾಗಿದ್ದು,ರೈತರು ತಮ್ಮ ಮನೆಯಲ್ಲಿಯೇ ತಯಾರಿಸಬಹುದು.ಆದ್ದರಿಂದ ರಾಸಾಯನಿಕ ಗೊಬ್ಬರಗಳನ್ನು ಖರೀದಿಸುವುದಕ್ಕಿಂತ ರೈತರಿಗೆ ಕಡಿಮೆ ವೆಚ್ಚವಾಗುವುದು.ಇದರಿಂದ ರೈತರ ಖರ್ಚು ಕಡಿಮೆಯಾಗಿ ಆದಾಯ ಹೆಚ್ಚಾಗುವುದು. ಯಾವುದೇ ರೀತಿಯ ಸಾಲದ ಹೊರೆ ಬಿಡುವುದಿಲ್ಲ ಎಂದು ತಿಳಿಸಿದರು.

★ ಇದಕ್ಕೆ ಬಹಳಷ್ಟು ಬೇಡಿಕೆ ಇದ್ದು.ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ತಕ್ಕ ,ಅದರ ಬೆಲೆಯೂ ಉತ್ತಮವಾಗಿದೆ. ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಂಡರು.

★ ಒಟ್ಟಾರೆ ನಮ್ಮ ರೈತರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವರಿಗೆ ಕೃಷಿಗೆ ಅನುಕೂಲವಾಗುವಂತಹ ಗೊಬ್ಬರಗಳನ್ನು ನೀಡಬೇಕು. ರಾಸಾಯನಿಕ ಮುಕ್ತ ಕೃಷಿ ಆಗುವಂತೆ ಮಾಡಬೇಕೆಂಬುದು ನನ್ನಯ ಒಂದು ಕಳಕಳಿ. ಏಕೆಂದರೆ ಪ್ರಸ್ತುತ ದಿನಮಾನಗಳಲ್ಲಿ ಸಿಗುತ್ತಿರುವಂತಹ ಆಹಾರ ಪದಾರ್ಥಗಳು ಕಳಪೆಯಾಗುತ್ತಿವೆ. ಎಷ್ಟೇ ಉತ್ತಮ ಆಹಾರವನ್ನು ಸೇವಿಸಿದರು ಆಹಾರವೇ ರಾಸಾಯನಿಕವಾಗುತ್ತಿದೆ. ಅಂತಹದರಲ್ಲಿ ಆರೋಗ್ಯದ ಜೀವನ ಮಾಡುವುದು ಹೇಗೆ ಎಂಬುದನ್ನು ಅರಿತುಕೊಂಡರೆ ಅನಿವಾರ್ಯವೇ ಎಂದು ತಿಳಿದುಕೊಳ್ಳಿ ರಾಸಾಯನಿಕ ಮುಕ್ತ ಕೃಷಿಯ ಅವಶ್ಯಕತೆ ಇದೆ. ಮುಂದಿನ ಪೀಳಿಗೆಗೆ ಬರಬೇಕಾದಂತಹ ಮಕ್ಕಳುಗಳು ಸಹ ಗರ್ಭಾವಸ್ಥೆಯಲ್ಲಿ ರಾಸಾಯನಿಕ ವಸ್ತುಗಳನ್ನು ಸೇವಿಸಿದಂತೆ ಮಾಡದಿರಿ ನಾವು ತರಕಾರಿ ಎಂದುಕೊಂಡದ್ದು ವಿಷ ವಾಗುವಂತೆ ಮಾಡದಿರಿ.

# ಮಾನವೀಯ ಮೌಲ್ಯಗಳು ಹಂತ- ಹಂತವಾಗಿ

## ಸಮಾಜದಿಂದ ಮಾಯವಾಗುತ್ತಾ ಸಾಗುತ್ತಿವೆ



ಕೃಷ್ಣಪ್ಪ

• ಉದಯವಾಹಿನಿ, ವಿಶೇಷ

ಮಾನವ, ಮಾನವನ ನಡುವೆ ಇರುವ ಅವಿನಾಭಾವ ಸಂಬಂಧ, ಮಾನವ ವಿಕಾಸ, ಮಾನವ ಧರ್ಮ, ಮಾನವೀಯತೆ ಹಾಗೂ ಮಾನವೀಯ ಮೌಲ್ಯಗಳು ಇವುಗಳ ಅರ್ಥ ತಿಳಿದವನು ನಿಜಕ್ಕೂ ಉತ್ತಮ ಹೃದಯವಂತ ಮಾನವನಾಗುತ್ತಾನೆ. ಸಮ ಸಮಾಜದಲ್ಲಿ ನಾವಿದ್ದೇವೆ ಎಂಬ ಭ್ರಮೆ ಹಾಗೂ ಹಗಲು ಕನಸು ಕಾಣುತ್ತಿದ್ದೇವೆ ಎಲ್ಲವೂ ಮರೀಚಿಕೆ. ಹೇಳುವುದು, ಕೇಳುವುದು ಸುಲಭ ಆದರೆ ಕಾರ್ಯರೂಪಕ್ಕೆ ತಂದು ಅನುಸರಿಸುವುದು ಹಾಗೂ ಅನುಷ್ಠಾನಕ್ಕೆ ತರುವುದು ಈ ಕಲಿಯುಗಕ್ಕೆ ಸಾಧ್ಯವಿಲ್ಲ.

ರಾಷ್ಟ್ರಕವಿ, ರಸಋಷಿ, ಜಗದ ಕವಿ ಕುವೆಂಪುರವರ ಅಮರವಾಣಿ ಸರ್ವರಿಗೂ ಸಮಪಾಲು ಮತ್ತು ಸಮಬಾಳು ಎಂಬ ಸಂದೇಶ ಮರೆತಿರುವ ಕಾಲಘಟ್ಟದಲ್ಲಿ ನಾವು ಜೀವಿಸುತ್ತಿದ್ದೇವೆ. ಮಾನವ ನಕಾರಾತ್ಮಕ ಚಿಂತನೆ ಬಿಟ್ಟು ದಿನನಿತ್ಯ ಸಕಾರಾತ್ಮಕ ಚಿಂತನೆಗಳೊಂದಿಗೆ ಬದುಕನ್ನು ಕಟ್ಟಿಕೊಂಡು ಸಾಧಕ-ಬಾಧಕಗಳನ್ನು ಅರ್ಥ ಮಾಡಿಕೊಂಡು ಬದ್ಧತೆಯಲ್ಲಿ ಬದುಕಬೇಕು. ಒಂದು ಕಡೆ ಗ್ರಾಮಾಂತರ ಜನರು ಆರ್ಥಿಕವಾಗಿ ದಿವಾಳಿಯಾಗಿ, ನೈತಿಕ ಮತ್ತು ಸಾಂಸ್ಕೃತಿಕ ದಿವಾಳಿತನವನ್ನು ಎದುರಿಸುತ್ತಿದ್ದಾರೆ. ಮತ್ತೊಂದು ಕಡೆ ನಗರದಲ್ಲಿ ವಿದ್ಯಾವಂತರು ಮತ್ತು ಆರ್ಥಿಕವಾಗಿ ಸಬಲರಾಗಿರುವ ಜನರಲ್ಲೂ,ನೈತಿಕ ಮತ್ತು ಸಾಂಸ್ಕೃತಿಕ ದಿವಾಳಿತನವನ್ನು ಕಾಣುತ್ತೇವೆ. ಇದಕ್ಕೆ ಕಾರಣವೆಂದರೆ ಜನರಲ್ಲಿ ಮತ್ತು ಸಮಾಜದಲ್ಲಿ ಮೌಲ್ಯಗಳ ಕೊರತೆ ಇರುವುದಾಗಿದೆ. ಒಂದು ದೇಶಕ್ಕೆ ಜನರು ದೇಹ ಇದ್ದಂತೆ. ಜನರಲ್ಲಿ ಮತ್ತು ಸಮಾಜದಲ್ಲಿ ಮೌಲ್ಯಗಳು ಆತ್ಮ ಇದ್ದಂತೆ. ಮೌಲ್ಯಗಳು ಜನರ ಜೀವನವನ್ನು ನಿಯಂತ್ರಿಸುತ್ತವೆ ಮತ್ತು ಸಮಾಜಕ್ಕೆ ಸರಿ ದಾರಿಯನ್ನು ತೋರಿಸುತ್ತವೆ.

ಒಳ್ಳೆಯ ಮೌಲ್ಯಗಳನ್ನು ರೂಢಿಸಿಕೊಳ್ಳುವುದು ಮತ್ತು ಬೆಳೆಸುವುದು ಹಾಗೂ ಹಂಚಿಕೊಂಡು ಹಂಚುವುದು ಪ್ರತಿಯೊಬ್ಬ ವ್ಯಕ್ತಿಯ ಮತ್ತು ಒಟ್ಟು ಸಮಾಜದ ಕೆಲಸ. ಸತ್ಯ,ದಯೆ,ಧರ್ಮ, ತ್ಯಾಗ,ಅನುಕಂಪ,ಕರುಣೆ, ನೈತಿಕತೆ,ಪ್ರಾಮಾಣಿಕತೆ ಇತ್ಯಾದಿ ಮೌಲ್ಯಗಳಿವೆ. ಒಂದು ಮೌಲ್ಯವನ್ನು ನಾವು ರೂಡಿಸಿಕೊಂಡರೆ ಅದರ ಸುತ್ತ ಹತ್ತಾರು ಮೌಲ್ಯಗಳು ಹುಟ್ಟಿಕೊಂಡು ಬೆಳೆಯುತ್ತವೆ. ನನ್ನ ಸ್ವಂತ ದುಡಿಮೆಯಿಂದ ನನ್ನ ಅನ್ನವನ್ನು ಸಂಪಾದಿಸಿಕೊಳ್ಳುತ್ತೇನೆ ಎಂಬುದು ಒಂದು ಮೌಲ್ಯ. ಇಂಥಹ ಮೌಲ್ಯವನ್ನು ರೂಡಿಸಿಕೊಂಡರೆ ಇನ್ನೊಬ್ಬರ ಅನ್ನವನ್ನು ಕಬಳಿಸುವುದಿಲ್ಲ, ಇನ್ನೊಬ್ಬರನ್ನು ವಂಚಿಸುವುದಿಲ್ಲ, ಶೋಷಣೆ ಮಾಡುವುದಿಲ್ಲ, ದುಂದು ವೆಚ್ಚ ಮಾಡುವುದಿಲ್ಲ, ಅನ್ನವನ್ನು ಪೋಲು ಮಾಡುವುದಿಲ್ಲ.

ಆಗ ಬೆವರಿನ ಬೆಲೆ ಏನೆಂದು ತಿಳಿಯುತ್ತದೆ ಹೀಗೆ ಒಂದು ಮೌಲ್ಯದ ಸುತ್ತ ಹತ್ತಾರು ಮೌಲ್ಯಗಳು ಯಥಾಪ್ರಕಾರ ಹುಟ್ಟಿಕೊಂಡು ಬೆಳೆಯುತ್ತವೆ. ನಮ್ಮ ಖಾಸಗಿ ಜೀವನದಲ್ಲಿ,ಸಾಮಾಜಿಕ ಜೀವನದಲ್ಲಿ, ವೃತ್ತಿಜೀವನದಲ್ಲಿ ಮತ್ತು ನಮ್ಮ ಆಡಳಿತದಲ್ಲಿ ಮೌಲ್ಯಗಳನ್ನು ಅನುಸರಿಸಬೇಕಾಗಿದೆ. ಕಂಡುಬಂದ ಅನ್ಯಾಯ, ಅಧರ್ಮ ಇತ್ಯಾದಿಗಳ ಬಗ್ಗೆ ಮೌನವಹಿಸುವುದು ಸಹ ಅಧರ್ಮ, ಅನೈತಿಕತೆ. ಸತ್ಯಮಾರ್ಗದಲ್ಲಿ ನಾವು ನಡೆಯೋಣ, ಸತ್ಯವನ್ನು ಮಾತನಾಡೋಣ ಮತ್ತು ಸತ್ಯವನ್ನೇ ನೋಡೋಣ. ಅನ್ಯಾಯ ವಿರುದ್ಧ ಪ್ರತಿಭಟಿಸೋಣ. ನೈತಿಕತೆಯನ್ನು ಎತ್ತಿ ಹಿಡಿಯೋಣ. ಸತ್ಯವ ನುಡಿವುದೇ ದೇವಲೋಕ,ಮಿಥ್ಯವ ನುಡಿವುದೇ ಮರ್ತ್ಯಲೋಕ ಎಂಬ ಬಸವಣ್ಣನವರ ವಾಣಿಯನ್ನು ತಿಳಿಯಬೇಕಾಗಿದೆ. ಸತ್ಯವನ್ನ ತಿಳಿಯುವುದು ಜ್ಞಾನಮಾರ್ಗ,ಸತ್ಯವನ್ನು ನಂಬುವುದು ಭಕ್ತಿಮಾರ್ಗ, ಸತ್ಯದ ಪಥದಲ್ಲಿ ನಡೆಯುವುದೇ ಮುಕ್ತಿಮಾರ್ಗ ಎಂಬ ಅಮರವಾಣಿಯನ್ನು ನಾವೆಲ್ಲಾ ಅರ್ಥೈಸಿಕೊಳ್ಳಬೇಕಾಗಿದೆ. ಸದ್ಯದ ಕಾಲಘಟ್ಟದಲ್ಲಿ ಮಾನವೀಯ ಮೌಲ್ಯಗಳು ಮಲಗಿದ್ದು, ಹಣವು ಮಾತನಾಡಲು ಪ್ರಾರಂಭಿಸಿವೆ.ಇಂತಹ ಪರಿಸ್ಥಿತಿಯಲ್ಲಿ ನಾವು ಜೀವಿಸುತ್ತಿದ್ದೇವೆ ಎಂತಹ ವಿಪರ್ಯಾಸ. ಮಾನವೀಯ ಮೌಲ್ಯಗಳು ಹಾಗೂ ಭಾರತೀಯ ಸುಸಂಸ್ಕೃತ ಉಳ್ಳ ಸಂಸ್ಕೃತಿಗಳು, ಸಂಸ್ಕಾರಗಳು ಮಾಯವಾಗಿ ಮುಂದಿನ ಭವಿಷ್ಯಕ್ಕೆ ಭಾರಿ ಪೆಟ್ಟಾಗಿ ಆತಂಕಗಳು ಎದುರಾಗುವ ಸನ್ನಿವೇಶಗಳು ಸಮೀಪದಲ್ಲಿಯೇ ಇವೆ. ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಭವಿಷ್ಯದಲ್ಲಿ ಭಾರಿ ಗಂಡಾಂತರವನ್ನು ರಾಷ್ಟ್ರ ಎದುರಿಸಬೇಕಾಗುತ್ತದೆ.


ಉದಯವಾಹಿನಿ ಚಿತ್ರ

### ಎಚ್ಚರ !ಎಚ್ಚರ! ಎಚ್ಚರ!

ಎಚ್ಚರ ವಹಿಸದಿದ್ದರೆ ಭವಿಷ್ಯಕ್ಕೆ ಅಪಾಯ ಕಟ್ಟಿಟ್ಟಬುತ್ತಿ. ಕಾಲ,ದೇಶ,ಜಾತಿ,ಧರ್ಮ, ಪಕ್ಷ, ಭಾಷೆ, ಸಂಸ್ಕೃತಿ, ಆಚಾರ ವಿಚಾರ, ಕಟ್ಟುಪಾಡು ಹಾಗೂ ಸಂಪ್ರದಾಯ ಮೀರಿ ನಾವು ಬದುಕಬೇಕು. ಅದೇ ಧರ್ಮ, ಅದೇ ಬದುಕು, ಅದೇ ಜೀವನ, ಅದೇ ಮಾನವೀಯತೆ, ಅದೇ ಮಾನವೀಯ ಮೌಲ್ಯ.

> ಮಾನವ ನಕಾರಾತ್ಮಕ ಚಿಂತನೆ ಬಿಟ್ಟು ಸಕಾರಾತ್ಮಕ ಚಿಂತನೆ

# ಶ್ರೀ ಭೂ ವರಾಹ ಕ್ಷೇತ್ರದ 4ನೇ ವಾರ್ಷಿಕೋತ್ಸವ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಕನಕಪುರ ರಸ್ತೆಯ ತಾತಗುಣಿ ಅಗರ ಗ್ರಾಮದ ಶ್ರೀ ಭೂವರಾಹ ಕ್ಷೇತ್ರ ಸ್ಥಾಪನೆಯಾಗಿ ಮೂರು ವರ್ಷ ಗಳಾಗಿರುತ್ತದೆ. ನಾಲ್ಕನೇ ವಾರ್ಷಿಕೋತ್ಸವದ ನಿಮಿತ್ತ ಜೂನ್ 9 ರಿಂದ 11ರವರೆಗೆ ಹಲವು ಧಾರ್ಮಿಕ ಕೈಂಕರ್ಯ ಗಳನ್ನು ಹಮ್ಮಿಕೊಳ್ಳಲಾಗಿದೆ.

ಭಾನುವಾರ ಜೂನ್ 9ರಂದು ವಿಶೇಷ ಮಧು ಅಭಿಷೇಕ, ಶ್ರೀ ಹರಿವಾಯುಸ್ತುತಿ ಹೋಮ. ಗುರುಪಾದುಕಾ ಪೂಜಾ,ಪ್ರಹ್ಲಾದ ರಾಜರ ರಥೋತ್ಸವ, ಭಜನೆ. ಸೋಮವಾರ ಜೂನ್ ಹತ್ತರಂದು ಶ್ರೀ ಸ್ವಪ್ನ ವೃಂದಾವನಾಖ್ಯಾನ ಮಂತ್ರ ಹೋಮ. ಮಂಗಳವಾರ ಜೂನ್ 11ರಂದು ಪುರುಷ ಸೂಕ್ತ ಹೋಮ,ಭುವನಗಿರಿ ಆಶ್ರಮದ ಪೂಜ್ಯ ಶ್ರೀ ಸುವಿದ್ಯೇಂದ್ರ ತೀರ್ಥ ಶ್ರೀಪಾದರಿಂದ ಕಲಶಾಭಿಷೇಕ ,ಸಂಸ್ಥಾನ ಪೂಜೆ,ಮುದ್ರಾಧಾರಣೆ ,ಆಶೀರ್ವಚನ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಮಠದ ವ್ಯವಸ್ಥಾಪಕರು ತಿಳಿಸಿರುತ್ತಾರೆ. ಅಗರ ಗ್ರಾಮ ಪಂಚಾಯಿತಿ ಎದುರಿನ ರಸ್ತೆಯಲ್ಲಿರುವ ಪ್ರಶಾಂತ ವಾತಾವರಣದ ಶ್ರೀಮಠದಲ್ಲಿ ಭೂವರಾಹ ದೇವರು, ಪ್ರಾಣದೇವರು ಕಲಿಯುಗ ಕಾಮಧೇನು ಕಲ್ಪವೃಕ್ಷರೆನಿಸಿದ ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ಬೃಂದಾವನ ಸನ್ನಿಧಾನ ಇರುವ ಅಪೂರ್ವ ತಾಣ ಇದಾಗಿದೆ. ಭೂವರಾಹ ದೇವರಿಗೆ ಪ್ರಿಯ ಪ್ರಿಯವೆನಿಸಿದ ರೇವತಿ ನಕ್ಷತ್ರದಂದು ಕ್ಷೀರಭಿಷೇಕ ಮಾಡಿಸಿದರೆ ಭೂ ಸಂಬಂಧಿತ ಕೋರಿಕೆಗಳು ಶೀಘ್ರ ನೆರವೇರುತ್ತದೆ ಎಂಬುದು ಭಕ್ತರ ನಂಬಿಕೆ .


ಉದಯವಾಹಿನಿ ಚಿತ್ರ

ಭೂವರಾಹ ಕ್ಷೇತ್ರದಲ್ಲಿ ನಿತ್ಯ ಅನ್ನ ಸಂತರ್ಪಣೆಗಾಗಿ ತುಲಾಭಾರ ಕಾರ್ಯಕ್ರಮದಲ್ಲಿ ಯಥಾಶಕ್ತಿ ದವಸ ಧಾನ್ಯ ಸಮರ್ಪಿಸಲು , ಗೋದಾನ - ಗೋಗ್ರಾಸಗಳಿಗೂ ಅವಕಾಶವಿದೆ. ವಿವರಗಳಿಗೆ 9886767780/9483704996 ಸಂಪರ್ಕಿಸಬಹುದು

# 552 ಕ್ಯೂಸೆಕ್ಸ್ ನೀರು ಬಿಡುಗಡೆ, ಒಳ ಹರಿವು

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯದಲ್ಲಿ ಹಲವು ದಿನಗಳಿಂದ ಉತ್ತಮ ಮಳೆ ಆಗುತ್ತಿದೆ. ಇದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಕಾವೇರಿ ಕೊಳ್ಳದ ಸುತ್ತಮುತ್ತಲಿನ ರೈತರಿಗೆ ಆಧಾರವಾದ ಕೆಆರ್‌ಎಸ್ ಜಲಾಶಯದ ನೀರಿನ ಒಳಹರಿವು ಹೆಚ್ಚಾಗಿದೆ. ಇನ್ನೂ ಮುಂದಿನ ಬೇಸಿಗೆ ವರೆಗೆ ನಿಶ್ಚಿಂತರಾಗಿ ರೈತರು ವ್ಯವಸಾಯ ಮಾಡಬಹುದು.

ರಾಜ್ಯದ ನದಿಗಳು ಮೈದುಂಬಿ ಹರಿಯುತ್ತಿವೆ. ಎರಡು ರಾಜ್ಯಗಳಿಗೆ ಆಧಾರವಾಗಿರುವ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಮಂಡ್ಯದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ 'ಕೃಷ್ಣರಾಜ ಸಾಗರ' ಆಣೆಕಟ್ಟಿನಲ್ಲಿ ಇಂದು ಜೂನ್ 7ರಂದು ನೀರು ಸಂಗ್ರಹ ಹೆಚ್ಚಾಗಿದೆ. ಒಳಹರಿವು ಸಹ ಏರಿಕೆ ಆಗಿದೆ. ಕೆ.ಆರ್‌ಎಸ್ ಜಲಾಶಯದ ಒಟ್ಟು ನೀರು ಸಂಗ್ರಹಣೆ ಸಾಮರ್ಥ್ಯ 49.452 ಟಿಎಂಸಿ. ಇನ್ನೂ ಜಲಾಶಯ ಪೂರ್ಣ ಭರ್ತಿಯಾಗಲು 124.80 ಅಡಿ ಬೇಕಿದೆ. ಅದರಲ್ಲಿ ಇಂದಿಗೆ ಪ್ರಸೆಂಟ್ ಸಂಗ್ರಹಣಾ ಮಟ್ಟ (ಕಋಐ) 84.80 ಅಡಿಯಷ್ಟು ಆಗಿದೆ. ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಕೆಲವು ದಿನಗಳಿಂದ ಸಾಧಾರಣದಿಂದ ಭಾರೀ ಮಳೆ ಆಗಿದೆ. ಮುಂದಿನ ಇನ್ನೋ ಒಂದು ವಾರ ಮಳೆ ಆಗಲಿದ್ದು, ಇನ್ನಷ್ಟು ಒಳ ಹರಿವು, ನೀರಿನ ಸಂಗ್ರಹಣೆ ಹೆಚ್ಚಾಗಲಿದೆ. ಇಂದು ಶುಕ್ರವಾರ ಕೆಆರ್‌ಎಸ್ ಜಲಾಶಯದ ಒಳಹರಿವು 1823 ಕ್ಯೂಸೆಕ್ ಹಾಗೂ ಜಲಾಶಯದಿಂದ ನದಿಗೆ 502 ಕ್ಯೂಸೆಕ್ ನೀರು ಹರಿಸಲಾಗುತ್ತದೆ.


ಉದಯವಾಹಿನಿ ಚಿತ್ರ

ಇನ್ನೂ ಆಣೆಕಟ್ಟಿನಿಂದ ಕಾಲುವೆಗಳಿಗೆ 50 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಇದೆಲ್ಲ ಜಲ ಮೂಗಳಿಗೆ ಆಣೆಕಟ್ಟಿನಿಂದ ಒಟ್ಟು 552 ಕ್ಯೂಸೆಕ್ಸ್ ನೀರು ಹೊರ ಹರಿವಿನ ಮೂಲಕ ಬಿಡಲಾಗುತ್ತದೆ. ಕೆಆರ್‌ಎಸ್ ಜಲಾಶಯದಲ್ಲಿ ಇಂದು ಶೇಕಡಾ 26.42 ರಷ್ಟು ಸಂಗ್ರಹಣೆ ಆಗಿದೆ. ಮುಂದಿನ ದಿನಗಳಲ್ಲಿ ಕಾವೇರಿ ಕೊಳ್ಳದಲ್ಲಿ ಮತ್ತಷ್ಟು ಮಳೆ ಆಗುವ ಸಾಧ್ಯತೆಗಳು ಇವೆ. ಕೇವಲ ಕೆಆರ್‌ಎಸ್ ಮಾತ್ರವಲ್ಲದೇ, ಕಬಿನಿ, ಹಾರಂಗಿ, ಭದ್ರಾ ಆಣೆಕಟ್ಟುಗಳಲ್ಲಿ ಸಹ ನೀರಿನ ಒಳಹರಿವು ಹೆಚ್ಚಾಗಿದೆ. ರಾಜ್ಯದ ಪ್ರಮುಖ ಆಣೆಕಟ್ಟುಗಳಲ್ಲಿ ನೀರಿನ ಸಂಗ್ರಹಣೆ ಹೆಚ್ಚಾಗಿದೆ.

# ಉದ್ಯೋಗ ಬಗ್ಗೆ ಒಡಂಬಡಿಕೆಗೆ ಸಹಿ ಹಾಕಿ

• ಉದಯವಾಹಿನಿ, ಕೆ.ಆರ್.ಪುರಂ

ಮಣಿಪಾಲ್, ಕೆಐಟಿ ಮತ್ತು ಎಸ್.ಆರ್. ಎಂ ವಿಶ್ವವಿದ್ಯಾಲಯಗಳೊಂದಿಗೆ ವೋಲ್ವೋ ಸಂಸ್ಥೆ ಪರಸ್ಪರ ಶಿಕ್ಷಣ ಹಾಗೂ ಉದ್ಯೋಗ ಬಗ್ಗೆ ಒಡಂಬಡಿಕೆಗೆ ಸಹಿ ಹಾಕಿದರು. ನಗರದಲ್ಲಿ ಆಯೋಜಿಸಿದ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆಗೆ ಸಹಿ ಹಾಗುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು.

ಸದೃಢ ಉದ್ಯಮ- ಶೈಕ್ಷಣಿಕ ಸಕ್ರಿಯತೆ ನಿರ್ಮಿಸಲು ಮತ್ತು ವಾಹನೋದ್ಯಮ ಕ್ಷೇತ್ರದಲ್ಲಿ ವಿದ್ಯಾರ್ಥಿಗಳನ್ನು ಉದ್ಯಮಕ್ಕೆ ಸನ್ನದ್ಧತೆ ಹೆಚ್ಚಿಸಲು, ಒಡಂಬಡಿಕೆ ಸಹಿ ಹಾಕಲಾಗಿದೆ ಎಂದು ವೋಲ್ವೋ ಗ್ರೂಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ ತಿಳಿಸಿದರು. ಮೇಲ್ಕಂಡ ವಿಶ್ವವಿದ್ಯಾಲಯಗಳಲ್ಲಿ ಆಟೋಮೋಟಿವ್ ಎಂಜಿನಿಯರಿಂಗ್ ಕುರಿತಾದ ಸಮಗ್ರ ತಿಳಿವಳಿಕೆ ಮತ್ತು ಜ್ಞಾನವನ್ನು ಪಡೆದುಕೊಳ್ಳುವಂತೆ ಕೈಗಾರಿಕೆಗೆ ಸಂಬಂಧಿಸಿದ ವಿಷಯಗಳನ್ನು ಎರಡು ಸೆಮಿಸ್ಟರ್ ಅವಧಿಗೆ ಬೋಧಿಸಲಾಗುತ್ತದೆ. ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಿಗೆ ಮೆಂಟರ್ ಶಿಪ್ ನಂತರ ಅವರಿಗೆ ಕೆಲಸ ಮಾಡುಲು ಆವಕಾಶ ಕಲ್ಪಿಸಲಾಗುವುದು, ಅದರಲ್ಲೂ ಹೆಣ್ಣುಮಕ್ಕಳಿಗೆ ಬಡ ಪ್ರತಿಭೆಗಳಿಗೆ ಮೊದಲ ಆದ್ಯತೆ ಎಂದರು. ಯೂನಿವರ್ಸಿಟಿಯ ಡೀನ್ ಡಾ.ಅಭಿಷೇಕ್ ರೇ, ಮಣಿಪಾಲ್ ಯೂನಿವರ್ಸಿಟಿಯ ನಿರ್ದೇಶಕ ಕಮ್ಯಾಂಡರ್ ಡಾ.ಅನಿಲ್ ರಾಣಾ, ಎಸ್.ಆರ್.ಎಂ. ಯೂನಿವರ್ಸಿಟಿಯ ಕಾರ್ಪೊರೇಟ್ ರಿಲೇಷನ್ಸ್ ಅಂಡ್ ಕೆರೀರ್ ಸರ್ವೀಸಸ್ ನಿರ್ದೇಶಕ ಡಾ. ಎಂ.ಎಸ್. ವಿವೇಕಾ ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.


ಉದಯವಾಹಿನಿ ಚಿತ್ರ

# ಜಿಲ್ಲಾಧಿಕಾರಿ ನೀರು ಪೂರೈಕೆ ಮಾಡದಿದ್ದರೆ ಬಂದ್ ಎಚ್ಚರಿಕೆ

## ವಾರ್ಡ್‌ಗಳ ನೂರಾರು ಮಹಿಳೆಯರು, ನಾಗರಿಕರು ಖಾಲಿ ಕೊಡಗಳ ತೆಗೆದುಕೊಂಡು ಬಸವ ಸರ್ಕಲ್‌ನಿಂದ ಪ್ರತಿಭಟನಾ ರ್ಯಾಲಿ

• ಉದಯವಾಹಿನಿ, ಸಿಂಧನೂರು


ಉದಯವಾಹಿನಿ ಚಿತ್ರ

**ನಿರ್ಲಕ್ಷ್ಯ ಧೋರಣೆ ಮುಂದು**

ನಗರದಲ್ಲಿ ಎರಡು-ಮೂರು ತಿಂಗಳಿಂದ ಜನರು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿಯನ್ನು ನೋಡಿ ಶುಕ್ರವಾರ ನಗರಾಭಿವೃದ್ದಿ ಸಮಿತಿಯ ಸಮ್ಮುಖದಲ್ಲಿ ವಿವಿಧ ವಾರ್ಡ್ ಗಳ ನೂರಾರು ಮಹಿಳೆಯರು, ನಾಗರಿಕರು ಸೇರಿದಂತೆ ಖಾಲಿ ಕೊ ಡಗಳ ತೆಗೆದುಕೊಂಡು ಬಸವ ಸರ್ಕಲ್ ಯಿಂದ ಪ್ರತಿಭಟನಾ ರ್ಯಾಲಿ ಮೂಲಕ ನಗರ ಸಭೆ ಕಚೇರಿಗೆ ಮುತ್ತಿಗೆ ಹಾಕುವುದಕ್ಕೆ ಪ್ರಸಂಗ ನಡೆದ ಘಟನೆಯಲ್ಲಿ ಪೋಲಿಸ್ ಇಲಾಖೆ ಅಧಿಕಾರಿಗಳು ಪ್ರತಿಭಟನೆಯನ್ನು ತಡೆಯುವುದಕ್ಕೆ ಮುಂದಾದಾಗ ಮಾತಿನ ಚಕಮಕಿ ನಡೆಯಿತು.

ಕುಡಿಯುವ ನೀರು ಪೂರೈಕೆಗಾಗಿ ಸ್ಥಳಿಯ ಬಸವ ಸರ್ಕಲ್‌ಯಿಂದ ನಗರದ ನೂರಾರು ಮಹಿಳೆಯರು ಖಾಲಿ ಕೊಡಗಳನ್ನು ವಿವಿಧ ಸರ್ಕಲ್ ಗಳು ಮೂಲಕ ನಗರಸಭೆ ಆಗಮಿಸಿತು. ಹೋರಾಟಗಾರರು ನಗರ ಸಭೆ ಕಚೇರಿಗೆ ಮುತ್ತಿಗೆ ಹಾ ಕಲು ಯತ್ನಿಸಿದಾಗ ಮೂರು ಪೊಲೀಸ್ ಠಾಣೆಯ ಪಿ ಎಸ್‌ಐ ಸುದೀರ್ ಬೆಂಕಿ ಅವರು ನೇತೃತ್ವದಲ್ಲಿ ಪೋಲಿಸ್ ಸಿಬ್ಬಂದಿ ಕಛೇರಿ ಗೇಟ್ ಹಾಕಿ ಮುತ್ತಿಗೆ ಹಾಕ ದಂತೆ ಬ್ಯಾರಿಕೇಡ್‌ಗಳು ಮೂಲಕ ಪ್ರತಿಭಟನೆಯನ್ನು ತಡೆದ ಪೊಲೀಸರಿಗೆ ಹೋರಾಟಗಾರರಿಗೆ ಮಾತಿನ ಚಕಮಕಿ ಮೂಲಕ ನೂಕುನುಗ್ಗಲು ವಾತಾವರಣ ಉಂಟಾಯಿತು.

ಅಶುದ್ಧ ನೀರು ಕುಡಿಯುವುದರಿಂದ ಕಾಲರಾ ರೋಗಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು ಇರುತ್ತದೆ ಇದರ ಹಿಂದೆ 1997-98 ರಲ್ಲಿ ಅಶುದ್ಧ ನೀರು ಸೇವೆಯಿಂದ ಕಾಲರಾ ರೋಗದ ಲಕ್ಷಣಗಳನ್ನು ಬಂದು ಎಷ್ಟೆಷ್ಟು ಸಾವ-ನೋವೂ ಘಟನೆಗಳನ್ನು ಯಾರು ಮರೆಯುವಂತಿಲ್ಲ. ಎಂದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಎಚ್ಚರಿಸಿದರು.

> ಈಗಾಗಲೇ ನಾವು ಖಾಸಗಿ ಕೆರೆಗಳನ್ನು ಅರೇಂಜ್ ಮಾಡಿದ್ದೇವೆ. ಇನ್ನು ತುರ್ವಿಹಾಳ ಕೆರೆಗಳಲ್ಲಿ ನೀರು ಇದ್ದು ನೀರು ಇಲ್ಲ ಹೇಳುವಂತೆ ನಡೆದಿದ್ದು ಇದಕ್ಕೆ ಜನರು ಯಾವುದೇ ಕೀವು ಕೊಡಬೇಡಿ ನಗರದಲ್ಲಿ ನೀರಿನ ಸಮಸ್ಯೆಯಾಗದಂತೆ ನೋಡುತ್ತೇವೆ
> -ಮಂಜುನಾಥ್ ಗುಂಡೂರು ಪೌರಾಯುಕ್ತ

ಈಗಾಗಲೇ ಜೈಪುರ ಸೇರಿದಂತೆ ವಿವಿಧ ದೇಶಗಳ ಆರ್ ಓ ಕುಡಿಯುವ ನೀರಿನ ಪ್ಲಾಂಟ್ ಬಗ್ಗೆ ನಿಗಾವಹಿಸಿ. ವಾಟರ್ ಜನರೇಟರ್ ಆರಂಭಿಸಿ ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ದಿನಕ್ಕೆ 3.5 ನೀರು ಬೇಕು. ಇದರಂತೆ ವಾಟರ್ ಜನರೇಟರ್ ವಾರ್ಡುಗಳ ಪ್ರಾರಂಭಿಸಿ ದಿನಕ್ಕೆ 500 ಲೀಟರ್ ನೀರು ಪೂರೈಕೆ ಮಾಡುವುದು. ಇದಕ್ಕೆ 2.50 ಲಕ್ಷ ಖರ್ಚಾಗುತ್ತದೆ. ಇದಕ್ಕೆ ನಗರ ಸಭೆ ಸದಸ್ಯರು ಹಾಗೂ ಅಧಿಕಾರಿಗಳ ಮನಸ್ಸು ಮಾಡಬೇಕು ಎಂದರು.

> ಸಿಂಧನೂರು ತಾಲ್ಲೂಕಿನಲ್ಲಿ ಹತ್ತು ಸಾವಿರ ಮನೆಗಳು ಇದ್ದು. ನಗರದಲ್ಲಿ 2 ಲಕ್ಷ ಜನ ಸಂಖ್ಯೆ ಇದ್ದು. 40 ಸಾವಿರ ಮಕ್ಕಳು ಇರುವುದರಿಂದ ಇವರೆಲ್ಲರಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ನಗರ ಸಭೆ ಜವಾಬ್ದಾರಿಯಾಗಿರುತ್ತದೆ
> -ಡಾ. ಕೆ. ಶಿವರಾಜ, ಮಕ್ಕಳ ತಜ್ಞ

ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಈಗಾಗಲೇ ನಗರ ಸಭೆ ಪೌರಾಯುಕ್ತರು ಎಚ್ಚರಿಸುತ್ತಾ ಬಂದಿದ್ದು. ನೀರಿಗಾಗಿ ಯಾವುದೇ ರೀತಿಯಲ್ಲಿ ಸಿದ್ಧತೆಗಳನ್ನು ಮಾಡಿಕೊಡುವುದರಲ್ಲಿ ಸಂಪೂರ್ಣ ನಗರಸಭೆ ನಿರ್ಲಕ್ಷ್ಯ ಧೋರಣೆ ಮುಂದುವರೆದಿದೆ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ,ಪ್ರತಿಭಟನಾ ಕುರಿತು ಡಿ ಎಚ್ ಕಂಬಳಿ ಬೇಕು ನೀರು ಬೇಕು ಎಂದು ಹೇಳತ್ತಾ ಮಾತನಾಡಿದ ಅವರು ಕುಡಿಯುವ ನೀರಿಗಾಗಿ ಹಾಹಾಕಾರ ತಪ್ಪಿಸುವ ಸಲುವಾಗಿ ನಗರ ಸಭೆ ಮನವರಿಕೆ ಮಾಡುತ್ತಾ ಬಂದಿದ್ದು. ಇವತ್ತು ಕಛೇರಿ ಮುತ್ತಿಗೆ ಹಾಕುವ ಮೂಲಕ ಎಚ್ಚರ ನೀಡುತ್ತಿದ್ದೇವೆ ಒಂದು ವೇಳೆ ಕುಡಿಯುವ ನೀರಿನ ಬಗ್ಗೆ ಜಿಲ್ಲಾಧಿಕಾರಿ ಕಾಳಜಿ ವಹಿಸದೇ ಇದ್ದರೆ. ಸಿಂಧನೂರು ಬಂದ್ ಮಾಡುವುದಾಗಿ ಎಚ್ಚರಿಕೆ ನೀಡಿದರು. ಸಮಿತಿ ಸದಸ್ಯರು ಚಂದ್ರಶೇಖರ ಗೊರೇಬಾಳ ಮಾತನಾಡಿದರು. ಚಿಟ್ಟಿಬಾಬು. ರಮೇಶ ಪಾಟೀಲ್. ಎಸ್ ದೇವೇಂದ್ರ ಗೌಡ ಮಹಿಳೆಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಡಾ.ಚಂದ್ರಶೇಖರ ಪಾಟೀಲ ಗೆಲುವು ಪಟಾಕಿ ಸಿಡಿಸಿ ವಿಜಯೋತ್ಸವ

• ಉದಯವಾಹಿನಿ,ಚಿಂಚೋಳಿ


ಉದಯವಾಹಿನಿ ಚಿತ್ರ

ಪಟ್ಟಣದ ಸುಲೇಪೇಟ ಗ್ರಾಮದ ಮಹಾತ್ಮ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಈಶಾನ್ಯ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲರು ಎರಡನೇ ಬಾರಿಗೆ 4,650ಕ್ಕೂ ಹೆಚ್ಚು ಮತಗಳಿಂದ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಈ ಸಂದರ್ಭದಲ್ಲಿ ಮಹಾರುದ್ರಪ್ಪ ದೇಸಾಯಿ, ಮೇಘರಾಜ ರಾಠೋಡ್, ರುದ್ರಶೇಟ್ಟಿ ಪಡಶೇಟ್ಟಿ, ಅಶೋಕ ಐನಾಪೂರ, ಶರಣಬಸಪ್ಪ ಪಡಶೇಟ್ಟಿ, ಅಹೇಮದ ಪಟೇಲ, ಸೈಯದ್ ಮಸ್ತಾನ, ನಾಸೀರ ಮದ್ದರಗಿ, ನಾಗೇಶ ಚಾಂಗಲೇರಿ, ಸೈಯದ್ ರೌಫ ಮೋಮಿನ್, ರಜಾಕ್ ಪಟೇಲ, ಅಹ್ಮೆದ ಮೋಮಿನ್, ಶಾಮರಾವಮಾದೇಶಿ, ಸಿರಾಜ ಪಟೇಲ, ಆರೀಫ ಮೋಮಿನ್, ಮಹೇಬೂಬ ಮೋಮಿನ್, ಮಲ್ಲಿಕಾರ್ಜುನ ಗುಲಗುಂಜಿ, ಪ್ರಕಾಶ ಮಂತ್ರಿ ಸೇರಿದಂತೆ ಅನೇಕ ಕಾರ್ಯಕರ್ತರು ಮುಖಂಡರು ಇದ್ದರು.

# ವಾಲ್ಮೀಕಿ ನಿಗಮ ಪ್ರಕರಣ: ಸಚಿವ ಬೋಸರಾಜು, ಶಾಸಕ ದದ್ದಲ್ ಕೈವಾಡ

• ಉದಯವಾಹಿನಿ, ರಾಯಚೂರು



**94 ಕೋಟಿ ಹಣ ವರ್ಗಾವಣೆ**

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಹಣ ಅಕ್ರಮ ವರ್ಗಾವಣೆ ಹಗರಣದಲ್ಲಿ ಹಿಂದೆ ಸಚಿವ ಎನ್.ಎಸ್. ಬೋಸರಾಜು, ನಿಗಮದ ಅಧ್ಯಕ್ಷ ಶಾಸಕರೂ ಆಗಿರುವ ಬಸನಗೌಡ ದದ್ದಲ್ ಅವರ ಕೈವಾಡವಿದ್ದು, ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕು ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಂ. ವಿರೂಪಾಕ್ಷಿ ಒತ್ತಾಯಿಸಿದರು.

ತೆಲಂಗಾಣ ರಾಜ್ಯದ ವಿಧಾನಸಭಾ ಚುನಾವಣೆಗಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ಜೀರೊ ಬ್ಯಾಲೆನ್ಸ್ ಖಾತೆ ತೆರೆದು 94 ಕೋಟಿ ಹಣ ವರ್ಗಾವಣೆ ಮಾಡಲಾಗಿದೆ ಎಂದು ಶುಕ್ರವಾರ ಮಾಧ್ಯಮ ಗೋಷ್ಠಿಯಲ್ಲಿ ಗಂಭೀರ ಆರೋಪ ಮಾಡಿದರು.

ತೆಲಂಗಾಣದ ಕಾಂಗ್ರೆಸ್ ಉಸ್ತುವಾರಿಯಾಗಿದ್ದ ಸಚಿವ ಎನ್.ಎಸ್. ಬೋಸರಾಜು ಅವರು ಈ ಅಕ್ರಮದ ಹಿಂದೆ ಇದ್ದಾರೆ. ಇಬ್ಬರನ್ನು ಪಕ್ಷದಿಂದ ವಜಾ ಗೊಳಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಸಲ್ಲಿಸಲಾಗುವುದು.

ನಿರ್ಲಕ್ಷ್ಯ ವಹಿಸಿದ್ದಲ್ಲಿ ಮೈತ್ರಿ ಪಕ್ಷದಿಂದ ಉಗ್ರ ಹೋರಾಟ ನಡೆಸ ಲಾಗುವುದು ಎಂದು ಎಚ್ಚರಿಸಿದರು.

> ಶೋಷಿತ ಸಮುದಾಯ ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ. ಅಕ್ರಮದ ಬಗ್ಗೆ ಸಿಬಿಐಗೆ ದೂರು ನೀಡಲಾಗಿತ್ತು. ಸಚಿವ ನಾಗೇಂದ್ರ, ಆಪ್ತ ಸೇರಿ ಇಬ್ಬರನ್ನು ಬಂಧಿಸಿದ್ದಾರೆ. ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗದ ಅಧ್ಯಕ್ಷ ಬಸನಗೌಡ ದದ್ದಲ್ ಅವರ ಗಮನಕ್ಕೆ ಬಾರದೇ ಇಷ್ಟು ದೊಡ್ಡ ಮಟ್ಟದ ಹಣ ವರ್ಗಾವಣೆ ನಡೆಯಲು ಅಸಾಧ್ಯ
> - ಎಂ. ವಿರೂಪಾಕ್ಷಿ, ಅಧ್ಯಕ್ಷ

# ಜಿಲ್ಲೆಯಲ್ಲಿ 'ಡೆಂಗಿ' ಪ್ರಕರಣ ಏರಿಕೆ, ಚಿಕುನ್‌ಗುನ್ಯಾ ಇಳಿಕೆ

• ಉದಯವಾಹಿನಿ, ಹುಬ್ಬಳ್ಳಿ


ಉದಯವಾಹಿನಿ ಚಿತ್ರ

ಧಾರವಾಡ ಜಿಲ್ಲೆಯಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿದ್ದು, ಜನವರಿಯಿಂದ ಈವರೆಗೆ ಒಟ್ಟು 96 ಜನರಲ್ಲಿ ಡೆಂಗಿ ಸೋಂಕು ಪತ್ತೆಯಾಗಿದೆ.

ಚಿಕುನ್‌ಗುನ್ಯಾ ಪ್ರಕರಣಗಳು 12 ಕಂಡು ಬಂದಿದ್ದು, ಮಲೇರಿಯಾ ಪ್ರಕರಣಗಳು ಇಲ್ಲ. ಸೊಳ್ಳೆಗಳಿಂದ ಹರಡುವ ಕಾಯಿಲೆಗಳು ಹಾಗೂ ಅವುಗಳಿಂದ ರಕ್ಷಣೆ ಮಾಡಿಕೊಳ್ಳುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವರ್ಷವಿಡೀ ಜಾಗೃತಿ ಕಾರ್ಯಕ್ರಮ ನಡೆಸುತ್ತಿದ್ದರೂ ಡೆಂಗಿ ಪ್ರಕರಣಗಳು ಮಾತ್ರ ಹೆಚ್ಚಳವಾಗುತ್ತಲೇ ಇವೆ. ಈ ಬಾರಿ ಬೇಸಿಗೆಯಲ್ಲಿ ತಾಪಮಾನ ಹೆಚ್ಚಳದಿಂದಾಗಿ ಸೊಳ್ಳೆಗಳ ಉತ್ಪತ್ತಿಯ ಪ್ರಮಾಣವೂ ಹೆಚ್ಚಾಗಿದೆ. ನೀರು ಪೂರೈಕೆ ಕಡಿಮೆಯಾದಂತೆ ಜನರು ಸಂಗ್ರಹಿಸಿಟ್ಟುಕೊಂಡ ನೀರನ್ನು ಖಾಲಿ ಮಾಡಲು ಸಾಧ್ಯವಾಗುತ್ತಿಲ್ಲ. ಸಂಗ್ರಹಿತ ನೀರಿನಲ್ಲಿ ಔಷಧ ಹಾಕುವುದಕ್ಕೂ ಬಿಡುತ್ತಿಲ್ಲ ಎಂಬುದು ಲಾರ್ವಾ ಸಮೀಕ್ಷೆ ಸಂದರ್ಭದಲ್ಲಿ ಕಂಡು ಬಂದಿದೆ.

ಧಾರವಾಡ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಡೆಂಗಿ ಹೆಚ್ಚಳ ಗುರುತಿಸಲಾಗಿದೆ. ಅಂಥ ಪ್ರದೇಶಗಳಲ್ಲಿ ವಾರಕ್ಕೊಮ್ಮೆ ಲಾರ್ವಾ ಸಮೀಕ್ಷೆ ಮಾಡಿಸಿ ಲಾರ್ವಾ ನಿರ್ಮೂಲನೆ ಮಾಡಲಾಗುತ್ತಿದೆ. ವಾರದಲ್ಲಿ ಮೂರು ದಿನ ವಿದ್ಯಾರ್ಥಿ ಸ್ವಯಂ ಸೇವಕರಿಂದಲೂ ಸಮೀಕ್ಷೆ ಮಾಡಿಸಲಾಗಿದೆ. ಆರೋಗ್ಯ ಇಲಾಖೆಯ ಸಿಬ್ಬಂದಿಯ ಜೊತೆಗೆ 280 ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳೂ ಈ ಬಾರಿ ಸಮೀಕ್ಷೆಯಲ್ಲಿ ಪಾಲ್ಗೊಂಡಿರುವುದು ವಿಶೇಷ.

> ಸೊಳ್ಳೆಗಳು ಹೆಚ್ಚಿರುವಲ್ಲಿ ಫಾಗಿಂಗ್ ಮಾಡಿಸಲಾಗಿದೆ. ಡೆಂಗಿ ಲಕ್ಷಣಗಳು ಕಂಡು ಬಂದ ಕೂಡಲೇ ರಕ್ತ ಪರೀಕ್ಷೆಯಲ್ಲಿ ಪಾಸಿಟಿವ್ ಆಗಲಿ ಬಿಡಲಿ, ರೋಗಿಗಳಿಗೆ ಚಿಕಿತ್ಸೆ ಆರಂಭಿಸಲಾಗುತ್ತಿದೆ. ಜಿಲ್ಲಾ ಆಸ್ಪತ್ರೆ, ಕಿಮ್ಸ್, ಎಸ್‌ಡಿಎಂ ಸೇರಿದಂತೆ ಎಲ್ಲಾ ದೊಡ್ಡ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಇದೆ'
> -ಡಾ.ಮಂಜುನಾಥ, ಕೀಟಶಾಸ್ತ್ರಜ್ಞ

# ಸವದಿ, ತಮ್ಮಣ್ಣವರ್ ವಿರುದ್ಧ ಸತೀಶ್ ಜಾರಕಿಹೊಳಿ ಆಕ್ರೋಶ

• ಉದಯವಾಹಿನಿ, ಬೆಳಗಾವಿ



**ಚುನಾವಣೆ ವೇಳೆ ಶಾಸಕರು ನನ್ನ ಕೈಗೆ ಸಿಕ್ಕಿಲ್ಲ**

ಲೋಕಸಭಾ ಚುನಾವಣೆ ಫಲಿತಾಂಶ ಪ್ರಕಟವಾಗಿದ್ದು, ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ ಒಂದು ಸ್ಥಾನ ಗಳಿಸಿದಷ್ಟೇ ಶಕ್ತವಾಗಿತ್ತು. ಇದೀಗ ಈ ಬಾರಿ ಒಂದರಿಂದ 9 ಸ್ಥಾನಕ್ಕೆ ಏರಿಕೆ ಕಂಡಿದೆ. ಇದರಲ್ಲಿ ಚಿಕ್ಕೋಡಿ ಕ್ಷೇತ್ರದ ಪ್ರಿಯಾಂಕಾ ಜಾರಕಿಹೊಳಿ ಕೂಡ ಒಬ್ಬರು.

ಇದೀಗ ಅಥಣಿ ಕ್ಷೇತ್ರದ ಲಕ್ಷ್ಮಣ ಸವದಿ, ಕುಡಚಿ ಕ್ಷೇತ್ರದ ಮಹೇಂದ್ರ ತಮ್ಮಣ್ಣ ಅವರ ವಿರುದ್ಧ ಆಕ್ರೋಶ ಅವರ ಹಾಕಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಡಚಿ ವಿಧಾನಸಭಾ ಕ್ಷೇತ್ರದಲ್ಲಿ ಎರಡು ದಿನ ಇದ್ದೆ. ಆದರೆ ಮಹೇಂದ್ರ ತಮ್ಮಣ್ಣವರ್ ಅವರು ನನ್ನ ಕೈಗೆ ಸಿಗಲಿಲ್ಲ. ಅಥಣಿಯಲ್ಲೂ ಹಾಗೆ ಆಯಿತು. ಯಾರ ಬಗ್ಗೆ ಯೂ ಪಕ್ಷದ ವರಿಷ್ಠರಿಗೆ ದೂರು ಕೊಡುವುದಿಲ್ಲ. ಪಕ್ಷದ ವಿರುದ್ಧ ಕೆಲಸ ಮಾಡಿದವರ ಬಗ್ಗೆ ಜನರಿಗೆ ಗೊತ್ತಾಗಬೇಕಿತ್ತು ಅದನ್ನು ಜನರಿಗೆ ಹೇಳುವ ಕೆಲಸ ಮಾಡಿರುವೆ ಎಂದು ಸತೀಶ್ ಜಾರಕಿಹೊಳಿ ತಿಳಿಸಿದರು.

ಅಥಣಿ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಲೀಡ್ ಆಗುತ್ತೆ ಅಂದುಕೊಂಡಿದ್ದೆ. ಆದರೆ ಅಥಣಿಯಲ್ಲಿ ಲೀಡ್ ಸಿಕ್ಕಿಲ್ಲ. ಪ್ರಕಾಶ್ ಹುಕ್ಕೇರಿ ಸೇರಿ ಇನ್ನುಳಿದ ನಾಯಕರು ಕೆಲಸ ಮಾಡಿದ್ದಾರೆ. ನನ್ನ ಪುತ್ರಿಯ ಗೆಲುವಿಗಾಗಿ ಕೆಲಸ ಮಾಡಿದ್ದಾರೆ. ಬೇರೆ ಕ್ಷೇತ್ರಗಳಲ್ಲೂ ಮುಖಂಡರು ಪಕ್ಷದ ಪರ ಕೆಲಸ ಮಾಡಿದ್ದಾರೆ ಎಂದು ಬೆಳಗಾವಿಯಲ್ಲಿ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆ ನೀಡಿದರು.

# ಪ್ರವಾಹದಲ್ಲಿ ಮುಳುಗುವ ಜಮೀನಿನಲ್ಲಿ ರೈತನ ಸಾಧನೆ

• ಉದಯವಾಹಿನಿ, ಶಿರಸಿ


ಉದಯವಾಹಿನಿ ಚಿತ್ರ

ಪ್ರತಿ ವರ್ಷ ಮಳೆಗಾಲದಲ್ಲಿ ವರದಾ ನದಿ ಪ್ರವಾಹ ನೀರಿನಲ್ಲಿ ಮುಳುಗೇಳುವ ಜಮೀನಿನಲ್ಲಿ ಮಿಶ್ರ ಬೇಸಾಯ ವ್ಯವಸ್ಥೆಯಡಿ ಕೃಷಿ ಮಾಡುತ್ತಿರುವ ಸಿವಿಲ್ ಎಂಜಿನಿಯರ್ ಪದವೀಧರನೊಬ್ಬ ವಾರ್ಷಿಕ ಲಕ್ಷಾಂತರ ರೂಪಾಯಿ ಆದಾಯ ಪಡೆದು ಕೃಷಿಕರೆಲ್ಲರಿಗೆ ಮಾದರಿ ಎನಿಸಿದ್ದಾರೆ.

ತಾಲ್ಲೂಕಿನ ಬನವಾಸಿಯ ಯುವ ಕೃಷಿಕ ಸುಭಾಷ್ ವೀರಪ್ಪ ಕಾಟೇನಹಳ್ಳಿ 2018ರಿಂದ ಪೂರ್ಣ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ತಂದೆ, ಸಹೋದರರನ ಅಕಾಲಿಕ ನಿಧನದಿಂದ ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರ ಬಿಟ್ಟು ಮನೆಗೆ ಬಂದ ಸುಭಾಷ್ ಅವರು ಗುಡ್ನಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಂತ್ರಾಜಿಯಲ್ಲಿ ಪಿತ್ರಾರ್ಜಿತವಾಗಿ ಬಂದ 17 ಎಕರೆ 20 ಗುಂಟೆ ಜಮೀನಿನಲ್ಲಿ ಕೃಷಿ ವೃತ್ತಿ ಮುಂದುವರೆಸಿದ್ದಾರೆ. 10 ಎಕರೆ ಅಡಿಕೆ, 6 ಎಕರೆ ಜಾಗದಲ್ಲಿ ಅಡಿಕೆ ಹಾಗೂ ಅನಾನಸ್, ಒಂದೂವರೆ ಎಕರೆಯಲ್ಲಿ ಭತ್ತ ಬೆಳೆದು ವಾರ್ಷಿಕ ಅಂದಾಜು 50 ಲಕ್ಷ ಆದಾಯ ಕಂಡುಕೊಳ್ಳುತ್ತಿದ್ದಾರೆ. ವರದಾ ನದಿಗೆ ಪ್ರವಾಹ ಬಂದಾಗ ಸಂಪೂರ್ಣ ಜಮೀನು ಮುಳುಗಡೆಯಾಗುತ್ತದೆ. ಆರಂಭದ ವರ್ಷಗಳಲ್ಲಿ ಭತ್ತ ಬೆಳೆಯಲಾಗುತ್ತಿತ್ತು. ಆಗ ಪ್ರವಾಹ ತಗ್ಗಿದ್ದಾಗ ಭತ್ತದ ಸಸಿಗಳು ಕೊಳೆತು ಸಮಸ್ಯೆಯಾಗುತ್ತಿತ್ತು. ಹಲವು ವರ್ಷ ಭತ್ತ ಬೆಳೆದು ಕೈಸುಟ್ಟುಕೊಂಡ ನಂತರ ಅಡಿಕೆ ಬೆಳೆಗೆ ಮಹತ್ವ ನೀಡಲಾಗಿದೆ. ಪ್ರವಾಹ ನೀರು ಸಮಸ್ಯೆ ನೀಡದಷ್ಟು ಎತ್ತರ ಬೆಳೆಯುವ ಜತೆ ಧಾರಣೆಯೂ ಉತ್ತಮ ಇರುವ ಕಾರಣ ಅಡಿಕೆ ಕೃಷಿ ಮಾಡಲಾಗಿದೆ. ವಾಣಿಜ್ಯ ಬೆಳೆ ಅನಾನಸ್ ಕೂಡ ಪ್ರವಾಹಕ್ಕೆ ಜಗ್ಗದ ಕಾರಣ ಆರು ಎಕರೆ ಅಡಿಕೆಯ ಜತೆ ಮಿಶ್ರಬೆಳೆಯಾಗಿ ಬೆಳೆಸಿದ್ದೇನೆ. ವರ್ಷಕ್ಕೆ ಸರಾಸರಿ 100 ಟನ್ ಹಣ್ಣು ಲಭಿಸುತ್ತಿದೆ. ಎತ್ತರದ ಗದ್ದೆಯಲ್ಲಿ ಮನೆ ಬಳಕೆಗೆ ಪೂರಕವಾಗಿ ಭತ್ತ ಬೆಳೆಯುತ್ತಿದ್ದೇನೆ. ಹೀಗಾಗಿ ಪ್ರವಾಹ ಬಂದರೂ ಹೆಚ್ಚಿನ ಸಮಸ್ಯೆ ಆಗುವುದಿಲ್ಲ' ಎಂದು ತಿಳಿಸಿದರು.

> ಜಮೀನಿನಲ್ಲಿ 50 ಲಕ್ಷ ಲೀಟರ್ ಸಾಮರ್ಥ್ಯದ ಪ್ಲಾಸ್ಟಿಕ್ ಹೊದಿಕೆ ಮುಚ್ಚಿದ ಕೃಷಿ ಹೊಂಡ ನಿರ್ಮಿಸಿಕೊಂಡಿದ್ದು, ಇಡೀ ಜಮೀನಿಗೆ ಇದರಿಂದ ನೀರು ಹಾಯಿಸುತ್ತೇನೆ. ಒಂದು ಕೊಳವೆಬಾವಿಯಿದ್ದು, ಅದರಿಂದ ಕೃಷಿ ಹೊಂಡಕ್ಕೆ ನೀರು ಪೂರೈಸಿಕೊಳ್ಳುತ್ತೇನೆ. ಹನಿ ನೀರಾವರಿ ವ್ಯವಸ್ಥೆ ಅಳವಡಿಕೆಯಿಂದ ನೀರಿನ ಮಿತ ಬಳಕೆ ಸಾಧ್ಯವಾಗಿದೆ
> -ಸುಭಾಷ್

ಅಡಿಕೆ ಮದ್ದು ಸಿಂಪಡಣೆ, ಕೊನೆ ಕೊಯ್ಲು, ಅನಾನಸ್ ಕೊಯ್ಲು, ಭತ್ತ ಕಟಾವು ಸೇರಿ ಆಯಾ ಹಂಗಾಮಿನಲ್ಲಿ ಕೆಲಸಗಾರರನ್ನು ನೆಚ್ಚಿಕೊಳ್ಳುತ್ತೇನೆ. ದಿನದ ಕೆಲಸ ಸ್ವತಃ ಮಾಡುತ್ತೇನೆ. ತೆಂಗಿನ ತ್ಯಾಜ್ಯ ಪುಡಿ ಮಾಡುವ ಯಂತ್ರ, ವೀಡ್ ಕಟರ್, ಟ್ರ್ಯಾಕ್ಟರ್, ಪವರ್ ಸ್ಪ್ರೇಯರ್ ಸೇರಿ ವಿವಿಧ ಯಂತ್ರಗಳ ಬಳಕೆಯಿಂದ ಕೂಲಿ ಮೇಲಿನ ಅವಲಂಬನೆಯೂ ಕಡಿಮೆಯಾಗಿದೆ' ಎನ್ನುವ ಮಾತು ಅವರದ್ದು. ಅನಾನಸ್‌ಗೆ ದರ ಏರಿಳಿತವಾದರೂ ಅಡಿಕೆ ದರ ಸ್ಥಿರವಾಗಿದೆ. ಎಕರೆಯೊಂದಕ್ಕೆ ವಾರ್ಷಿಕ 3 ಲಕ್ಷ ಆದಾಯ ಪಡೆಯುತ್ತಿದ್ದು, ಶೇ 30ರಷ್ಟನ್ನು ಕೃಷಿಗಾಗಿ ಬಳಸುತ್ತಿದ್ದೇನೆ. ಒಂದು ವರ್ಷ ರಾಸಾಯನಿಕ ಗೊಬ್ಬರ, ಮಾರನೇ ವರ್ಷ ದಡ್ಡಿ ಗೊಬ್ಬರ ಹಾಕಿ ಭೂಮಿಯ ಆರೋಗ್ಯ ಕಾಪಾಡಿಕೊಳ್ಳುತ್ತೇನೆ' ಎಂದು ಹೇಳುತ್ತಾರೆ ಅವರು.

ಅವರ ಜಮೀನಿನಲ್ಲಿರುವ 50 ಲಕ್ಷ ಲೀಟರ್ ಸಾಮರ್ಥ್ಯದ ಕೃಷಿ ಹೊಂಡ -ಸುಭಾಷ್ ಕಾಟೇನ ಹಳ್ಳಿ, ಕೃಷಿಕವಿದ್ಯೆ ಜೀವನಕ್ಕೆ ಅವಶ್ಯ. ಜೊತೆಗೆ ಪರಂಪರಾಗತವಾಗಿ ಬಂದ ಕೃಷಿಯನ್ನೂ ಜೀವನ ದಲ್ಲಿ ಅಳವಡಿಸಿಕೊಳ್ಳಬೇಕು. ಭೂಮಿ ನಂಬಿದರೆ ಯಾರಿಗೂ ಮೋಸವಿಲ್ಲ.-ನಂದೀಶ ಆರ್, ಕೃಷಿ ಇಲಾಖೆ ಅಧಿಕಾರಿಸಮಗ್ರ ಕೃಷಿ ಪದ್ಧತಿಯ ಭಾಗಗಳಾದ ಕೃಷಿ ಹೊಂಡ ಹಸಿರೆಲೆ ಗೊಬ್ಬರ ಬಳಕೆ ಎರೆಹುಳು ತೊಟ್ಟಿ ಇನ್ನಿತರ ವಿಭಾಗಗಳನ್ನು ಅಳವಡಿಸಿಕೊಂಡಿರುವ ಸುಭಾಷ್ ಅವರು ಕೃಷಿ ಇಲಾಖೆಯಿಂದ ಸಹಾಯಧನದಲ್ಲಿ ಯಂತ್ರೋಕರಣಗಳನ್ನೂ ಖರೀದಿಸಿ ಛಲ ಬಿಡದೆ ಕೃಷಿಯಲ್ಲಿ ಸಾಧನೆ ಮಾಡುತ್ತಿದ್ದಾರೆ

# ದಾವಣಗೆರೆ ಲೋಕಸಭಾ ಕ್ಷೇತ್ರ: ನೂತನ ಸಂಸದರಿಂದ ಹತ್ತು-ಹಲವು ನಿರೀಕ್ಷೆ

• ಉದಯವಾಹಿನಿ, ದಾವಣಗೆರೆ



ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ಆಯ್ಕೆಯಾಗಿದ್ದು, ನೂತನ ಸಂಸದರಿಂದ ಕ್ಷೇತ್ರದ ಜನತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ನಿರೀಕ್ಷಿಸುತ್ತಿದ್ದಾರೆ. ದಂತ ವೈದ್ಯೆಯಾಗಿರುವ ನೂತನ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರು ವಿಶೇಷವಾಗಿ ಮಹಿಳೆಯರ ಆರ್ಥಿಕ ಪ್ರಗತಿಗೆ ಪೂರಕವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂಬುದು ಮಹಿಳೆಯರ ಆಶಯವಾಗಿದೆ. ದಾವಣಗೆರೆ ಜಿಲ್ಲೆ ಈಗಾಗಲೇ ಶೈಕ್ಷಣಿಕ ವಲಯದಲ್ಲಿ ಛಾಪು ಮೂಡಿಸಿದ್ದು, ಕೈಗಾರಿಕೆಗಳ ಸ್ಥಾಪನೆ ಆಗಬೇಕಿದೆ. ಅದರಲ್ಲೂ ಕೃಷಿ ಆಧಾರಿತ ಕೈಗಾರಿಕೆಗಳನ್ನು ಜಿಲ್ಲೆಗೆ ತರಬೇಕು. ಅಲ್ಲದೇ ಕೈಗಾರಿಕಾ ಕಾರಿಡಾರ್ ಆಗಬೇಕು ಎಂಬುದು ಸಾರ್ವಜನಿಕರ ಆಶಯವಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿ ಹೊಂದಿರುವ ಡಾ.ಪ್ರಭಾ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ತರುವಲ್ಲಿ ಒತ್ತು ನೀಡಬೇಕು ಎಂಬ ಆಗ್ರಹವೂ ಕೇಳಿಬಂದಿದೆ. ಜಗಳೂರು ಭಾಗ ದಲ್ಲಿ ಸಾಕಷ್ಟು ಮಹಿಳೆಯರು ಗಾರ್ಮೆಂಟ್‌ಗಳಲ್ಲಿ ಕೆಲಸ ಮಾಡಲು ಬೆಂಗಳೂರಿಗೆ ಹೋಗುತ್ತಾರೆ. ಈ ನಿಟ್ಟಿನಲ್ಲಿ ಜಗಳೂರಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸಬೇಕು. ಮಹಿಳೆಯರು ಸ್ವಾವಲಂಬೀ ಜೀವನ ನಡೆಸಲು ಅನುಕೂಲವಾಗುವಂತೆ ಗಾರ್ಮೆಂಟ್ಸ್, ಕರಕುಶ ಲ ಕೇಂದ್ರಗಳನ್ನು ಆರಂಭಿಸಬೇಕಿದೆ ಎಂಬ ನಿರೀಕ್ಷೆ ಮಹಿಳೆ ಯರದ್ದಾಗಿದೆ. 'ವಿದ್ಯಾವಂತ ಮಹಿಳೆಯೊಬ್ಬರು ಸಂಸತ್‌ಗೆ ಆಯ್ಕೆಯಾಗಿರುವುದರಿಂದ ನಿರೀಕ್ಷೆಗಳು ಸಹಜವಾಗಿಯೇ ಹೆಚ್ಚಾಗಿವೆ. ಸರ್ಕಾರಿ ವೈದ್ಯಕೀಯ ಕಾಲೇಜು ಬೇಕೆಂಬುದು ಬಹಳ ದಿನಗಳ ಬೇಡಿಕೆ. ನೂತನ ಸಂಸದೆ ವೈದ್ಯರಾಗಿರುವುದರಿಂದ ಅದಕ್ಕೆ ಒತ್ತು ನೀಡುತ್ತಾರೆ ಎಂಬ ನಂಬಿಕೆ ಇದೆ' ಎಂದು ರೈತಮುಖಂಡ ತೇಜಸ್ವಿ ಪಟೇಲ್ ತಿಳಿಸಿದರು.

# ಎಂಇಎಸ್ ಪ್ರಚೋದನಾತ್ಮಕ ನಡೆಗೆ ತಕ್ಕ ಪಾಠ

• ಉದಯವಾಹಿನಿ, ಬೆಳಗಾವಿ

ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಮರಾಠ ಮತದಾರರು ಪ್ರಚೋದನೆಗೆ ಕಿವಿಗೊಡದೇ ರಾಷ್ಟ್ರೀಯತೆಗೆ ಓಗೊಟ್ಟರು. ಕಣದಲ್ಲಿದ್ದ ಎಂಇಎಸ್ ಬೆಂಬಲಿತ ಅಭ್ಯರ್ಥಿ ಮಹಾದೇವ ಪಾಟೀಲ ಅವರಿಗೆ ಕೇವಲ 9,425 ಮತಗಳನ್ನು ನೀಡಿದರು. ಆ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಿದರು.

ಇದು ಮರಾಠರ ಅಸ್ತಿತ್ವದ ಪ್ರಶ್ನೆ. ಗಡಿ ಸಮಸ್ಯೆ ಬಗ್ಗೆ ದೇಶದ ಗಮನ ಸೆಳೆಯಲು ಕಣಕ್ಕೆ ಇಳಿದಿದ್ದೇವೆ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ ಮುಖಂಡರು 'ಪುಂಗಿ' ಊದುತ್ತಲೇ ಇದ್ದರು. ಆದರೆ, ಅದಾವುದಕ್ಕೂ ತಲೆ ಕೆಡಿಸಿಕೊಳ್ಳದ ಪ್ರಜ್ಞಾವಂತ ಮತದಾರರು ಎರಡೂ ರಾಷ್ಟ್ರೀಯ ಪಕ್ಷಗಳತ್ತ ಒಲವು ತೋರಿದರು. ಈ ಬಾರಿ ಬೆಳಗಾವಿ ಕ್ಷೇತ್ರದಲ್ಲಿ ಒಟ್ಟು 13,75,285 ಮತಗಳು ಚಲಾವಣೆಯಾಗಿವೆ. ಇದರಲ್ಲಿ ಬಿಜೆಪಿಗೆ 7,56,471, ಕಾಂಗ್ರೆಸ್‌ಗೆ 5,80,897 ಮತಗಳು ಬಂದಿವೆ. ಪ್ರಬಲ ಪೈಪೋಟಿ ನೀಡುತ್ತೇವೆ ಎಂಬ ಭ್ರಮೆಯಲ್ಲಿದ್ದ ಎಂಇಎಸ್ 10 ಸಾವಿರ ಗಡಿ ದಾಟಲೂ ಸಾಧ್ಯವಾಗಿಲ್ಲ. ಲೋಕಸಭಾ ಚುನಾವಣೆ ರಾಷ್ಟ್ರದ ನಾಯಕತ್ವಕ್ಕಾಗಿ ನಡೆಯುತ್ತದೆ ಹೊರತು; ಯಾವುದೋ ಸಂಘಟನೆಯ ಅಸ್ತಿತ್ವಕ್ಕಾಗಿ ಅಲ್ಲ' ಎಂಬುದನ್ನು ಮತದಾರರು ಸಾರಿ ಹೇಳಿದರು.

# ಕೃಷಿ ಪರಿಕರ ನಿಯಮ ಬಾಹಿರ ಮಾರಾಟ; 2.75 ಕೋಟಿ ರೂ. ವಸ್ತು ಜಪ್ತಿ

## ನಿಯಮ ಬಾಹಿರವಾದ ಉತ್ಪನ್ನಗಳನ್ನು ಮಾರಾಟ ಮಾಡಿ, ರೈತರಿಗೆ ವಂಚಿಸುತ್ತಿರುವ ಆರೋಪವೂ ಕೇಳಿಬರುತ್ತಿವೆ

• ಉದಯವಾಹಿನಿ, ಬೆಳಗಾವಿ


ಉದಯವಾಹಿನಿ ಚಿತ್ರ

ಮುಂಗಾರು ಚುರುಕುಗೊಂಡಿದ್ದರಿಂದ ಈಗ ರೈತರು ಬಿತ್ತನೆಗೆ ಅಣಿಯಾಗಿದ್ದಾರೆ. ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕದ ಮಾರಾಟವೂ ಜೋರಾಗಿದೆ. ಇದೇ ಹೊತ್ತಿನಲ್ಲಿ ಕೆಲವರು ನಿಯಮ ಬಾಹಿರವಾದ ಉತ್ಪನ್ನಗಳನ್ನು ಮಾರಾಟ ಮಾಡಿ, ರೈತರಿಗೆ ವಂಚಿಸುತ್ತಿರುವ ಆರೋಪವೂ ಕೇಳಿಬರುತ್ತಿವೆ.

ಹಾಗಾಗಿ ಬೆಳಗಾವಿ ವಿಭಾಗದಲ್ಲಿ ಅನುಮತಿ ಪಡೆಯದೆ, ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕಗಳ ಮಾರಾಟ ಮತ್ತು ದಾಸ್ತಾನು ಮಾಡುವವರ ವಿರುದ್ಧ ಕೃಷಿ ಇಲಾಖೆ (ಸಚಿವಾಲಯ ವಿಭಾಗ) ಜಾಗೃತ ಕೋಶದವರು ಕಾರ್ಯಾಚರಣೆ ಚುರುಕುಗೊಳಿಸಿದ್ದಾರೆ.

ಕಳೆದ 14 ತಿಂಗಳಲ್ಲಿ ಕೃಷಿ ಪರಿಕರ ಮಾರಾಟ ಕೇಂದ್ರ ಮತ್ತು ಗೋದಾಮುಗಳ ಮೇಲೆ 92 ದಾಳಿ ನಡೆದಿದ್ದು, 2.75 ಕೋಟಿ ಮೌಲ್ಯದ ವಸ್ತು ಜಪ್ತಿ ಮಾಡಲಾಗಿದೆ.

**ಹೊರರಾಜ್ಯದ ಉತ್ಪನ್ನಗಳು:** ತೆಲಂಗಾಣ, ಆಂಧ್ರ ಪ್ರದೇಶ, ಗುಜರಾತ್, ಮಹಾರಾಷ್ಟ್ರದಿಂದ ನಿಯಮ ಬಾಹಿರವಾಗಿ ಬರುತ್ತಿರುವ ಉತ್ಪನ್ನಗಳನ್ನು ಸ್ಥಳೀಯ ಏಜೆಂಟರ ಮೂಲಕ ರೈತರಿಗೆ ಮಾರಾಟ ಮಾಡಿ ವಂಚಿಸಲಾಗುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಇಂಥ ಉತ್ಪನ್ನ ಬಳಸಿ, ರೈತರು ಆರ್ಥಿಕ ನಷ್ಟ ಅನುಭವಿಸಿದ ಉದಾಹರಣೆಗಳೂ ಇವೆ. ಈ ಪ್ರಕರಣ ಮರುಕಳಿಸದಂತೆ ನಿಗಾ ವಹಿಸಲಾಗುತ್ತಿದೆ.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮು ಈಗಷ್ಟೇ ಚುರುಕು ಪಡೆದಿದೆ. ಆದರೆ, ರೈತರು ಮೋಸಕ್ಕೆ ಒಳಗಾಗುವುದನ್ನು ತಪ್ಪಿಸಿನಿಂದಲೇ ಈಗಿನಿಂದಲೇ ಜಾಗೃತಿ ಮೂಡಿಸುತ್ತಿದ್ದೇವೆ' ಎಂದರು.

> ಕೆಲವು ಮಾರಾಟಗಾರರು ಅನುಮತಿ ಪಡೆಯದೆ ಕೃಷಿ ಪರಿಕರ ಮಾರುತ್ತಿದ್ದಾರೆ. ಅನಧಿಕೃತವಾದ ಕೀಟನಾಶಕ ಮಾರುವವರಿದ್ದಾರೆ. ಕೆಲವರು ಒಂದು ಉತ್ಪನ್ನಕ್ಕಷ್ಟೇ ಅನುಮತಿ ಪಡೆದು, ಹೆಚ್ಚಿನ ಉತ್ಪನ್ನ ಮಾರುತ್ತಾರೆ. ಬಳಕೆ ವಿಧಾನವನ್ನು ಕನ್ನಡದಲ್ಲಿ ತಿಳಿಸದೆ ಕೀಟನಾಶಕ, ರಸಗೊಬ್ಬರ ಮಾರುವವರಿದ್ದಾರೆ. ಇಂಥವರ ದಾಳಿ ಮಾಡುತ್ತಿದ್ದೇವೆ. ಆ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸುತ್ತೇವೆ. ತಪ್ಪೆಸಗಿದವರ ವಿರುದ್ಧ ಜೆಎಂಎಫ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುತ್ತಿದ್ದೇವೆ
> -ಮಹಾಂತೇಶ ಕಿಣಗಿ ಸಹಾಯಕ ನಿರ್ದೇಶಕ

> ಜಾಗೃತ ಕೋಶ ಕೃಷಿ ಇಲಾಖೆ ಬೆಳಗಾವಿ ವಿಭಾಗಬಿತ್ತನೆ ಬೀಜ ರಸಗೊಬ್ಬರ ಕೀಟನಾಶಕ ಖರೀದಿಸುವಾಗ ರೈತರು ಎಚ್ಚರ ವಹಿಸಬೇಕು. ಅಧಿಕೃತ ಮಾರಾಟಗಾರರಿಂದಲೇ ಕೃಷಿ ಪರಿಕರ ಖರೀದಿಸಬೇಕು
> -ರಾಜಶೇಖರ ಬಿಜಾಪುರ ಜಂಟಿನಿರ್ದೇಶಕ

**ಎಲ್ಲೆಲ್ಲಿ ಎಷ್ಟೆಷ್ಟು ಪ್ರಕರಣ?:** ಜಾಗೃತ ಕೋಶದ ಬೆಳಗಾವಿ ವಿಭಾಗ ಏಳು ಜಿಲ್ಲೆಗಳ (ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ, ಹಾವೇರಿ, ಉತ್ತರ ಕನ್ನಡ ಮತ್ತು ಧಾರವಾಡ) ವ್ಯಾಪ್ತಿ ಹೊಂದಿದೆ.

ಈ ಪೈಕಿ 2023ರ ಏಪ್ರಿಲ್ 1ರಿಂದ 2024ರ ಮಾರ್ಚ್ 31ರವರೆಗೆ 85 ದಾಳಿ ನಡೆದಿವೆ. ಈ ಪೈಕಿ ವಿಜಯಪುರ ಜಿಲ್ಲೆಯಲ್ಲಿ 18, ಹಾವೇರಿಯಲ್ಲಿ 17, ಧಾರವಾಡ, ಬೆಳಗಾವಿಯಲ್ಲಿ ತಲಾ 14, ಬಾಗಲಕೋಟೆಯಲ್ಲಿ 13, ಗದುಗಿನಲ್ಲಿ 8, ಉತ್ತರ ಕನ್ನಡದಲ್ಲಿ ಒಂದು ದಾಳಿಯಾಗಿದೆ. 6 ದಾಳಿಗಳಲ್ಲಿ 25.4 ಲಕ್ಷ ಮೌಲ್ಯದ ಬಿತ್ತನೆ ಬೀಜ, 29 ದಾಳಿಗಳಲ್ಲಿ 65.3 ಲಕ್ಷ ಮೌಲ್ಯದ ರಸಗೊಬ್ಬರ, 50 ದಾಳಿಗಳಲ್ಲಿ 1.67 ಕೋಟಿ ಮೌಲ್ಯದ ಕೀಟನಾಶಕ ವಶಕ್ಕೆ ಪಡೆಯಲಾಗಿದೆ. 2024ರ ಏಪ್ರಿಲ್ 1ರಿಂದ ಜೂನ್ 5ರವರೆಗೆ ವಿಜಯಪುರ, ಬಾಗಲಕೋಟೆ, ಧಾರವಾಡದಲ್ಲಿ ತಲಾ 2, ಹಾವೇರಿಯಲ್ಲಿ 1 ಸೇರಿದಂತೆ ಏಳು ದಾಳಿ ನಡೆದಿದ್ದು, 17.1 ಲಕ್ಷ ಮೌಲ್ಯದ ಬಿತ್ತನೆ ಬೀಜ ಮತ್ತು ಕೀಟನಾಶಕ ವಶಪಡಿಸಿಕೊಳ್ಳಲಾಗಿದೆ.

ರೈತರು ಯಾವುದೇ ಕೃಷಿ ಪರಿಕರ ಖರೀದಿಸಿದರೂ ಕಡ್ಡಾಯವಾಗಿ ರಸೀದಿ ಪಡೆಯಬೇಕು. ಬಿತ್ತನೆ ಬೀಜಗಳ ಪ್ಯಾಕೆಟ್ ಒಂದಿಷ್ಟು ಕಾಳು ತೆಗೆದಿರಿಸಬೇಕು. ಭೂಮಿಯ ತೇವಾಂಶ ಸರಿಯಾಗಿರುವುದನ್ನು ಖಾತ್ರಿಪಡಿಸಿಕೊಂಡೇ ಬಿತ್ತನೆ ಮಾಡಬೇಕು' ಎಂದು ಅಧಿಕಾರಿಗಳು ಹೇಳುತ್ತಾರೆ.

## ಮಿನಿ ನ್ಯೂಸ್

### ಜೂ.12ರಂದು ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಅಹವಾಲು ಸ್ವೀಕಾರ

• ಉದಯವಾಹಿನಿ, ಧಾರವಾಡ

ಕರ್ನಾಟಕ ಲೋಕಾಯುಕ್ತ, ಧಾರವಾಡ ಕಚೇರಿಯ ಪೊಲೀಸ್ ಅಧಿಕಾರಿಗಳು ಜೂನ್ 12, 2024 ರಂದು ಹುಬ್ಬಳ್ಳಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಲಿದ್ದಾರೆ ಎಂದು ಧಾರವಾಡ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.ಈ ಕುರಿತು ಪ್ರಕಟಣೆ ನೀಡಿರುವ ಅವರು ಜೂನ್ 12 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಹುಬ್ಬಳ್ಳಿಯ ತಾಲ್ಲೂಕು ಪಂಚಾಯತ ಸಭಾಭವನದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಲಾಗುವುದು.ಸಾರ್ವಜನಿಕರು ತಮ್ಮ ದೂರ, ಅಹವಾಲುಗಳನ್ನು ಸಲ್ಲಿಸಬೇಕೆಂದು ಅವರು ತಿಳಿಸಿದ್ದಾರೆ.

### ಸುರಿದ ಭಾರಿ ಮಳೆಗೆ ಕುಸಿದ ಮನೆಗಳು ಸಿಡಿಲಿಗೆ ಹಸು ಸಾವು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮುದ್ದೇಬಿಹಾಳ

ಗುರುವಾರ ಸುರಿದ ಭಾರಿ ಮಳೆಗೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮನೆಗಳು ಕುಸಿದಿವೆ ಸಿಡಿಲಿಗೆ ಹಸು ಮೃತಪಟ್ಟ ಘಟನೆ ನಡೆದಿದೆ

ತಾಲ್ಲೂಕಿನ ತಾರನಾಳ ಗ್ರಾಮದ ಮಡಿವಾಳಮ್ಮ ಚಲವಾದಿ,ಅಡವಿ ಸೋಮನಾಳ ಗ್ರಾಮದ ಹಣಮಂತ ಹಂದ್ರಾಳ ಜಕ್ಕೆರಾಳ ಗ್ರಾಮದ ದ್ಯಾಮಣ್ಣ ಹಂದ್ರಾಳ, ದೇವೂರ ಗ್ರಾಮದ ದುರಗವ್ವ ಮಾದರ,ಶಂಕ್ರವ್ವ ಮಾದರ,ಮುತ್ತಪ್ಪ ಮಾದರ, ಕುಂಟೋಜಿ ಗ್ರಾಮದ ಮರಲಿಂಗವ್ವ ಕವಡಿಮಟ್ಟಿ, ಮತ್ತು ಶರಣಮ್ಮ ಗೂಲ್ಲರ ಇವರ ಮನೆಗಳು ಸುರಿದ ಮಳೆಗೆ ಭಾಗಶಃ ಹಾನಿಯಾಗಿವೆ ಮತ್ತು ಸಿಡಿಲಿಗೆ ಕುಂಟೋಜಿ ಗ್ರಾಮದ ಯಲ್ಲಪ್ಪ ಯರಝುರಿ ಅವರಿಗೆ ಸೇರಿದ ಆಕಳು ಸಾವನ್ನಪ್ಪಿದೆ ಎನ್ ಡಿಆರ್‌ಎಫ್ ಹಯ ಎಸ್‌ಡಿ ಆರ್‌ಎಫ್ ನಿಯಮಾನುಸಾರ ಸಿಡಿಲಿಗೆ ಆಕಳು ಮೃತಪಟ್ಟರೆ 37500 ರೂ. ಹಾಗೂ ಪಕ್ಕಾ ಮನೆ ಸಂಪೂರ್ಣ ಹಾನಿಯಾದರೆ 120,000 ರೂ. ಪಕ್ಕಾ ಮನೆ ಶೇ 15% ಹಾನಿಯಾದರೆ 6500 ರೂ. ಪರಿಹಾರ ನೀಡಲಾಗುತ್ತದೆ ಎಂದು ತಹಶೀಲ್ದಾರ ಬಸವರಾಜ ನಾಗರಾಳ ತಿಳಿಸಿದ್ದಾರೆ. ಮಳೆ ಮಾಹಿತಿ; ಮುದ್ದೇಬಿಹಾಳ ಪಟ್ಟಣದಲ್ಲಿ 45.00 ಮಿಮೀ, ನಾಲತವಾಡ ಪಟ್ಟಣದಲ್ಲಿ 17.80ಮಿಮೀ ಢವಳಗಿ 52.40 ಮಿಮೀ, ತಾಳಿಕೋಟೆ 119.40 ಮಿಮೀ ಮಳೆ ದಾಖಲಾಗಿದೆ

### ರೂಂನಲ್ಲಿ ಕೂಡಿ ಹಾಕಿ ಯುವಕನ ಮೇಲೆ ಮಾರಣಾಂತಿಕ ಹಲ್ಲೆ

• ಉದಯವಾಹಿನಿ, ದಾವಣಗೆರೆ

ಪೊಲೀಸರು ಎಷ್ಟೇ ಕಠಿಣವಾದಂತ ನಿಯಮ ಜಾರಿಗೊಳಿಸಿದರು, ಎಷ್ಟೇ ಕಟ್ಟುನಿಟ್ಟಿನ ಕ್ರಮ ಕೈಗೊಂಡರು ಕೂಡ ನೈತಿಕ ಪೊಲೀಸ್ ಸಿಗಿರಿ ಪ್ರಕರಣಗಳು ನಿಲ್ಲುತ್ತಿಲ್ಲ. ಇದೀಗ ದಾವಣಗೆರೆ ಜಿಲ್ಲೆಯ ಹರಿ ಹರ ತಾಲ್ಲೂಕಿನ ಬೆಂಕಿ ನಗರದಲ್ಲಿ ಯುವಕನೊಬ್ಬನನ್ನು ಐದಾರು ಜನ ರೂಮ್‌ನಲ್ಲಿ ಕೂಡಿಹಾಕಿ ಮಾರಣಾಂತಿಕವಾಗಿ ಹಲ್ಲೆ ನಡೆಸಿರುವ ಘಟನೆ ನಡೆದಿದೆ. ಹೌದು ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ನೈತಿಕ ಪೊಲೀಸ್ ಗಿರಿ ನಡೆದಿದ್ದು, ಯುವಕನೊಬ್ಬನನ್ನು ರೂಮ್‌ನಲ್ಲಿ ಕೂಡಿಹಾಕಿ ಹಲ್ಲೆ ನಡೆಸಿರುವ ಆರೋಪ ಇದೀಗ ಕೇಳಿಬಂದಿದೆ. ಯುವಕನನ್ನು ಕೂಡಿಹಾಕಿ ಐದಾರು ಜನರು ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಹರಿಹರದ ಬೆಂಕಿ ನಗರದಲ್ಲಿ ಈ ಒಂದು ಅಮಾನವೀಯ ಘಟನೆ ನಡೆದಿದೆ ಎಂದು ಹೇಳಲಾಗುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಹಲ್ಲೆ ಮಾಡುತ್ತಿರುವ ವಿಡಿಯೋ ಇದೀಗ ವೈರಲ್ ಆಗುತ್ತಿದೆ.ಘಟನೆ ಕುರಿತಂತೆ ಅಲ್ಲಿಗೆ ಒಳಗಾದ ಯುವಕ ಯಾವುದೇ ದೂರನ್ನು ದಾಖಲಿಸಿಲ್ಲ ಎಂದು ತಿಳಿದು ಬಂದಿದೆ.

### ಬಾಳೆಹಣ್ಣಿನಲ್ಲಿ ಔಷಧಿ ಬೆರಸಿ 30 ಮಂಗಗಳ ಮಾರಣಹೋಮ

• ಉದಯವಾಹಿನಿ, ಚಿಕ್ಕಮಗಳೂರು

ಬಾಳೆಹಣ್ಣಿನಲ್ಲಿ ಔಷದ ಹಾಕಿ ಸುಮಾರು 30 ಮಂಗಗಳನ್ನು ದಾರುಣವಾಗಿ ಸಾಯಿಸಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಎನ್‌ಆರ್ ಪುರ ತಾಲ್ಲೂಕಿನ ದ್ಯಾವಣ ಎಂಬ ಅರಣ್ಯ ವಲಯ ಪ್ರದೇಶದಲ್ಲಿ ನಡೆದಿದೆ. ಹೌದು ದ್ಯಾವಣ ಗ್ರಾಮದ ಬಳಿ 30 ಮಂಗಗಳ ಮಾರಣಹೋಮ ನಡೆದಿದ್ದು, ಬಾಳೆಹಣ್ಣಿಗೆ ಔಷಧಿ ಹಾಕಿ 30 ಮಂಗಗಳನ್ನು ಕಿಡಿಗೇಡಿಗಳು ಕೊಂದಿದ್ದಾರೆ. ಚಿಕ್ಕಮಂಗಳೂರು ಜಿಲ್ಲೆಯ ಎನ್ ಆರ್ ಪುರ ತಾಲ್ಲೂಕಿನ ದ್ಯಾವನ ಬಳಿ ಈ ದುರ್ಘಟನೆ ಸಂಭವಿಸಿದೆ.

16 ಗಂಡು 14 ಹೆಣ್ಣು 4 ಮರಿ ಕೋತಿಗಳ ಮಾರಣ ಹೋಮ ನಡೆದಿದೆ. 30 ಕೋತಿಗಳನ್ನು ಕೊಂದು ಪಾಪಿಗಳು ರಸ್ತೆಗೆ ತಂದು ಎಸೆದು ಹೋಗಿದ್ದಾರೆ. ಜ್ಞಾನ ತಪ್ಪಿದ ಬಳಿಕ ತಲೆಗೆ ಹೊಡೆದುಕೊಂದಿದ್ದಾರೆ. 30 ಮಂಗಳ ತಲೆಯಲ್ಲಿ ಒಂದೇ ರೀತಿಯ ಗಾಯ ರಕ್ತ ಸುರಿದು ಸಾವನ್ನಪ್ಪಿವೆ. ಸ್ಥಳಕ್ಕೆ ಡಿಎಫ್‌ಓ, ಆರ್‌ಎಫ್‌ಓ, ಪಿಎಸ್‌ಐ ಪಶು ಸಂಗೋಪನೆ ಸಿಬ್ಬಂದಿ ಭೇಟಿ ನೀಡಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ.

### ಯಾವುದೇ ಕ್ಷಣದಲ್ಲಿ ರಾಜ್ಯ ಸರ್ಕಾರ ಪತನ: ಕುಮಾರ್ ಬಂಗಾರಪ್ಪ ಭವಿಷ್ಯ

• ಉದಯವಾಹಿನಿ, ಸೊರಬ

ರಾಜಕಾರಣದ ತೆವಲಿಗೋಸ್ಕರ ಎದುರಾಳಿ ಬಗ್ಗೆ ಹಗುರುವಾಗಿ ಮಾತನಾಡುವ ಸಚಿವರಿಗೆ ಕ್ಷೇತ್ರದ ಅಭಿವೃದ್ಧಿ ಬೇಕಾಗಿಲ್ಲ. ಲೋಕಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಹಾಗೂ ನಟ ರಾಜಕುಮಾರ್ ಅವರ ಹೆಸರು ಬಳಸಿಕೊಂಡು ಅವರಿಗೆ ಅಪಮಾನ ಮಾಡಿರುವ ಸಚಿವ ಮಧು ಬಂಗಾರಪ್ಪ ಅವರಿಗೆ ತಮ್ಮ ಸ್ಥಾನದ ಗೌರವ ಗೊತ್ತಿಲ್ಲ ಎಂದು ಮಾಜಿ ಶಾಸಕ ಕುಮಾರ್ ಬಂಗಾರಪ್ಪ ವಾಗ್ದಾಳಿ ನಡೆಸಿದರು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರು ಹಾಗೂ ಮತದಾರರಿಗೆ ಪಟ್ಟಣದ ಎಸ್.ಬಂಗಾರಪ್ಪ ಅವರ ಪ್ರತಿಮೆ ಬಳಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

ಕನ್ನಡ ಸರಿಯಾಗಿ ಓದಲು, ಬರೆಯಲು ಬಾರದವರನ್ನು ಶಿಕ್ಷಣ ಸಚಿವರನ್ನಾಗಿ ಮಾಡಿರುವುದು ಕನ್ನಡಕ್ಕೆ ಮಾಡಿರುವ ಅಪಮಾನವಾಗಿದೆ. ತಕ್ಷಣವೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಲುಗಾಡುತ್ತಿದ್ದು, ಯಾವುದೇ ಕ್ಷಣದಲ್ಲಿ ಪತನವಾಗಬಹುದು ಎಂದು ಹೇಳಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ:** ನೀವು ಅವರನ್ನು ಸಂತೋಷಗೊಳಿಸಲು ಏನೇ ಮಾಡಿದರೂ ಕೂಡ. ಪ್ರಣಯ ಮತ್ತು ಸಾಮಾಜಿಕವಾಗಿ ಬೆರೆಯುವುದು ಬಾಕಿಯಿರುವ ಕೆಲಸಗಳ ಹೊರತಾಗಿಯೂ ನಿಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ.

**ವೃಷಭ:** ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ. ಪ್ರತಿಯೊಬ್ಬರೂ ಇಂದು ನಿಮ್ಮ ಸ್ನೇಹಿತರಾಗಯಸುತ್ತಾರೆ ಮತ್ತು ನಿಮಗೆ ಇದರಿಂದ ಸಂತೋಷವೆನಿಸುತ್ತದೆ.

**ಮಿಥುನ:** ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ ಅಥವಾ ಪೋಷಕರೊಂದಿಗೆ ಮಾತನಾಡಿ.

**ಕರ್ಕಾಟಕ:** ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ. ನೀವು ಕಾಳಜಿ ವಹಿಸುವ ಯಾರಾದರ ಜೊತೆಗಿನ ಸಂವಹನದ ಕೊರತೆ ನಿಮಗೆ ಖಿನ್ನತೆಯನ್ನು ಉಂಟುಮಾಡುತ್ತದೆ.

**ಸಿಂಹ:** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟರಿ ಮತ್ತು ಅತಿಯಾಗಿ ತಿನ್ನಬೇಡಿ. ಇಂದು ಈ ರಾಶಿಚಕ್ರದ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಸಿಗಬಹುದು. ಇದು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತದೆ.

**ಕನ್ಯಾ:** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು.

**ತುಲಾ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು.

**ವೃಶ್ಚಿಕ:** ನಿಮ್ಮ ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚ ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ.

**ಧನಸ್ಸು:** ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ. ಇಂದು ನೈಸರ್ಗಿಕ ಸೌಂದರ್ಯದಿಂದ ವಿಸ್ಮಯಗೊಳ್ಳುವ ಸಾಧ್ಯತೆಯಿದೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ನಿಮ್ಮ ಸಾಮರ್ಥ್ಯ ನಿಮಗೆ ಗೌರವ ತರುತ್ತದೆ.

**ಮಕರ:** ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ. ಇಂದು ನೀವು ನಿಮ್ಮ ಸ್ನೇಹಿತನ ಅನುಪಸ್ಥಿತಿಯಲ್ಲಿ ಅವರ ಸುಗಂಧವನ್ನು ಅನುಭವಿಸುತ್ತೀರಿ.

**ಕುಂಭ:** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ.

**ಮೀನ:** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

# ಬಳ್ಳಾರಿ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದ ಮುಂಗಾರು

**• ಜಿಲ್ಲೆಯಲ್ಲಿ 67,478 ಮೆಟ್ರಿಕ್ ಟನ್ ರಸಗೊಬ್ಬರ ಹಾಗೂ 16,223 ಕ್ವಿಂಟಲ್ ಬಿತ್ತನೆ ಬೀಜದ ದಾಸ್ತಾನು**

• ಉದಯವಾಹಿನಿ ಬಳ್ಳಾರಿ

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮುಂಗಾರು ಮಳೆ ಆರಂಭವಾಗಿದೆ. ಕಳೆದ ವರ್ಷ ಬರದಿಂದ ತತ್ತರಿಸಿದ್ದ ರೈತರು ಈ ಬಾರಿ ಉತ್ತಮ ಮಳೆಯಾಗುವ ನಿರೀಕ್ಷೆಯಲ್ಲಿ ಕೃಷಿ ಚಟುವಟಿಕೆಗಳನ್ನು ಆರಂಭಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಮುಂಗಾರು ಮಳೆಯು ರೈತರ ಮೊಗದಲ್ಲಿ ನೆಮ್ಮದಿ ಮತ್ತು ಸಂತಸ ಮೂಡಿಸಿದೆ.

ಪ್ರಸ್ತುತ ಜಿಲ್ಲೆ ಯಾದ್ಯಂತ ಕೃಷಿ ಚಟುವಟಿಕೆಗಳು ಅತ್ಯಂತ ಬಿರುಸಿನಿಂದ ನಡೆಯುತ್ತಿದೆ. ಜಿಲ್ಲೆಯಲ್ಲಿ 67,478 ಮೆಟ್ರಿಕ್ ಟನ್ ರಸಗೊಬ್ಬರ ಹಾಗೂ 16,223 ಕ್ವಿಂಟಲ್ ಬಿತ್ತನೆ ಬೀಜದ ದಾಸ್ತಾನು ಮಾಡಲಾಗಿದ್ದು, ಬಿತ್ತನೆ ಬೀಜ ಹಾಗೂ ರಸಗೊಬ್ಬರದ ವಿತರಣೆ ಕಾರ್ಯವು ಸುಗಮವಾಗಿ ನಡೆಯುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ತಿರುಮಲೇಶ್ ತಿಳಿಸಿದ್ದಾರೆ.

**ರೈತರ ಮೊಗದಲ್ಲಿ ನೆಮ್ಮದಿ**

ಬಳ್ಳಾರಿ ಜಿಲ್ಲೆಯ ವಾರ್ಷಿಕ ಮಳೆಯು 599.9 ಮಿ. ಮೀ. ಇದೆ. 2024ರ ಜನವರಿಯಿಂದ ಜೂನ್ 1ರವರೆಗೆ 81.5 ಮಿ. ಮೀ. ಮಳೆಯಾಗಬೇಕಿದ್ದು, ವಾಸ್ತವವಾಗಿ 119.9 ಮಿ. ಮೀ. (ಶೇ.47.1) ಮಳೆ ಸುರಿದಿತ್ತು. ಬಳಿಕ ಮೇ 28ರಿಂದ ಜೂ.6ರ ವರೆಗಿನ 7 ದಿನಗಳಲ್ಲಿ 14.3 ಮಿ. ಮೀ. ವಾಡಿಕೆ ಮಳೆಗಿಂತ 48.0 ಮಿ. ಮೀ. ಮಳೆ (ಶೇ.235.7) ಸುರಿದಿದೆ. ಇದರಿಂದಾಗಿ ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಹೆಚ್ಚು ಭರದಿಂದ ನಡೆಯುತ್ತಿವೆ.

**ಬಿತ್ತನೆ ಬೀಜದ ಸಂಗ್ರಹ:** ಬಳ್ಳಾರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಭತ್ತ, ಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ಶೇಂಗಾ, ತೊಗರಿ, ರಾಗಿ ಸೇರಿ ಒಟ್ಟು 16,223 ಕ್ವಿಂಟಾಲ್ ಬಿತ್ತನೆ ಬೀಜದ ಬೇಡಿಕೆ ಇದ್ದು, ಕೆ.ಎಸ್.ಎಸ್.ಸಿ., ಎನ್.ಎಸ್.ಸಿ., ಕೆ.ಓ.ಎಫ್ ಸಂಸ್ಥೆಗಳು ಹಾಗೂ ಖಾಸಗಿ ಬಿತ್ತನೆ ಬೀಜ ಸರಬರಾಜುದಾರ ಸಂಸ್ಥೆಗಳಲ್ಲಿ 32,789 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ. ವಿತರಣೆ ಕಾರ್ಯ ಪ್ರಾರಂಭವಾಗಿದ್ದು, 299 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆಯಾಗಿದೆ. ಜಿಲ್ಲೆಯಲ್ಲಿ 4,00,043 ಹೆಕ್ಟೇರ್ ಭೌಗೋಳಿಕ ಪ್ರದೇಶವಿದ್ದು, 2,78,227 ಹೆಕ್ಟೇರ್ ಸಾಗುವಳಿಗೆ ಸಜ್ಜಾಗಿದೆ. ಒಟ್ಟು 1,59,662 ರೈತರು ಸಾಗುವಳಿದಾರರಿದ್ದು, ಆ ಪೈಕಿ 69,825 ಅತೀ ಸಣ್ಣ ರೈತರು, 44,046 ಸಣ್ಣ ರೈತರು, 44,210 ಮಧ್ಯಮ ರೈತರು ಹಾಗೂ 1,581 ದೊಡ್ಡ ರೈತರಿದ್ದಾರೆ.

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಮುಂಗಾರಿಗೆ 1,73,897 ಹೆಕ್ಟೇರ್ ಪ್ರದೇಶ ಬಿತ್ತನೆ ಗುರಿ ಇದ್ದು, ಇಲ್ಲಿಯವರೆಗೆ 366 ಹೆಕ್ಟೇರ್ ಪ್ರದೇಶ ಬಿತ್ತನೆಯಾಗಿದ್ದು, ಶೇ.0.21 ರಷ್ಟು ಪ್ರಗತಿಯಾಗಿದೆ. ಮುಂಗಾರು ಹಂಗಾಮಿಗೆ ಯೂರಿಯಾ, ಡಿ.ಎ.ಪಿ ಹಾಗೂ ಕಾಂಪ್ಲೆಕ್ಸ್ ಸೇರಿ ಒಟ್ಟು 1,13,167 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದ್ದು, ಖಾಸಗಿ ಡೀಲರ್ಸ್, ಕೆ.ಎಸ್.ಎಸ್.ಸಿ ಹಾಗೂ ಮಾರುಕಟ್ಟೆ ಫೆಡರಷನ್ ಮೂಲಕ 70,243 ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜಾಗಿದೆ ಮತ್ತು 2,765 ಮೆಟ್ರಿಕ್ ಟನ್ ವಿತರಣೆಯಾಗಿದ್ದು, 67,478 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದೆ.


ಉದಯವಾಹಿನಿ ಚಿತ್ರ

**ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ದಾಸ್ತಾನು ಇದ್ದು, ರೈತರು ಯಾವುದೇ ರೀತಿಯ ಆತಂಕ, ಗೊಂದಲಪಡುವ ಅವಶ್ಯಕತೆಯಿಲ್ಲ. ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಣೆ ಮಾಡಲಾಗುತ್ತಿದೆ.**

**ಜಿಲ್ಲೆಯಲ್ಲಿ ಈ ವರ್ಷ ಉತ್ತಮ ಮಳೆಯಾಗುವ ಕುರಿತಂತೆ ಹವಾಮಾನ ಇಲಾಖೆಯ ಮುನ್ಸೂಚನೆಗಳು ಇದ್ದು, ಇದಕ್ಕೆ ಪೂರಕವಾಗಿ ಪೂರ್ವ ಮುಂಗಾರು ಉತ್ತಮವಾಗಿದೆ, ಕೃಷಿ ಚಟುವಟಿಕೆಗಳು ಉತ್ತಮವಾಗಿ ನಡೆಯುತ್ತಿವೆ. ಜಿಲ್ಲೆಯ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಪೂರೈಕೆಯಲ್ಲಿ ಯಾವುದೇ ಕೊರತೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.**

## ಎರಡನೇ ಬಾರಿಗೆ ಪದವೀಧರರ ಕ್ಷೇತ್ರದಿಂದ ಕಾಂಗ್ರೆಸ್‌ನ ಪಾಟೀಲ ಗೆಲುವು, ಮುಖಂಡರು ವಿಜಯೋತ್ಸವ

• ಉದಯವಾಹಿನಿ, ಚಿಂಚೋಳಿ

ಕರ್ನಾಟಕ ಈಶಾನ್ಯ ಪದವೀಧರರ ಚುನಾವಣೆಯಲ್ಲಿ ಎರಡನೇ ಬಾರಿಗೆ ಡಾ.ಚಂದ್ರಶೇಖರ ಪಾಟೀಲ ಹುಮನಾಬಾದ ಭರ್ಜರಿಯಾಗಿ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಚಿಂಚೋಳಿ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ವಕ್ತಾರ ಶರಣುಪಾಟೀಲ ಮೋತಕಪಳ್ಳಿ ಮತ್ತು ಪ್ರಧಾನ ಕಾರ್ಯದರ್ಶಿ ಅಬ್ದುಲ್ ಬಾಷೀದ್ ನೇತೃತ್ವದಲ್ಲಿ ಕಲಬುರ್ಗಿಗೆ ತೆರಳಿ ಸನ್ಮಾನಿಸಿ ಗೌರವಿಸಿ ಶುಭಕೋರಿ ಹರ್ಷ ವ್ಯಕ್ತಪಡಿಸಿದರು.

ಎರಡನೇಯ ಪ್ರಾಶಸ್ತ್ಯ ಮತ ಏಣಿಕೆ ನಂತರ ಒಟ್ಟಾರೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಡಾ. ಚಂದ್ರಶೇಖರ ಪಾಟೀಲ 43,484ಮತಗಳು ಪಡೆದರೆ ಸಮೀಪದ ಪ್ರತಿಸ್ಪರ್ಧಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಅಮರನಾಥ ಪಾಟೀಲರು 38,833 ಮತಗಳು ಪಡೆದು ಅಂದಾಜು 4,650ಕ್ಕೂ ಅಧಿಕ ಮತಗಳಿಂದ ಸೋಲುನುಭವಿಸಿದರು. ಒಟ್ಟಾರೆ ಚಲಾವಣೆಯಾದ ಮತಗಳು 1,09,031ಮತಗಳ ಪೈಕಿ 96,519ಮತಗಳು ಪುರಸ್ಕೃತರಾದರೆ 12,513ಮತಗಳು ತಿರಸ್ಕೃತಗೊಂಡಿವೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಮಾಜಿ ಅಧ್ಯಕ್ಷ ಅನೀಲ ಜಮಾದಾರ, ಯುಥ್ ಅಧ್ಯಕ್ಷ ನಾಗೇಶ ಗುಣಾಜೀ, ಗಂಗಾಧರ ಗಡ್ಡಿಮನಿ, ಅನೀಲ ಹುಮ ನಾಬಾದ, ಸೇರಿದಂತೆ ಅನೇಕರಿದ್ದರು.


ಉದಯವಾಹಿನಿ ಚಿತ್ರ

## ಕಾರ್ಯದರ್ಶಿಯಾಗಿ ಹಸನ್ ಪಟೇಲ ಬಿಳವಾರ ನೇಮಕ


• ಉದಯವಾಹಿನಿ, ಯಡ್ರಾಮಿ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಹಸನ್ ಪಟೇಲ ಬಿಳವಾರ ನೇಮಕ.

ಕಲ್ಬುರ್ಗಿ ಜಿಲ್ಲೆಯ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಶ್ರೀ ಎಚ್ ಆರ್ ಬಸವರಾಜಪ್ಪ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ಮತ್ತು ಅಮೀನ್ ಪಾಷಾ ದಿದ್ದಿಗಿ ಅವರ ಅನುಮತಿಯ ಮೇರೆಗೆ ಶ್ರೀ ಹಸನ್ ಪಟೇಲ್ ತಂದೆ ಲಾಡ್ಲೆ ಪಟೇಲ ಮುಕ್ಕಾಮ ಬಿಳವಾರ ತಾ. ಯಡ್ರಾಮಿ ಇವರನ್ನು ಸಂಘದ ಜಿಲ್ಲಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿ ಆದೇಶ ಪ್ರತಿಯನ್ನು ನೀಡಿ ಗೌರವಿಸಲಾಯಿತು. ಮತ್ತು ಈ ಭಾಗದ ರೈತರ ಕುಂದುಕೊರತೆಗಳನ್ನು ಆಲಿಸಿ ನ್ಯಾಯ ದೊರಕಿಸಿ ಕೊಡಲು ಮತ್ತು ಈ ಭಾಗದ ರೈತರ ಮಲ್ಲಬಾದ್ ಎತ ನೀರಾವರಿ ಯೋಜನೆ ಸಂಪೂರ್ಣ ಅನುಷ್ಠಾನಕ್ಕೆ ಬರಬೇಕು ಈಗಾಗಲೇ ಗ್ರಾಮೀಣ ಮಟ್ಟದಲ್ಲಿ ನಮ್ಮ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಈ ಭಾಗದಲ್ಲಿ ಪ್ರಭಲವಾಗಿ ಬೆಳೆಯುತ್ತಿದೆ.

ಅಲ್ಲದೆ ಇನಮ್ಮ ಭಾಗದ ರೈತರು ಏನೇ ಕುಂದು ಕೊರತೆ ಸಮಸ್ಯೆ ಬಂದರು ಸದಾ ರೈತರ ಸಲುವಾಗಿ ಧ್ವನಿ ಎತ್ತಿ ಹೋರಾಟ ಮಾಡಿ ನ್ಯಾಯ ಒದಗಿಸಿಕೊಡುವ ಸಲು ವಾಗಿ ರೈತರ ಸದಾ ಬೆಂಗಾವಲಾಗಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸದಾ ಸಿದ್ಧವಿರುತ್ತದೆ ಎಂದು ಈ ಸಂದರ್ಭದಲ್ಲಿ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಸೋಮನಗೌಡ ಎಸ್ ಪಾಟೀಲ ಬಳಬಟ್ಟಿಯವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಗೌರವಧ್ಯಕ್ಷರಾದ ಭೀಮಶಂಕರ್ ಕಟ್ಟಿಮನಿ ಸಾ.ಕಣದಾಳ್ ಮತ್ತು ಸಂತೋಷ್ ಬಿ ರಾಠೋಡ್ ಕಲಬುರ್ಗಿ ತಾಲ್ಲೂಕಾ ಅಧ್ಯಕ್ಷರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

**ರೈತರ ಸಲುವಾಗಿ ಧ್ವನಿ**

## ಗಾಂಜಾ ಪೂರೈಕೆ: ಕೇರಳದ ಆರೋಪಿ ಬಂಧನ

• ಉದಯವಾಹಿನಿ, ಉಡುಪಿ

ಉಡುಪಿ ಜಿಲ್ಲೆಯ ಮಣಿಪಾಲದಲ್ಲಿ ವಿದ್ಯಾರ್ಥಿಗಳಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದ ಆರೋಪಿಯನ್ನು ಮಣಿಪಾಲ ಪೊಲೀಸರು ಬಂಧಿಸಿದ್ದಾರೆ. ಕೇರಳ ಮೂಲದ ವಿದ್ಯಾರ್ಥಿ ಸಿದ್ದಾರ್ಥ್ ಬಂಧಿತ ಆರೋಪಿ ಎಂದು ಗುರುತಿಸಲಾಗಿದೆ.

ಕೇರಳ ಮೂಲದ ವಿದ್ಯಾರ್ಥಿ ಸಿದ್ದಾರ್ಥ್ ಮಣಿಪಾಲ ಹೆರ್ಗದ ಅಪಾರ್ಟ್ಮೆಂಟ್ ಒಂದರಲ್ಲಿ ವಾಸವಿದ್ದನು.ತಮಿಳುನಾಡಿನಿಂದ ಗಾಂಜಾ ಖರೀದಿಸಿ ಮಾರಾಟ ಮಾಡುತ್ತಿದ್ದ ಆರೋಪಿ, ಇಲ್ಲಿನ ವಿದ್ಯಾರ್ಥಿಗಳನ್ನೇ ಟಾರ್ಗೆಟ್ ಮಾಡಿಕೊಂಡು ಗಾಂಜಾ ಪೂರೈಕೆ ಮಾಡುತ್ತಿದ್ದ ಎನ್ನಲಾಗಿದೆ. ಮಣಿಪಾಲದಲ್ಲಿ ವಿದ್ಯಾಭ್ಯಾಸ ಮಾಡಿಕೊಂಡಿದ್ದ ಈತ ಇತರ ವಿದ್ಯಾರ್ಥಿಗಳ ಸ್ನೇಹ ಬೆಳೆಸಿ ಅವರಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದ ಎನ್ನುವ ಆರೋಪ ಕೇಳಿಬಂದಿದೆ. ಖಚಿತ ಮಾಹಿತಿ ಮೇರೆಗೆ ಮಣಿಪಾಲ ಹೆರ್ಗದ ಅಪಾರ್ಟ್ಮೆಂಟ್ ಮೇಲೆ ದಾಳಿ ನಡೆಸಿದ ಮಣಿಪಾಲ ಪೊಲೀಸರು ಆರೋಪಿಯನ್ನು ಬಂಧಿಸಿ 20,000 ರೂಪಾಯಿ ಮೌಲ್ಯದ 388 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ. ವ್ಯವಹಾರಕ್ಕೆ ಬಳಸುತ್ತಿದ್ದ 45,000 ಮೌಲ್ಯದ ಮೊಬೈಲ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರೋಪಿ ಬಿಳಿ ಬಣ್ಣದ ಹಾಳೆಯಲ್ಲಿ ಗಾಂಜಾ ತುಂಬಿಸಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡಿ, ಒಂದು ರೋಲ್‌ನಿಂದ ಒಂದು ಸಾವಿರ ರೂಪಾಯಿ ಹಣಗಳಿಸುತ್ತಿದ್ದ. ಆರೋಪಿ ಬಳಿ ಸಿಗರೇಟ್ ಮಾದರಿಯ 43 ರೋಲ್‌ಗಳು ಪತ್ತೆಯಾಗಿದೆ ಎನ್ನುವ ಮಾಹಿತಿ ಲಭ್ಯವಾಗಿದೆ.


ಉದಯವಾಹಿನಿ ಚಿತ್ರ

## ವಿದ್ಯುತ್ ತಂತಿ ಸ್ಪರ್ಶ ಪುಟಾಣಿ ಬಾಲಕಿ ಸಾವು

• ಉದಯವಾಹಿನಿ, ವಿಜಯನಗರ

ಶಾಲೆಗೆ ಹೋಗುತ್ತಿದ್ದ ಮಗುವಿಗೆ ವಿದ್ಯುತ್ ತಗುಲಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಕೂಡ್ಲಿಗಿ ತಾಲ್ಲೂಕಿನ ಕಾತ್ರಿಕಾಯನಹಟ್ಟಿ ಗ್ರಾಮದಲ್ಲಿ ನಡೆದಿದೆ.



ಮೃತ ಬಾಲಕಿಯನ್ನು ತುಳಸಿ (8) ಕಾತ್ರಿಕಾಯನಹಟ್ಟಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಎರಡನೇ ತರಗತಿ ಓದುತ್ತಿದ್ದಳು. ಇಂದು ಬೆಳಗ್ಗೆ ಶಾಲೆಗೆ ಎಂದು ತೆರಳುವಾಗ ವಿದ್ಯುತ್ ಕಂಬಕ್ಕೆ ಹಾಕಿದ್ದ ತಂತಿ ತಗುಲಿ ಬಾಲಕಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

ಬಾಲಕಿಯ ಸಾವಿನಿಂದ ಇಡೀ ಗ್ರಾಮದಲ್ಲಿ ಮಡುಗಟ್ಟಿದ ವಾತಾವರಣ ಉಂಟಾಗಿದ್ದು, ಸ್ಥಳಕ್ಕೆ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಿಎಸ್.ಐ ಎರಿಯಪ್ಪ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

## ತುಂಬಿ ಹರಿದ ಹಳ್ಳ-ಶಾಲಾ ಮಕ್ಕಳಿಗೆ ಪ್ರಾಣಸಂಕಟ

• ಉದಯವಾಹಿನಿ, ಬೆಳಗಾವಿ

ಕುಂದಾನಗರಿ ಬೆಳಗಾವಿ ಜಿಲ್ಲೆಯ ಹಲವೆಡೆ ಅಬ್ಬರದ ಮಳೆಯಾಗುತ್ತಿರುವ ಹಿನ್ನೆಲೆ ನದಿ, ಹಳ್ಳ, ಕೆರೆಗಳು ಉಕ್ಕಿಹರಿದಿವೆ. ಪರಿಣಾಮ ಇದರಿಂದ ದೊಡ್ಡ ದೊಡ್ಡ ಅನಾಹುತಗಳೇ ಸೃಷ್ಟಿಯಾಗಿವೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಮುಂಗಾರು ಚುರುಕು ಪಡೆದ ಹಿನ್ನೆಲೆ ಹಳ್ಳ ತುಂಬಿ ಹರಿದಿದ್ದು, ಇದರಿಂದ ಶಾಲಾ ಮಕ್ಕಳು ಹಳ್ಳದ ಸೇತುವೆ ದಾಟಲು ಆಗದಂತಹ ಪರಿಸ್ಥಿತಿ ನಿರ್ಮಾಣವಾದ ಘಟನೆ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಉಡಚಮ್ಮ ನಗರದಲ್ಲಿ ನಡೆದಿದೆ.ಉಡಚ್ಚಮ್ಮ ನಗರದ ಸರ್ಕಾರಿ ಕನ್ನಡ ಶಾಲೆಗೆ ವಿದ್ಯಾರ್ಥಿಗಳು ಇದೇ ಹಳ್ಳವನ್ನೇ ದಾಟಿಕೊಂಡು ಹೋಗಬೇಕಿದೆ. ಆದ್ದರಿಂದ ಬೇರೆ ಯಾವುದೇ ಪರ್ಯಾಯ ದಾರಿಯಿಲ್ಲದೆ, ಶಾಲಾ ಮಕ್ಕಳು ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹಳ್ಳವನ್ನು ದಾಟಿ ಶಾಲೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ.ಇನ್ನು ಕೆಲವು ಪೋಷಕರು ತಮ್ಮ ಮಕ್ಕಳನ್ನು ಹಳ್ಳ ದಾಟಿಸಲು ಹರಸಾಹಸಪಟ್ಟಿದ್ದಾರೆ.20ಕ್ಕೂ ಅಧಿಕ ಶಾಲಾ ವಿದ್ಯಾರ್ಥಿಗಳು ಓಡಾಡುವ ಮಾರ್ಗ ಇದೊಂದೇ ಇರೋದು. ಪ್ರತಿ ವರ್ಷ ಮಳೆಯಿಂದ ಈ ಮಾರ್ಗದಲ್ಲಿ ಇದೇ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು, ಈ ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಅಲ್ಲದೆ, ಶಾಲಾ ಮಕ್ಕಳು, ಜನರ ಹಿತದೃಷ್ಟಿಯಿಂದ ಹಳ್ಳದ ಮೇಲೆ ಮೇಲ್ಸುತೇವೆ ನಿರ್ಮಾಣ ಮಾಡಬೇಕು ಎಂದು ಮೊದಲಿನಿಂದಲೂ ಒತ್ತಾಯಿಸುತ್ತಲೇ ಬಂದಿದ್ದೇವೆ. ಆದರೂ ಜನಪ್ರತಿನಿಧಿಗಳು ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ಸ್ಥಳೀಯರು ಅಸಮಾಧಾನ ಹೊರಹಾಕಿದ್ದಾರೆ.


ಉದಯವಾಹಿನಿ ಚಿತ್ರ

## ವಿಶ್ವಪರಿಸರ ದಿನಾಚರಣೆ


ಉದಯವಾಹಿನಿ ಚಿತ್ರ


• ಉದಯವಾಹಿನಿ ಗದಗ

ಸೊರಟೂರ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಅದರ ಪ್ರಯುಕ್ತ ಶಾಲಾ ಮಕ್ಕಳಿಗೆ ಪರಿಸರ ಸಂರಕ್ಷಣೆಯ ಕ್ರಮಗಳು ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಹಾಗೂ ಪರಿಸರ ಜಾಗೃತಿಯನ್ನು ಮೂಡಿಸಲು ಊರಿನ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ಕಾರ್ಯಕ್ರಮ ನೆರವೇರಿತು. ವಿದ್ಯಾರ್ಥಿಗಳು ಪರಿಸರ ಜಾಗೃತಿಯ ಘೋಷಣೆಗಳನ್ನು ಕೂಗುತ್ತಾ ಜನರಲ್ಲಿ ಗಿಡಮರಗಳನ್ನು ಬೆಳೆಸುವ ಕಾಳಜಿಯನ್ನು ಮೂಡಿಸುವುದು ಕಂಡುಬಂದಿತು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಮಹಮ್ಮದ ಶಫಿ ಯರಗುಡಿ, ಬಸವರಾಜ ನರ್ತಿ, ಪಿ.ಜಿ ನಾಯರ, ಎ. ಜಿ ಅಳವಂಡಿ, ಜ್ಯೋತಿ ಹಾದಿಮನಿ ಜಯಶ್ರೀ ವಿ, ಆರ್ ಎಫ್ ಗೌಡರ, ನಾಜನೀನ್, ಪಿ.ಸಿ ಉಳ್ಳಾಗಡ್ಡಿ ಉಪಸ್ಥಿತರಿದ್ದರು.

## ಸೊರಟೂರು ಗ್ರಾಮಕ್ಕೆ ಸಿ ಸಿ ಪಾಟೀಲ್ ಭೇಟಿ

• ಉದಯವಾಹಿನಿ ಗದಗ

ಸೊರಟೂರು ಗ್ರಾಮದ ಶ್ರೀ ಕಾಲಭೈರವ ದೇವಸ್ಥಾನಕ್ಕೆ ಭೇಟಿ ನೀಡಿದ ಮಾಜಿ ಸಚಿವ ಸಿ ಸಿ ಪಾಟೀಲ್ ವಿಶೇಷ ಪೂಜೆ ಸಲ್ಲಿಸಿದರು. ಇತ್ತೀಚಿಗೆ ಜರುಗಿದ ಹಾವೇರಿ -ಗದಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದ ಬಸವರಾಜ್ ಬೊಮ್ಮಾಯಿ ಇವರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಸೊರಟೂರು ಗ್ರಾಮಸ್ಥರಿಗೆ ಸಿ ಸಿ ಪಾಟೀಲ್ ಅಭಿನಂದನೆ ಸಲ್ಲಿಸಿದರು ಈ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರು ಇದ್ದರು.



ಉದಯವಾಹಿನಿ ಚಿತ್ರ

## ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತ ಬಲೆಗೆ ಬಿದ್ದ ತಾಲ್ಲೂಕು ಕಚೇರಿ ಅಟೆಂಡರ್

• ಉದಯವಾಹಿನಿ ಶಿವಮೊಗ್ಗ

ಲಂಚ ಸ್ವೀಕರಿಸುವ ವೇಳೆ ಅಟೆಂಡರ್ ಲೋಕಾಯುಕ್ತ ಬಲೆಗೆ ಬಿದ್ದ ಘಟನೆ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ನಡೆದಿದೆ. ಸಾಗರ ತಾಲ್ಲೂಕು ಕಚೇರಿಯ ದಾಖಲಾತಿ ವಿಭಾಗದ ಆರ್.ಆರ್.ಟಿ ಶಾಖೆಯ ಅಟೆಂಡರ್ ಬಸವರಾಜ್ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿ ಎಂದು ಗುರುತಿಸಲಾಗಿದೆ.

ಸಾಗರದ ಬಳಸಗೋಡು ಗ್ರಾಮದ ವ್ಯಕ್ತಿಯೊಬ್ಬರ ಜಮೀನಿನ ಆರ್.ಟಿ.ಸಿ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕಿತ್ತು. ಅವರ ಸ್ನೇಹಿತ ಅಸೀಬ್ ಎನ್ನುವವರು ತಾಲ್ಲೂಕು ಕಚೇರಿಗೆ ತೆರಳಿ ಅಟೆಂಡರ್ ಬಸವರಾಜ್ ಅವರ ಬಳಿ ಆರ್‌ಟಿಸಿಗೆ ಬೇಡಿಕೆ ಇಟ್ಟಿದ್ದರು. ಮೊದಲು ಬಸವರಾಜ್ ದಾಖಲಾತಿ ಜೆರಾಕ್ಸ್ ಹಾಗೂ ಚಲನ್‌ಗೆ 1500 ರೂ ಲಂಚ ಸ್ವೀಕರಿಸಿದ್ದಾರೆ. ಈ ವೇಳೆ ಶಿರಸ್ತೆದಾರರಿಗೆ ನೀಡಲು ಮತ್ತೆ 2,000 ಡಿಮ್ಯಾಂಡ್ ಮಾಡಿದ್ದಾರೆ. ಮೊದಲು ಲಂಚ ನೀಡುವಾಗ ವಿಡಿಯೋ ಮಾಡಿ ಇಟ್ಟುಕೊಂಡಿದ್ದ ದೂರುದಾರ ಬಳಿಕ ಮತ್ತೆ ಲಂಚ ನೀಡುವ ಮೊದಲು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದಾರೆ. ಅಟೆಂಡರ್ ಬಸವರಾಜ್ 2000 ರೂಪಾಯಿ ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತ ಡಿವೈಎಸ್‌ಪಿ ಉಮೇಶ್ ಈಶ್ವರ್ ನಾಯ್ಕ ನೇತೃತ್ವದಲ್ಲಿ ದಾಳಿ ನಡೆಸಿದ್ದು, ಆರೋಪಿ ಬಸವರಾಜ್‌ನನ್ನು ವಶಕ್ಕೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.


ಉದಯವಾಹಿನಿ ಚಿತ್ರ

## ಟ್ರಕ್ಕಿಂಗ್ ದುರಂತ: ಕುಂದಾಪುರದ ಪದ್ಮನಾಭ ಭಟ್ ನಿಧನ

• ಉದಯವಾಹಿನಿ, ಉಡುಪಿ

ಉತ್ತರಾಖಂಡಕ್ಕೆ ಟ್ರಕ್ಕಿಂಗ್‌ಗೆ ತೆರಳಿದ್ದ 9 ಮಂದಿ ಕನ್ನಡಿಗರು ದಾರುಣವಾಗಿ ಸಾವನ್ನಪ್ಪಿದ್ದಾರೆ. ಇಂದು ಡೆಹ್ರಾಡೂನ್‌ನಿಂದ ಮೃತದೇಹಗಳು ಏರ್ ಲಿಫ್ಟಿಂಗ್ ಮೂಲಕ ಬೆಂಗಳೂರಿಗೆ ಬರಲಿದೆ.ಈ ದುರಂತದಲ್ಲಿ ಟ್ರಕ್ಕಿಂಕ್‌ನಲ್ಲಿದ್ದ ಕುಂದಾಪುರ ಮೂಲದ ವ್ಯಕ್ತಿ ಸಹ ಸಾವನ್ನಪ್ಪಿದ್ದಾರೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕುಂಭಾಶಿ ಮೂಲದ ಪದ್ಮನಾಭ ಭಟ್ ಮೃತಪಟ್ಟವರು ಎಂದು ಗುರುತಿಸಲಾಗಿದೆ. ಕುಂಭಾಶಿಯ ಕೊರವಡಿ ರಸ್ತೆಯಲ್ಲಿರುವ ಶ್ರೀಹರಿಹರ ನಿಲಯ ಪದ್ಮನಾಭ್ ಭಟ್‌ರ ಮೂಲ ಮನೆಯಾಗಿದ್ದು, ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದರು. ಪ್ರವಾಸ ಹಾಗೂ ಟ್ರಕ್ಕಿಂಗ್‌ನಲ್ಲಿ ಅತಿಯಾದ ಆಸಕ್ತಿ ಹೊಂದಿದ್ದ ಪದ್ಮನಾಭ್ ಭಟ್ ಅವರು 22 ಜನರ ತಂಡದೊಂದಿಗೆ ಮೇ 29ರಂದು ಉತ್ತರ ಕಾಶಿ ತೆರಳಿದ್ದರು. ದುರಾದೃಷ್ಟವಶಾತ್ ಪ್ರವಾಸ ಮುಗಿಸಿ 15 ಸಾವಿರ ಅಡಿಯಿಂದ ಇಳಿವಾಗ ಈ ದುರ್ಘಟನೆಯಲ್ಲಿ ಸಾವನ್ನಪ್ಪಿದ್ದಾರೆ. ಉತ್ತರಾಖಂಡ ಚಾರಣಿಗರು ಸಾವನ್ನಪ್ಪಿದ ಪ್ರಕರಣದಲ್ಲಿ ಶಿರಸಿ ಮೂಲದ ಮಹಿಳೆ ಕೂಡ ಸಾವನ್ನಪ್ಪಿದರು. ಪದ್ಮಿನಿ ಹೆಗಡೆ (35) ಮೃತ ದುರ್ದೈವಿ. ಶಿರಸಿ ಮೂಲದ ಪದ್ಮಿನಿ ಹೆಗಡೆ ಅವರು ಬೆಂಗಳೂರಲ್ಲಿ ಗೂಗಲ್ ಕಂಪನಿಯ ಉದ್ಯೋಗಿ ಆಗಿದ್ದರು. ಕಳೆದ ಮೇ 29ರಿಂದ ಜೂನ್ 7 ರವರೆಗೆ ಉತ್ತರಾಖಂಡದ ಭಟವಾಡಿ, ಮಲ್ಲಾ-ಸಿಲ್ಲಾ, ಕುಶಕಲ್ಯಾಣ, ಸಹಸ್ರತಾಲ್‌ಗೆ ಟ್ರಕ್ಕಿಂಗ್ ಮಾಡಲು ಇವರು ಅನುಮತಿ ಪಡೆದಿದ್ದರು.


ಉದಯವಾಹಿನಿ ಚಿತ್ರ

**ಏರ್ ಲಿಫ್ಟಿಂಗ್ ಮೂಲಕ ಬೆಂಗಳೂರಿಗೆ**

**ಮಾಹಿತಿ ಕುಟುಂಬಕ್ಕೆ ಲಭ್ಯ**

**ಪದ್ಮಿನಿ ಅವರು ಕಳೆದ ಜೂನ್ 4ರಂದು ಮುಂಬೈನಲ್ಲಿ ಇದ್ದ ತಾಯಿಗೆ ಕೊನೆಯ ಬಾರಿ ಸಂಪರ್ಕ ಮಾಡಿದ್ದರು. ಇದಾದ ಬಳಿಕ ನಾಪತ್ತೆಯಾಗಿದ್ದಾರೆ ಎನ್ನುವ ಮಾಹಿತಿ ಕುಟುಂಬಕ್ಕೆ ಲಭ್ಯವಾಗಿತ್ತು. ಇದೀಗ ಪದ್ಮಿನಿ ಹೆಗಡೆ ಅವರು ಮೃತದೇಹವೂ ಪತ್ತೆಯಾಗಿದೆ ಎನ್ನಲಾಗಿದೆ. ವಿಪತ್ತು ನಿರ್ವಹಣ ಪ್ರಾಧಿಕಾರ ಪದ್ಮಿನಿ ಹೆಗಡೆ ಅವರು ಚಾರಣದ ವೇಳೆ ಮೃತಪಟ್ಟಿರುವ ಮಾಹಿತಿ ನೀಡಿದ್ದಾರೆ ಎಂದು ವರದಿಯಾಗಿದೆ.**

## ಚಾಕೊಲೇಟ್ ಆಸೆ ತೋರಿಸಿ ಬಾಲಕಿಯ ಕತ್ತು ಸೀಳಿದ ನೀಚ

• ಉದಯವಾಹಿನಿ, ಚಿತ್ರದುರ್ಗ

ಚಾಕೊಲೇಟ್ ಕೊಡಿಸುವ ನೆಪದಲ್ಲಿ 4 ವರ್ಷದ ಬಾಲಕಿಯನ್ನು ಹೊತ್ತೊಯ್ದು ಕತ್ತು ಕೊಯ್ದಿರುವ ದಾರುಣ ಘಟನೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ನಡೆದಿದೆ. ಮಲ್ಲಸಿಂಗನಹಳ್ಳಿ ಗ್ರಾಮದಲ್ಲಿ ಮನೆಯ ಮುಂಭಾಗ ಆಟ ಆಡುತ್ತಿದ್ದ ಬಾಲಕಿಯನ್ನು ಅದೇ ಗ್ರಾಮದ ಹನುಮಂತಪ್ಪ ಎಂಬಾತ ಚಾಕೊಲೇಟ್ ಕೊಡಿಸುವುದಾಗಿ ಜಮೀನಿಗೆ ಕರೆದು ಕೊಂಡು ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ.

ಆರೋಪಿ ಬಾಲಕಿಯ ಮೇಲೆ ಕೃತ್ಯ ಎಸಗುತ್ತಿದ್ದಾಗ ಅಲ್ಲೇ ಇದ್ದ ಜನರು ಓಡಿ ಬಂದಿದ್ದಾರೆ. ಈ ವೇಳೆ ಮಗುವನ್ನು ಅಲ್ಲೇ ಬಿಟ್ಟು ಅಲ್ಲಿಂದ ಎಸ್ಕೇಪ್ ಆಗಿದ್ದಾನೆ. ತಕ್ಷಣ ಬಾಲಕಿಯನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದು, ಸ್ಥಳಕ್ಕೆ ಹೊಳಲ್ಕೆರೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.


ಉದಯವಾಹಿನಿ ಚಿತ್ರ

## ಬಂಡಾಯವೆದ್ದು ಸೋತ ರಘುಪತಿ ಭಟ್

• ಉದಯವಾಹಿನಿ, ಶಿವಮೊಗ್ಗ



ವಿಧಾನ ಪರಿಷತ್ ಚುನಾವಣೆ ಫಲಿತಾಂಶ ಘೋಷಣೆ ಯಾಗಿದೆ. ನೈಋತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಕೈತಪ್ಪಿದ ಬಳಿಕ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಉಡುಪಿ ಕ್ಷೇತ್ರದ ಮಾಜಿ ಶಾಸಕ ರಘುಪತಿ ಭಟ್ ಸೋಲು ಕಂಡಿದ್ದಾರೆ. ನೈಋತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಧನಂಜಯ ಸರ್ಜಿ 37,627 ಮತಗಳನ್ನು ಪಡೆದು, 24,111 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಡಾ. ಧನಂಜಯ ಸರ್ಜಿಗೆ ಟಿಕೆಟ್ ನೀಡಿದ್ದರಿಂದ ಅಸಮಾಧಾನಗೊಂಡು ರಘುಪತಿ ಭಟ್ ಬಂಡಾಯ ಎದ್ದು, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

**ಯಾರಿಗೆ ಎಷ್ಟು ಮತಗಳು:** ನೈಋತ್ಯ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಧನಂಜಯ ಸರ್ಜಿ 37,627 ಮತಗಳು. ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ 13,516 ಮತಗಳು ಮತ್ತು ಕೆ. ರಘುಪತಿ ಭಟ್ 7039 ಮತಗಳನ್ನು ಪಡೆದಿದ್ದಾರೆ. ರಾತ್ರಿ 12.30ರ ತನಕ ಮೈಸೂರಿನಲ್ಲಿ ನೈಋತ್ಯ ಪದವೀಧರ ಕ್ಷೇತ್ರದ ಮತ ಎಣಿಕೆ ನಡೆಯಿತು. 515 ಮತಗಳು ತಿರಸ್ಕಾರಗೊಂಡಿವೆ.

# ಚಿನ್ನದ ಬೆಲೆಗೆ ಮಾವಿನ ಹಣ್ಣುಗಳ ಮಾರಾಟ: ಮಳೆಯಾದರೂ ತಗ್ಗದ ದರ

**• ಮಾವಿನ ಸೀಜನ್ ಮುಗಿಯುತ್ತಾ ಬಂದರೂ ಸಹ ಬೆಲೆಯಲ್ಲಿ ಇಳಿಕೆ ಆಗದಿರುವುದು ಮಾವು ಪ್ರಿಯರಿಗೆ ನಿರಾಸೆ**

• ಉದಯವಾಹಿನಿ ಹುಬ್ಬಳ್ಳಿ

ಉತ್ತರ ಕರ್ನಾಟಕದಲ್ಲಿ ಭಾರೀ ಮಳೆ ಆಗುತ್ತಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ಅತ್ಯಧಿಕ ಮಳೆ ಆಗುತ್ತಿದ್ದರು ಮಾರುಕಟ್ಟೆಯಲ್ಲಿ ಮಾವಿನ ಹಣ್ಣುಗಳ ಬೆಲೆ ಇಳಿಕೆ ಆಗಿಲ್ಲ. ಕೆಲವು ಮಾವುಗಳು ಚಿನ್ನದ ಬೆಲೆಗೆ ಬಿಕರಿಯಾಗುತ್ತಿವೆ. ಗ್ರಾಹಕರು ಬೆಲೆ ಏರಿಕೆಯಿಂದ ಖರೀದಿಗೆ ಹಿಂದೆ ಮುಂದೆ ನೋಡುತ್ತಿದ್ದಾರೆ.

ಸಾಕಷ್ಟು ಮಳೆ ಬೀಳುತ್ತಿದ್ದರು ಹುಬ್ಬಳ್ಳಿ ಮತ್ತು ಧಾರವಾಡದ ಮಾರುಕಟ್ಟೆಗಳಲ್ಲಿ ಹಣ್ಣುಗಳಿಗೆ ರಾಜಾ 'ಮಾವು'. ಅದೇ ಮಾವಿನ ಹಣ್ಣುಗಳ ರಾಜಾ ಎಂದು ಹೆಸರಾಗಿರುವ ಆಪೂಸ್, ಕಲ್ಮಿ, ಬದಾಮಿ (ಅಲಾನ್ಸೋ), ಮಲ್ಯೂಬಾತಳಿಯ ಮಾವಿನ ಹಣ್ಣುಗಳು ಹೆಚ್ಚಾಗಿ ಆವಕ ಆಗುತ್ತಿವೆ. ಕಳೆದೊಂದು ವಾರದಿಂದ ನಗರದ ಮಾರುಕಟ್ಟೆಗೆ ಬರುತ್ತಿವೆ. ಹೆಚ್ಚಿನ ಪ್ರಮಾಣದಲ್ಲಿ ಈ ಭಾಗದ ಮಾರುಕಟ್ಟೆಗಳಿಗೆ ಆವಕ ಆಗುತ್ತಿವೆ.

ವ್ಯಾಪಕ ಮಳೆ ನಡುವೆ ಮಾವುಗಳ ಬೆಲೆ ಏರಿಕೆ ಗ್ರಾಹಕರಿಗೆ ಕತ್ತರಿ ಬಿದ್ದಿದೆ. ಆಪೂಸ್, ಕಲ್ಮಿ, ಬದಾಮಿ (ಅಲಾನ್ಸೋ) ಆವಕವಾದರೆ, ಈಗಾಗಲೇ ಗೋದಾಮಿನಲ್ಲಿ ರಸಪೂರಿ ಹಣ್ಣುಗಳನ್ನು ದಾಸ್ತಾನು ಮಾಡಲಾಗಿದೆ. ಬೆಲೆ ಗಗನಕ್ಕೇರಿದ್ದ ಕಾರಣ ಜನರು ಖರೀದಿಗೆ ಹಿಂದೇಟು ಹಾಕುತ್ತಿಲ್ಲ.

ಹುಬ್ಬಳ್ಳಿಯ ಜನತಾ ಬಜಾರ್ ನಲ್ಲಿ ವ್ಯಾಪಾರಿಗಳು ಮಾವಿನ ಹಣ್ಣುಗಳನ್ನು ಮಾರಾಟಕ್ಕೆ ಇಟ್ಟಿದ್ದಾರೆ. ಈ ಭಾಗದಲ್ಲಿ ಬಹು ಬೇಡಿಕೆ ಇರುವ ಆಪೂಸ್ ತಳಿಯ ಮಾವಿಗೆ ಪ್ರತಿ ಕೆ.ಜಿಗೆ ಬೆಲೆ ರೂ. 600ರಿಂದ 700 ರವರೆಗೆ ಇದೆ. ಬೆಳಗಾವಿ ಪ್ರದೇಶದಲ್ಲಿ ಬೆಳೆಯುವ ಸಿಂಧೂರ ತಳಿಯ ಮಾವಿನ ಹಣ್ಣು ಸ್ಥಳೀಯವಾಗಿ ಮಾರುಕಟ್ಟೆಗೆ ಅವಕವಾಗುವ ಬದಾಮಿ ತಳಿಗೆ ಕೆ.ಜಿಗೆ 400ರಿಂದ 4 50 ವರೆಗೆ ಬೆಲೆ ನಿಗದಿ ಆಗಿದೆ.


ಉದಯವಾಹಿನಿ ಚಿತ್ರ

**ಬೆಲೆ ಏರಿಕೆ ಗ್ರಾಹಕರಿಗೆ ಕತ್ತರಿ**

ಗ್ರಾಹಕರು ಮಾರುಕಟ್ಟೆಗಳಲ್ಲಿ ಕೆಜಿ ಲೆಕ್ಕದಲ್ಲಿ ಬದಲಾಗಿ ಡಜನ್‌ಗೆ ಇಂತಿಷ್ಟು ಬೆಲೆ ನೀಡಿ ಖರೀದಿಸುತ್ತಾರೆ. ಒಂದು ಡಜನ್ ಆಪೂಸ್ ಮಾವಿನ ಹಣ್ಣಿಗೆ ಚಿಲ್ಲರೆ ವ್ಯಾಪಾರಿಗಳು 600ರಿಂದ 800 ದರ ಹೇಳುತ್ತಿದ್ದಾರೆ.

ಸಾಮಾನ್ಯವಾಗಿ ಏಪ್ರಿಲ್ ಆರಂಭದಲ್ಲಿ ಮಾವುಗಳು ಮಾರುಕಟ್ಟೆಗೆ ಆಮ ದಾಗುತ್ತಿದ್ದವು. ಆದರೆ ಈ ಭಾರಿ ಜೂನ್ ನಲ್ಲೂ ಆವಕವಾಗುತ್ತಿವೆ.

**ಮಾವು ಪ್ರಿಯರಿಗೆ ನಿರಾಶೆ**

ಮಾವಿನ ಸೀಜನ್ ಮುಗಿಯುತ್ತಾ ಬಂದರೂ ಸಹ ಬೆಲೆಯಲ್ಲಿ ಇಳಿಕೆ ಆಗದಿರುವುದು ಮಾವು ಪ್ರಿಯರಿಗೆ ನಿರಾಶೆ ಉಂಟು ಮಾಡಿದೆ. ಪ್ರತಿದಿನ ಸರಾಸರಿ 30ರಿಂದ 40 ಡಜನ್ ಹಣ್ಣುಗಳು ಮಾರಾಟವಾಗುತ್ತಿವೆ ಎಂದು ಬೀದಿ ಬದಿಯ ವ್ಯಾಪಾರಿಗಳು ಸದ್ಯದ ಸ್ಥಿತಿ ವ್ಯಾಪಾರದ ಬಗ್ಗೆ ತಿಳಿಸಿದರು. ಇತ್ತ ಗ್ರಾಹಕರು, ಮಾವಿನ ಸೀಸನ್ ಮುಗಿಯುತ್ತಾ ಬಂದರೂ ಸಹ ಬೆಳೆ ಇಳಿಕೆ ಆಗಿಲ್ಲ. ಇದರಿಂದ ಹೆಚ್ಚಿನ ಪ್ರಯಾಣದಲ್ಲಿ ಖರೀದಿಸಲು ಮನಸ್ಸಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

**ಮಳೆಯ ಕೊರತೆ, ನೀರಿನ ಅಭಾವದಿಂದ ಮಾವಿನ ಗಿಡಗಳಿಗೆ ಪ್ರಮುಖವಾಗಿ ತೇವಾಂಶದ ಕೊರತೆ ಕಾಡಿದೆ. ಹೀಗಾಗಿ 'ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಬಾರಿ ಮಾವಿನ ಹಣ್ಣುಗಳ ಗಾತ್ರ ಕಡಿಮೆ ಆಗಿದೆ. ಕಲ್ಮಿ, ಸಿಂಧೂರ, ಬದಾಮಿ, ಮಲ್ಲಿಕಾ, ತೋತಾಪುರಿ ತಳಿಯ ಮಾವಿನ ಹಣ್ಣುಗಳನ್ನು ತರಿಸಲಾಗುತ್ತಿದೆ. ಒಂದು ಡಜನ್ ಮಾವಿನ ಹಣ್ಣು ಕೆಜಿಗೆ 400 ರಿಂದ 450 ರವರೆಗೆ ಮಾರಾಟ ಮಾಡಲಾಗುತ್ತಿದೆ.**

2023ರಲ್ಲಿ ಮಳೆ ಕೈ ಕೊಟ್ಟಿದ್ದರಿಂದ ಕೊರತೆ ಉಂಟಾಗಿತ್ತು. ಇದರಿಂದ ತೋಟಗಾರಿಕೆ ಬೆಳೆಯಾದ ಮಾವಿಗೆ ಇಳುವರಿ ಕುಸಿಯಿತು. ಧಾರವಾಡ ಜಿಲ್ಲೆಯ ನವಲಗುಂದ, ಕುಂದಗೋಳ, ಕಲಘಟಗಿ, ಅಳ್ನಾವರ, ಅಣ್ಣಿಗೇರಿ ಸೇರಿದಂತೆ ವಿವಿಧ ಕಡೆಗಳಲ್ಲಿ ಮಾವಿನ ತೋಟಗಳಿವೆ. ಬದಾಮಿ (ಅಲಾತೀನ್ಸ್), ದಶೇರಿ. ತೋತಾಪುರಿ, ಮಲ್ಲಿಕಾ ತಳಿಯ ಮಾವು ಬೆಳೆಯಲಾಗಿದೆ.

# ಕಳ್ಳಸಾಗಣೆ ದಂಧೆಕೋರರ ವಿರುದ್ಧ ಮುಗಿಬಿದ್ದ ಕೆನಡಾ ಪೊಲೀಸರು

## ದಂಧೆಕೋರರ ಸಂಪರ್ಕ ಜಾಲ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿವಿಧ ದೇಶಗಳಲ್ಲಿ ಹರಡಿದೆ, ಅಮೆರಿಕ ದೇಶದೊಳಗೆ ನುಸುಳುವ ವಲಸಿಗರು



**ಅಮೆರಿಕ ಗಡಿಯಲ್ಲಿ ನುಸುಳಲು ಯತ್ನ**

**ಟೊರಾಂಟೋ:** ಕೆನಡಾ ದೇಶದ ಗಡಿಯಿಂದ ಅಮೆರಿಕ ದೇಶದ ಒಳಗೆ ನುಸುಳುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಮೆರಿಕ ಪೊಲೀಸರು ಹಾಗೂ ಕೆನಡಾ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ಕೈಗೊಂಡಿದ್ದು, ಕಳೆದ ಗುರುವಾರ ಮಾನವ ಕಳ್ಳಸಾಗಣೆ ದಂದೆಯ ಅತಿ ದೊಡ್ಡ ಸಂಪರ್ಕ ಜಾಲವನ್ನು ಬಯಲು ಮಾಡಿದ್ದಾರೆ.

ಈ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದ್ದು, ಇನ್ನೂ ನಾಲ್ವರ ವಿರುದ್ಧ ಕೆನಡಾ ಪೊಲೀಸರು ವಾರೆಂಟ್ ಜಾರಿ ಮಾಡಿದ್ದಾರೆ. ಕೆನಡಾದ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸರು ಅಮೆರಿಕ ಸರ್ಕಾರದ ತನಿಖಾ ಸಂಸ್ಥೆಗಳ ಜೊತೆಗೂಡಿ ಈ ಕಾರ್ಯಾಚರಣೆ ನಡೆಸಿ ಯಶಸ್ಸು ಸಾಧಿಸಿದ್ದಾರೆ.

ಈ ದಂಧೆಕೋರರ ಸಂಪರ್ಕ ಜಾಲ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿವಿಧ ದೇಶಗಳಲ್ಲಿ ಹರಡಿದೆ. ಭಾರತ ಸೇರಿದಂತೆ ಹಲವು ದೇಶಗಳಲ್ಲೂ ಈ ಸಂಪರ್ಕ ಜಾಲ ಹರಡಿರಬಹುದಾಗಿದೆ. ಈ ಸಂಪರ್ಕ ಜಾಲದ ಸದಸ್ಯರ ನೆರವಿನಿಂದ ವಿವಿಧ ದೇಶಗಳಿಂದ ವಲಸಿಗರು ಮೊದಲಿಗೆ ಕೆನಡಾ ದೇಶವನ್ನು ತಲುಪುತ್ತಾರೆ.

ಇದಕ್ಕಾಗಿ ಸಾವಿರಾರು ಡಾಲರ್ ಹಣ ವೆಚ್ಚ ಮಾಡುತ್ತಾರೆ. ಬಳಿಕ ಇವರನ್ನು ಅಮೆರಿಕ ಹಾಗೂ ಕೆನಡಾ ದೇಶಗಳ ನಡುವೆ ಇರುವ ಸೇಂಟ್ ಲಾರೆನ್ಸ್ ನದಿ ಬಳಿಗೆ ಕರೆದೊಯ್ಯಲಾಗುತ್ತದೆ.

ಕೆನಡಾದ ಒಂಟಾರಿಯೋದ ಕಾರ್ನ್‌ವೆಲ್ ತೀರದಿಂದ ಅಮೆರಿಕ ದೇಶದ ಗಡಿ ಒಳಗೆ ಈ ವಲಸಿಗರನ್ನು ಕಳ್ಳತನದಿಂದ ನುಸುಳುವಂತೆ ಮಾಡುತ್ತಾರೆ. ಒಮ್ಮೆ ಈ ವಲಸಿಗರು ಅಮೆರಿಕ ಗಡಿಯೊಳಗೆ ಕಾಲಿಟ್ಟ ಕೂಡಲೇ ಕಳ್ಳಸಾಗಣೆ ದಂಧೆಕೋರರ ಕಾರ್ಯಾಚರಣೆ ಮುಕ್ತಾಯ ಆಗಿಬಿಡುತ್ತದೆ. ಆ ನಂತರ ಈ ಅಕ್ರಮ ವಲಸಿಗರು ಅಮೆರಿಕದ ಒಳಗೆ ತಮ್ಮ ಬದುಕು ಕಟ್ಟಿಕೊಳ್ಳೋದು ಅವರ ಸಾಮರ್ಥ್ಯಕ್ಕೆ ಬಿಟ್ಟ ವಿಚಾರ.

ಈ ಕುರಿತಹಿತಿ ನೀಡಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಕೆನಡಾ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು, ಉತ್ತಮ ಭವಿಷ್ಯಕ್ಕಾಗಿ ವಿಶ್ವದೆಲ್ಲೆಡೆಯ ಜನರು ಉತ್ತರ ಅಮೆರಿಕ ಖಂಡಕ್ಕೆ ಬಂದು ಅಲ್ಲಿಂದ ಅಮೆರಿಕ ದೇಶದ ಒಳಗೆ ನುಸುಳಲು ಯತ್ನಿಸುತ್ತಾರೆ ಎಂದು ಮಾಹಿತಿ ನೀಡಿದ್ದಾರೆ. ಇವರ ಈ ಅನಿವಾರ್ಯತೆಗಳನ್ನು ಮನಗಂಡಿರುವ ದುಷ್ಟರು ತಮ್ಮದೇ ಆದ ಜಾಲ ಮಾಡಿಕೊಂಡಿದ್ದಾರೆ. ಅಮೆರಿಕ ದೇಶದ ಗಡಿಯೊಳಗೆ ವಲಸಿಗರು ನುಸುಳಲು ನೆರವಾಗಿ ಸಾವಿರಾರು ಡಾಲರ್ ಹಣವನ್ನು ಲೂಟಿ ಮಾಡುತ್ತಾರೆ.

### ಗಡಿ ನುಸುಳೋದು ಸುಲಭದ ವಿಚಾರ ಅಲ್ಲ!

**ಈಗಾಗಲೇ ಬಾಲಿವುಡ್‌ನಲ್ಲಿ ಡಂಕಿ ಅನ್ನೋ ಸಿನಿಮಾ ಭಾರೀ ಸದ್ದು ಮಾಡಿದೆ. ಈ ಸಿನಿಮಾದಲ್ಲಿ ಅಮೆರಿಕ ಗಡಿ ಒಳಗೆ ನುಸುಳುವ ಅಕ್ರಮ ವಲಸಿಗರ ಸಾಹಸ, ಚಿಂತಾಜನಕ ಪರಿಸ್ಥಿತಿ ಕುರಿತಾಗಿ ವಿವರಿಸಲಾಗಿದೆ. ಇದು ಅಕ್ಷರಶಃ ಸತ್ಯ. 2022ರ ಜುಲೈನಿಂದ 2023ರ ಜೂನ್‌ವರೆಗಿನ ಅಂಕಿ ಅಂಶಗಳನ್ನೇ ನೋಡೋದಾದರೆ ನೂರಾರು ವಲಸಿಗರು ಸುರಕ್ಷಿತವಾಗಿ ಅಮೆರಿಕ ದೇಶದೊಳಗೆ ಸೇರ್ಪಡೆಯಾಗಿದ್ದಾರೆ. ಆದರೆ, ಕೆಲವರು ಅತ್ಯಂತ ಸಂಕಷ್ಟಕರ ಸನ್ನಿವೇಶಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ. ವ್ಯತಿರಿಕ್ತ ಹವಾಮಾನ ಸೇರಿದಂತೆ ಹಲವು ಸಂಕಷ್ಟಕರ ಸನ್ನಿವೇಶಗಳನ್ನ ಇವರು ಎದುರಿಸಿದ್ದಾರೆ.**

**ಅಮೆರಿಕ ಅವಕಾಶಗಳ ನಾಡು.. ಅಲ್ಲಿಗೆ ಹೋದರೆ ನಮ್ಮ ಭವಿಷ್ಯ ಉತ್ತಮವಾಗಿ ರಬಹುದು, ನಮ್ಮ ಮಕ್ಕಳ ಭವಿಷ್ಯ ಉಜ್ವಲ ಆಗಬಹುದು.. ಇಂಥಾದ್ದೊಂದು ನಿರೀಕ್ಷೆ ಹೊತ್ತ ಲಕ್ಷಾಂತರ ಮಂದಿ ಪ್ರತಿ ವರ್ಷ ಅಮೆರಿಕ ಗಡಿಯೊಳಗೆ ನುಸುಳಲು ಯತ್ನಿಸುತ್ತಾರೆ. ಇವರಲ್ಲಿ ಭಾರತೀಯರೂ ಸೇರಿದ್ದಾರೆ ಹೀಗೆ ವಿಶ್ವದೆಲ್ಲೆಡೆಯ ಜನರನ್ನು ಕೆನಡಾಗೆ ಕರೆ ತಂದು ಅಲ್ಲಿಂದ ಅಮೆರಿಕ ದೇಶದ ಗಡಿಯೊಳಗೆ ನುಸುಳುವಂತೆ ಮಾಡುವ ದಂಧೆಕೋರರನ್ನು ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ.**

# ಚೀನಾ ಪ್ರತಿಭಟಿಸುತ್ತಿರುವುದು ಸರಿಯಲ್ಲ: ಅಮೆರಿಕ

**ವಾಷಿಂಗ್ಟನ್:** ಪ್ರಧಾನಿ ನರೇಂದ್ರ ಮೋದಿ ಮತ್ತು ತೈವಾನ್ ಅಧ್ಯಕ್ಷ ಲಾಯ್ ಚಿಂಗ್-ಟೆ ನಡುವಿನ ಶುಭಾಶಯ ವಿನಿಮಯದ ಬಗ್ಗೆ ಚೀನಾದ ಪ್ರತಿಭಟನೆಗೆ ಪ್ರತಿಕ್ರಿಯಿಸಿರುವ ಅಮೆರಿಕ ಇಬ್ಬರು ವಿದೇಶಿ ನಾಯಕರ ನಡುವಿನ ಇಂತಹ ಅಭಿನಂದನಾ ಸಂದೇಶಗಳು ರಾಜತಾಂತ್ರಿಕ ವ್ಯವಹಾರದ ಒಂದು ಭಾಗವಾಗಿದೆ ಎಂದು ಹೇಳಿದೆ.

ಇಂತಹ ಅಭಿನಂದನಾ ಸಂದೇಶಗಳು ರಾಜತಾಂತ್ರಿಕ ವ್ಯವಹಾರದ ಸಾಮಾನ್ಯ ಕೋರ್ಸ್ ಎಂದು ನಾನು ಹೇಳುತ್ತೇನೆ ಎಂದು ವಿದೇಶಾಂಗ ಇಲಾಖೆಯ ವಕ್ತಾರ ಮ್ಯಾಥ್ಯೂ ಮಿಲ್ಲರ್ ತಮ್ಮ ದೈನಂದಿನ ಸುದ್ದಿಗೋಷ್ಠಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಇದೀಗ ಮುಕ್ತಾಯಗೊಂಡ ಲೋಕಸಭೆ ಚುನಾವಣೆಯಲ್ಲಿ ಜಯಗಳಿಸಿದ ನಂತರ ತೈವಾನ್‌ನೊಂದಿಗೆ ನಿಕಟ ಸಂಬಂಧವನ್ನು ಹೊಂದಲು ಎದುರು



ನೋಡುತ್ತಿದ್ದೇನೆ ಎಂಬ ಮೋದಿಯವರ ಹೇಳಿಕೆಗೆ ಚೀನಾ ಪ್ರತಿಭಟಿಸುತ್ತಿದೆ ಎಂಬ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ತೈವಾನ್ ಅಧ್ಯಕ್ಷ ಲೈ ಚಿಂಗ್-ಟೆ ಅವರ ಚುನಾವಣಾ ಗೆಲುವಿನ ಅಭಿನಂದನಾ ಸಂದೇಶಕ್ಕೆ ಪ್ರತಿಕ್ರಿಯೆಯಾಗಿ ಮೋದಿಯವರು ತೈವಾನ್‌ನೊಂದಿಗಿನ ನಿಕಟ ಸಂಬಂಧ ಮುಂದುವರೆಸುವುದಾಗಿ ಹೇಳಿದ್ದರು. ನಿಮ ಬೆಚ್ಚಗಿನ ಸಂದೇಶಕ್ಕಾಗಿ ಧನ್ಯ ವಾದಗಳು. ನಾವು ಪರಸ್ಪರ ಲಾಭ ದಾಯಕ ಆರ್ಥಿಕ, ತಾಂತ್ರಿಕ ಪಾಲುದಾರಿಕೆಗಾಗಿ ಕೆಲಸ ಮಾಡುವಾಗ ನಾನು ನಿಕಟ ಸಂಬಂಧಗಳನ್ನು ಎದುರು ನೋಡುತ್ತಿದ್ದೇನೆ ಎಂದು ಮೋದಿ ಪ್ರತಿಕ್ರಿಯಿಸಿದ್ದರು. ತೈವಾನ್ ಅನ್ನು ಬಂಡುಕೋರ ಪ್ರಾಂತ್ಯವೆಂದು ಪರಿಗಣಿಸಲಾಗಿದೆ ಅದನ್ನು ಮತ್ತೆ ನಮ ತೆಕ್ಕೆಗೆ ತೆಗೆದುಕೊಳ್ಳುತ್ತೇವೆ

**ಕಳೆದ ತಿಂಗಳು ತೈವಾನ್‌ನ ಅಧ್ಯಕ್ಷರಾಗಿ ಆಯ್ಕೆಯಾದ ಲೈ ಅವರು ಎಕ್ಸ್‌ನಲ್ಲಿ ಪೋಸ್ಟ್ ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚುನಾವಣಾ ವಿಜಯಕ್ಕಾಗಿ ನನ್ನ ಪ್ರಾಮಾಣಿಕ ಅಭಿನಂದನೆಗಳು. ವೇಗವಾಗಿ ಬೆಳೆಯುತ್ತಿರುವ ತೈವಾನ್ -ಭಾರತದ ಪಾಲುದಾರಿಕೆಯನ್ನು ಹೆಚ್ಚಿಸಲು ನಾವು ಎದುರು ನೋಡುತ್ತಿದ್ದೇವೆ, ಇಂಡೋಪೆಸಿಫಿಕ್‌ನಲ್ಲಿ ಶಾಂತಿ, ಸಮೃದ್ಧಿಗೆ ಕೊಡುಗೆ ನೀಡಲು ವ್ಯಾಪಾರ, ತಂತ್ರಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲಿ ನಮ ಸಹಯೋಗವನ್ನು ವಿಸ್ತರಿಸುತ್ತೇವೆ ಎಂದಿದ್ದರು.**

ಇಂತಹ ಸಂದರ್ಭದಲ್ಲಿ ಭಾರತ ಮತ್ತು ತೈವಾನ್ ನಾಯಕರ ನಡುವಿನ ವಿನಿಮಯ ಸರಿಯಲ್ಲ ಎಂದು ಚೀನಾ ಆಕ್ರೋಶ ವ್ಯಕ್ತಪಡಿಸಿತ್ತು.

# ಅಸೆಂಬ್ಲಿಯಲ್ಲಿ ಪಂಜಾಬಿ ಭಾಷೆ ಮಾತನಾಡಲು ಅನುಮತಿ

**ಇಸ್ಲಾಮಾಬಾದ್:** ಪಾಕಿಸ್ತಾನದ ಪಂಜಾಬ್ ಅಸೆಂಬ್ಲಿಯಲ್ಲಿ ಶಾಸಕರು ಇಂಗ್ಲಿಷ್ ಮತ್ತು ಉರ್ದು ಹೊರತುಪಡಿಸಿ ಸದನದಲ್ಲಿ ಪಂಜಾಬಿ ಸೇರಿದಂತೆ ಕನಿಷ್ಠ ನಾಲ್ಕು ಸ್ಥಳೀಯ ಭಾಷೆಗಳಲ್ಲಿ ಮಾತನಾಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಸ್ಪೀಕರ್ ಮಲಿಕ್ ಮುಹಮದ್ ಖಾನ್ ನೇತತ್ವದ ಪಂಜಾಬ್ ಅಸೆಂಬ್ಲಿಯ ವಿಶೇಷ ಸಮಿತಿಯು ಇಂತಹ ತಿದ್ದುಪಡಿಗೆ ಅನುಮೋದನೆ ನೀಡಿದೆ.


ಶಾಸಕರು ಇಂಗ್ಲಿಷ್, ಉರ್ದು ಜೊತೆಗೆ ಪಂಜಾಬಿ, ಸರೈಕಿ, ಪೊಟೊಹರಿ ಮತ್ತು ಮೇವಾಟಿಯಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಲು ಅನುವು ಮಾಡಿಕೊಡುತ್ತದೆ ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ. ಈ ಹಿಂದೆ ಸದಸ್ಯರಿಗೆ ಇಂಗ್ಲಿಷ್, ಉರ್ದು ಹೊರತು ಪಡಿಸಿ ಯಾವುದೇ ಭಾಷೆಯನ್ನು ಬಳಸಲು ಸ್ಪೀಕರ್‌ನಿಂದ ಅನುಮತಿ ಅಗತ್ಯವಿತ್ತು, ಅದನ್ನು ಯಾವಾಗಲೂ ನೀಡಲಾಗುವುದಿಲ್ಲ. ಅಸೆಂಬ್ಲಿ ನಿಯಮಗಳಲ್ಲಿನ ತಿದ್ದುಪಡಿಯು ಈ ಭಾಷೆಗಳನ್ನು ಮಾತನಾಡುವ ಘಟಕಗಳಿಗೆ ಪ್ರವೇಶವನ್ನು ಹೆಚ್ಚಿಸುವ ಗುರಿಯನ್ನು



ಹೊಂದಿದೆ, ಹೆಚ್ಚು ಪ್ರಾತಿನಿಧಿಕ ಮತ್ತು ಸ್ಪಂದಿಸುವ ಶಾಸಕಾಂಗ ಸಂಸ್ಥೆಯನ್ನು ಪೋಷಿಸುತ್ತದೆ, ಆದರೆ ಬದಲಾವಣೆಯು ಪ್ರಾಂತ್ಯದ ಬಹುಭಾಷಾ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ, ಶಾಸಕರು ಪರಿಣಾಮಕಾರಿಯಾಗಿ ಸಂವಹನ ಮಾಡಲು ಮತ್ತು ಶಾಸಕಾಂಗ ಚರ್ಚೆಗಳಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತದೆ. ಅಧಿಕತ ಪ್ರಕ್ರಿಯೆಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಗುರುತಿಸುವುದು ಮತ್ತು ಸೇರಿಸುವುದು ಪಂಜಾಬ್‌ನ ಭಾಷಾ ಪರಂಪರೆಯ ಸಾಂಸ್ಕೃತಿಕ ಗೌರವ ಮತ್ತು ಅಂಗೀಕಾರವನ್ನು ಪ್ರದರ್ಶಿಸುತ್ತದೆ, ಇದರಿಂದಾಗಿ ವಿಧಾನಸಭೆ ಮತ್ತು ಜನರ ನಡುವಿನ ಸಂಪರ್ಕವನ್ನು ಬಲಪಡಿಸುತ್ತದೆ ಎಂದು ಸ್ಪೀಕರ್ ಹೇಳಿದರು.

# ಸ್ವತಂತ್ರ ಅಭ್ಯರ್ಥಿ ಸೇರ್ಪಡೆ; ಸೆಂಚುರಿ ಬಾರಿಸಿದ ಕೈ

**ನವದೆಹಲಿ:** ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೆಂಚುರಿ ಭಾರಿಸಿದೆ. ಚುನಾವಣಾ ಫಲಿತಾಂಶದಲ್ಲಿ 99 ಸ್ಥಾನ ಪಡೆದಿದ್ದ ಕಾಂಗ್ರೆಸ್ ಪಕ್ಷಕ್ಕೆ ಸ್ವತಂತ್ರ ಅಭ್ಯರ್ಥಿಯೊಬ್ಬರು ಸೇರ್ಪಡೆಯಾಗುವ ಮೂಲಕ ಶತಕ ಬಾರಿಸುವಲ್ಲಿ ಕೈ ಪಕ್ಷ ಯಶಸ್ವಿಯಾಗಿದೆ. ಮಹಾರಾಷ್ಟ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದಿರುವ ಕಾಂಗ್ರೆಸ್ ಬಂಡಾಯಗಾರ ವಿಶಾಲ್ ಪಾಟೀಲ್ ಮಾತೃ ಪಕ್ಷಕ್ಕೆ ಮರಳುವುದಾಗಿ ಘೋಷಿಸಿದ್ದಾರೆ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ವಸಂತದಾದಾ ಪಾಟೀಲ್ ಅವರ ಮೊಮಗ ವಿಶಾಲ್ ಪಾಟೀಲ್ ಅವರು ಸಾಂಗ್ಲಿ ಕ್ಷೇತ್ರದಿಂದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಸಂಜಯ್ ಪಾಟೀಲ್ ಅವರನ್ನು ಸೋಲಿಸಿದರು. ಮಹಾರಾಷ್ಟ್ರ ವಿಕಾಸ್ ಅಘಾಡಿ (ಎಂವಿಎ) ಪಾಲುದಾರರ ನಡುವೆ ಸೀಟು ಹಂಚಿಕೆ ವ್ಯವಸ್ಥೆಯಲ್ಲಿ ಸಾಂಗ್ಲಿ ಸಂಸದೀಯ ಸ್ಥಾನವನ್ನು ಶಿವ ಸೇನೆ-ಯುಬಿಟಿಗೆ ನಿಯೋಜಿಸಿದ ನಂತರ ಅವರು ಬಂಡಾಯವೆದ್ದು ಸ್ವತಂತ್ರವಾಗಿ ಸ್ಪರ್ಧಿಸಿದ್ದರು.ಎಕ್ಸ್ ನಲ್ಲಿ ಪೋಸ್ಟ್ ಮಾಡಿದ ಎಐಸಿಸಿ ಅಧ್ಯಕ್ಷ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ, ಸಾಂಗ್ಲಿಯಿಂದ ಚುನಾಯಿತ ಸಂಸದ ವಿಶಾಲ್



ಪಾಟೀಲ್ ಕಾಂಗ್ರೆಸ್ ಪಕ್ಷಕ್ಕೆ ಮರಳಿರುವುದನ್ನು ಸ್ವಾಗತಿಸುತ್ತೇನೆ ಎಂದಿದ್ದಾರೆ.

ಉದ್ಧವ್ ಠಾಕ್ರೆ ಸೇನಾ ಬಣದ ಸೀಟು ಒಪ್ಪಂದಕ್ಕೆ ಮುಂಚೆಯೇ ತನ್ನದೇ ಅಭ್ಯರ್ಥಿಯನ್ನು ಘೋಷಿಸಿದ ಕ್ರಮವು ಮಹಾರಾಷ್ಟ್ರ ವಿರೋಧ ಪಕ್ಷದ ಮೈತ್ರಿಯಲ್ಲಿ ಸ್ವಲ್ಪ ಘರ್ಷಣೆಯನ್ನು ಉಂಟುಮಾಡಿತ್ತು. ತನ್ನ ನಿರ್ಧಾರವನ್ನು ಮರುಪರಿಶೀಲಿಸುವಂತೆ ಕಾಂಗ್ರೆಸ್ ಪದೇ ಪದೇ ಶಿವಸೇನೆಗೆ ಮನವಿ ಮಾಡಿತ್ತು.

ವಿಶಾಲ್ ಪಾಟೀಲ್, ವಿಶ್ವಜಿತ್ ಕದಂ ನಿನ್ನೆ ಖರ್ಗೆ ಮತ್ತು ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಭೇಟಿಯಾದರು, ಸ್ವತಂತ್ರ ಸಂಸದರು ಪಕ್ಷಕ್ಕೆ ತಮ ಬೆಂಬಲ ಪತ್ರವನ್ನು ನೀಡಿದರು.

# ಷೇರು ಮಾರುಕಟ್ಟೆ ಹಗರಣ ಕುರಿತ ರಾಹುಲ್ ಟೀಕೆಗೆ ಬಿಜೆಪಿ ತಿರುಗೇಟು

**ನವದೆಹಲಿ:** ಷೇರು ಮಾರುಕಟ್ಟೆ ಹಗರಣ ಕುರಿತಂತೆ ರಾಹುಲ್‌ಗಾಂಧಿ ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿರುವ ಬಿಜೆಪಿ ತಮ್ಮ ಸೋಲು ಅರಗಿಸಿಕೊಳ್ಳಲು ಸಾಧ್ಯವಾಗದೆ ಕಾಂಗ್ರೆಸ್ ಇಂತಹ ಆರೋಪ ಮಾಡುತ್ತಿದೆ ಎಂದಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರು, ಮೋದಿ ಆಡಳಿತದ ಕಳೆದ 10 ವರ್ಷದಲ್ಲಿ ಭಾರತೀಯ ಷೇರು ಮಾರುಕಟ್ಟೆ ಬಂಡವಾಳ 5 ಟ್ರಿಲಿಯನ್ ದಾಟಿರುವುದನ್ನು ಉಲ್ಲೇಖಿಸಿ ಈ ತಿರುಗೇಟು ನೀಡಿದ್ದಾರೆ.

ನಕಲಿ ಎಕ್ಸಿಟ್ ಪೋಲ್‌ಗಳಿಂದ ಚಿಲ್ಲರೆ ಹೂಡಿಕೆದಾರರಿಗೆ ಲಕ್ಷ ಕೋಟಿಗಳಷ್ಟು ನಷ್ಟವಾಗಿದೆ ಎಂದು ಆರೋಪಿಸಿದ್ದ ರಾಹುಲ್ ಗಾಂಧಿ, ಅತಿದೊಡ್ಡ ಷೇರು ಮಾರುಕಟ್ಟೆ ಹಗರಣದ ಕುರಿತು ಜಂಟಿ ಸಂಸದೀಯ ಸಮಿತಿ ತನಿಖೆಗೆ ಆಗ್ರಹಿಸಿದ್ದರು.

ರಾಹುಲ್ ಗಾಂಧಿ ಅವರು ಲೋಕಸಭೆ ಚುನಾವಣೆಯಲ್ಲಿನ ಸೋಲನ್ನು ಇನ್ನೂ ನೀಗಿಸಿಕೊಂಡಿಲ್ಲ. ಈಗ ಅವರು ಮಾರುಕಟ್ಟೆ ಹೂಡಿಕೆದಾರರನ್ನು ದಾರಿ ತಪ್ಪಿಸುವ ಪಿತೂರಿ ಮಾಡುತ್ತಿದ್ದಾರೆ. ಇಂದು



ಭಾರತ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ ಎಂದು ಅವರು ಹೇಳಿದರು. ಯಾವುದೇ ಚುನಾವಣೆಯ ಸಮಯದಲ್ಲಿ ಈಕ್ವಿಟಿ ಮಾರುಕಟ್ಟೆಗಳು ವಿವಿಧ ಅಂದಾಜುಗಳು, ಭವಿಷ್ಯವಾಣಿಗಳಿಗೆ ಪ್ರತಿಕ್ರಿಯಿಸುತ್ತವೆ, ಬ್ಯಾಂಕ್‌ಗಳು ಮತ್ತು ಸಂಸ್ಥೆಗಳ ಯಾವುದೇ ಮುನ್ಸೂಚನೆಗಳಿಗೆ ಪ್ರತಿಕ್ರಿಯಿಸುತ್ತವೆ ಎಂದು ನಮಗೆಲ್ಲರಿಗೂ ತಿಳಿದಿದೆ.

ಈವೆಂಟ್ ಅಲ್ಲದ ಸಮಯದಲ್ಲಿಯೂ ಏರಿಳಿತಗಳು ಸಹಜ ಎಂದು ಅವರು ಹೇಳಿದರು. ಈ ವರ್ಷದ ಮೇ ತಿಂಗಳಲ್ಲಿ, ಬಿಎಸ್‌ಇ ಮತ್ತು ಎನ್‌ಎಸ್‌ಇ-ಲಿಸ್ಟೆಡ್ ಕಂಪನಿಗಳ ಮಾರುಕಟ್ಟೆ ಕ್ಯಾಪ್ 5 ಟ್ರಿಲಿಯನ್‌ಗೆ ತಲುಪಿದೆ. ಮಾರುಕಟ್ಟೆ ಬಂಡವಾಳೀಕರಣ ಅಥವಾ ಮಾರುಕಟ್ಟೆ ಕ್ಯಾಪ್ ಎನ್ನುವುದು ಕಂಪನಿಯ ಷೇರುಗಳ ಒಟ್ಟು ಮೌಲ್ಯವಾಗಿದೆ,

**ಭಾರತವನ್ನು ಉತ್ತಮವಾಗಿ ನಿಯಂತ್ರಿತ ಮಾರುಕಟ್ಟೆ ಎಂದು ಪರಿಗಣಿಸಲಾಗಿದೆ, ವಿಶ್ವಾದ್ಯಂತ ಹಲವಾರು ಮೆಚ್ಚುಗೆಯನ್ನು ಪಡೆದಿದೆ ಎಂದು ಗೋಯಲ್ ವಿವರಿಸಿದರು. ಕಾಂಗ್ರೆಸ್ ನೇತತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ ಆಡಳಿತದ ಅವಧಿಯಲ್ಲಿ ಭಾರತವನ್ನು ದುರ್ಬಲವಾದ 5 ಎಂದು ಉಲ್ಲೇಖಿಸಲಾಗಿದೆ, ದೇಶವು ಈಗ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ ಎಂದರು.**

ಸ್ಟಾಕ್ ಬೆಲೆಯನ್ನು ಅದರ ಬಾಕಿ ಉಳಿದಿರುವ ಷೇರುಗಳ ಸಂಖ್ಯೆಯಿಂದ ಗುಣಿಸುವ ಮೂಲಕ ಪಡೆಯಲಾಗುತ್ತದೆ.


ಭಾರತೀಯ ಷೇರು ಮಾರುಕಟ್ಟೆಯು ಜಾಗತಿಕವಾಗಿ ಅಗ್ರ ಐದು ಷೇರು ಮಾರುಕಟ್ಟೆಗಳ ಲೀಗ್‌ಗೆ ಪ್ರವೇಶಿಸಿದೆ, ಕಳೆದ ವರ್ಷಗಳಲ್ಲಿ ಪಿಎಸ್‌ಯು ಕಂಪನಿಗಳ ಎಂ-ಕ್ಯಾಪ್ ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಗೋಯಲ್ ಹೇಳಿದರು.

# ಸಂಸತ್ ಆವರಣದಿಂದ ಮಹಾನ್ ನಾಯಕರ ಪ್ರತಿಮೆ ತೆಗೆಸಿ ಅವಮಾನ

**ಮುಂಬೈ:** ಸಂಸತ್ ಭವನದ ಆವರಣದಿಂದ ಛತ್ರಪತಿ ಶಿವಾಜಿ ಮಹಾರಾಜ್, ಡಾ ಬಿ ಆರ್ ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿಯವರ ಪ್ರತಿಮೆಗಳನ್ನು ತೆಗೆಸುವ ಮೂಲಕ ಕೇಂದ್ರ ಸರ್ಕಾರವೂ ದೇಶದ ನಾಗರಿಕರನ್ನು ಅವಮಾನಿಸಿದೆ ಎಂದು ಹೊಸದಾಗಿ ಆಯ್ಕೆಯಾದ ಬಾರಾಮತಿ ಸಂಸದೆ ಸುಪ್ರಿಯಾ ಸುಳೆ ಆರೋಪಿಸಿದ್ದಾರೆ.

ರಾಷ್ಟ್ರೀಯ ವ್ಯಕ್ತಿಗಳ ಪ್ರತಿಮೆಗಳು ವಿವಿಧ ಸ್ಥಳಗಳಲ್ಲಿ ಇರುವುದರಿಂದ ಸಂದರ್ಶಕರು ಈ ಪ್ರತಿಮೆಗಳನ್ನು ಅನುಕೂಲಕರವಾಗಿ ನೋಡಲು ಸಾಧ್ಯವಾಗದ ಕಾರಣ ಸಂಸತ್ ಭವನದ ಆವರಣದಲ್ಲಿರುವ ಭವ್ಯವಾದ ಪ್ರೇರಣಾ ಸ್ಥಳದಲ್ಲಿ ಗೌರವಯುತವಾಗಿ ಪ್ರತಿಷ್ಠಾಪಿಸಲಾಗಿದೆ ಎಂದು ಲೋಕಸಭೆಯ ಸಚಿವಾಲಯ ಈ ಹಿಂದೆ ತಿಳಿಸಿತ್ತು.

ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಸುಳೆ ಅವರು, ಛತ್ರಪತಿ ಶಿವಾಜಿ ಮಹಾರಾಜ್, ಭಾರತ



ರತ್ನ ಡಾ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ರಾಷ್ಟ್ರಪಿತ ಮಹಾತ ಗಾಂಧಿಯವರ ಭವ್ಯವಾದ ಪ್ರತಿಮೆಗಳನ್ನು ಸಂಸದ್ ಭವನದ ಆವರಣದಿಂದ ತೆಗೆದುಹಾಕಲಾಗಿದೆ ಈ ಕತ್ಯವು ತುಂಬಾ ಕೆರಳಿಸುತ್ತದೆ. ಭಾರತದ ಜನರು ಪ್ರತಿಮೆಗಳನ್ನು ಸ್ಥಾಪಿಸಿದ್ದಾರೆ.

ಈ ರಾಷ್ಟ್ರೀಯ ಐಕಾನ್‌ಗಳ ಮೇಲಿನ ಪ್ರೀತಿಯಿಂದ ಪ್ರತಿಮೆಗಳನ್ನು ತೆಗೆದುಹಾಕುವ ಮೂಲಕ ಸರ್ಕಾರವು ಭಾರತದ ಜನರನ್ನು ಅವಮಾನಿಸಿದೆ ಎಂದಿದ್ದಾರೆ. ಜೂನ್ 6 ರಂದು ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ವಾರ್ಷಿಕೋತ್ಸವದಂದು ಬೆಳಕಿಗೆ ಬಂದ ಘಟನೆಗಿಂತ ದುರದಷ್ಟಕರ ಬೇರೇನೂ ಇಲ್ಲ ಎಂದು ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮಹಾರಾಷ್ಟ್ರದ ಮತದಾರರು ಬಿಜೆಪಿಗೆ ಮತ ಹಾಕದಿದ್ದಾಗ, ಛತ್ರಪತಿ ಶಿವಾಜಿ ಮತ್ತು ಡಾ. ಅಂಬೇಡ್ಕರ್ ಅವರ ಪ್ರತಿಮೆಗಳನ್ನು ಸಂಸತ್ತಿನ ಮೂಲ ಸ್ಥಳದಿಂದ ತೆಗೆದುಹಾಕಲಾಯಿತು ಮತ್ತು ಗುಜರಾತ್‌ನಲ್ಲಿ ತನಗೆ ಕ್ಲೀನ್ ಸ್ವೀಪ್ ಆಗದಿದ್ದಾಗ ಮಹಾತ ಗಾಂಧಿಯವರ ಪ್ರತಿಮೆಯನ್ನು ತೆಗೆದುಹಾಕಲಾಗಿತ್ತು ಎಂದಿದ್ದಾರೆ.

**ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ ರಾಜಾ ಈ ಕ್ರಮವನ್ನು ಸ್ವಾತಂತ್ರ್ಯ, ಸ್ವಾತಂತ್ರ್ಯ ಮತ್ತು ಸಮಾನತೆಯ ಆದರ್ಶಗಳ ಅವಹೇಳನ ಎಂದು ಕರೆದರೆ, ತಣಮೂಲ ಕಾಂಗ್ರೆಸ್ ಸಂಸದ ಜವಾಹರ್ ಸಿರ್ಕಾರ್ ಇದನ್ನು ಏಕೆ ಮಾಡಲಾಗಿದೆ ಎಂದು ಪ್ರಶ್ನಿಸಿದ್ದಾರೆ.**

# 3ನೇ ಬಾರಿಗೆ ಪ್ರಧಾನಿಯಾಗಿ ಮೋದಿ ಪ್ರಮಾಣ ನಾಳೆ

**ನವದೆಹಲಿ:** ನರೇಂದ್ರ ಮೋದಿ ಅವರು ಭಾನುವಾರ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಬಿಜೆಪಿಯ ಹಿರಿಯ ನಾಯಕ ಪ್ರಹ್ಲಾದ್ ಜೋಶಿ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ತಿಳಿಸಿದ್ದಾರೆ. ಜೂನ್ 9 ರಂದು ಸಂಜೆ 6 ಗಂಟೆಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ಮೋದಿ ಅವರನ್ನು ತಮ ನಾಯಕನನ್ನಾಗಿ ಆಯ್ಕೆ ಮಾಡಲು ಹಳೆಯ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಸಮಾವೇಶಗೊಂಡ ಎನ್‌ಡಿಎ ನಾಯಕರಿಗೆ ಜೋಶಿ ಹೇಳಿದರು.



ಎನ್‌ಡಿಎ ಸಂಸದರಲ್ಲದೆ, ಮುಖ್ಯಮಂತ್ರಿಗಳು ಸೇರಿದಂತೆ ಮೈತ್ರಿಕೂಟದ ಹಿರಿಯ ನಾಯಕರು ಸಭೆಗೆ ಹಾಜರಾಗಿದ್ದರು, ಅಲ್ಲಿ ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಅವರು ಮೋದಿ ನಾಯಕತ್ವವನ್ನು ಬೆಂಬಲಿಸುವ ನಿರ್ಣಯವನ್ನು ಪ್ರಸ್ತಾಪಿಸುವ ನಿರೀಕ್ಷೆಯಿದೆ, ಮಿತ್ರಪಕ್ಷಗಳು ಮತ್ತು ಸಂಸದರು ಅದನ್ನು ಅನುಮೋದಿಸುವ ಸಾಧ್ಯತೆಯಿದೆ. ಮೋದಿ ಅವರು ಎನ್‌ಡಿಎ ಸಂಸದರ ನಾಯಕರಾಗಿ ಆಯ್ಕೆಯಾದ ನಂತರ, ಮೈತ್ರಿಕೂಟದ ಹಿರಿಯ ಸದಸ್ಯರಾದ ಟಿಡಿಪಿಯ ಎನ್ ಚಂದ್ರಬಾಬು ನಾಯ್ಡು, ಜೆಡಿಯುನ ನಿತೀಶ್ ಕುಮಾರ್ ಮತ್ತು ಶಿವಸೇನೆಯ ಏಕನಾಥ್ ಶಿಂಧೆ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲು ಪ್ರಧಾನಿಯನ್ನು ಸೇರಲಿದ್ದಾರೆ. ಅವರನ್ನು ಬೆಂಬಲಿಸುವ ಸಂಸದರ ಪಟ್ಟಿ ನೀಡಲಿದ್ದಾರೆ ಎಂದರು. ನಾಯ್ಡು, ಕುಮಾರ್ ಮತ್ತು ಶಿಂಧೆ ಅವರಲ್ಲದೆ, ಚಿರಾಗ್ ಪಾಸ್ವಾನ್, ಜಿತನ್ ರಾಮ್ ಮಾಂಝಿ, ಅನುಪ್ರಿಯಾ ಪಟೇಲ್, ಪವನ್ ಕಲ್ಯಾಣ್ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರೊಂದಿಗೆ ಮುಖ್ಯ ವೇದಿಕೆಯಲ್ಲಿ ಎನ್‌ಡಿಎ ನಾಯಕರು ಉಪಸ್ಥಿತರಿರಲಿದ್ದಾರೆ. ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ನಡ್ಡಾ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಹೊಸ ಸರ್ಕಾರದಲ್ಲಿ ತಮ್ಮ ಪ್ರಾತಿನಿಧ್ಯದ ಪಾಲಿಗೆ ಸೌಹಾರ್ದಯುತ ಸೂತ್ರವನ್ನು ರೂಪಿಸಲು ಮಿತ್ರಪಕ್ಷಗಳೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾರೆ. ತೀರ್ಪಿನ ನಂತರ ಯಾವುದೇ ಅನಿಶ್ಚಿತತೆಯ ಭಾವನೆಯನ್ನು ಕೊನೆಗೊಳಿಸಲು ಬಿಜೆಪಿ ನಾಯಕತ್ವವು ಜೂನ್ 4 ರ ಫಲಿತಾಂಶಗಳ ನಂತರ ಸರ್ಕಾರ ರಚನೆಗೆ ವೇಗವಾಗಿ ಚಲಿಸಿದೆ, ಇದು 2014 ರಿಂದ ಮೊದಲ ಬಾರಿಗೆ ಬಹುಮತವನ್ನು ಕಳೆದು ಕೊಂಡಿದ್ದರಿಂದ ಆಡಳಿತ ಪಕ್ಷಕ್ಕೆ ಹಿನ್ನಡೆಯಾಗಿದೆ ಮತ್ತು ಅದನ್ನು ಉಳಿಸಿಕೊಳ್ಳಲು ಮಿತ್ರಪಕ್ಷಗಳ ಬೆಂಬಲದ ಅಗತ್ಯವಿದೆ.

# ನಮ್ಮ ಜೆಡಿಎಸ್‌ನಿಂದ ಮೋದಿಯವರ ನಾಯಕತ್ವಕ್ಕೆ ಬೆಂಬಲ

## ನಿತೀಶ್, ನಾಯ್ಡು, ಪವನ್, ಎಚ್‌ಡಿಕೆ, ಎನ್‌ಡಿಎ ಮೈತ್ರಿಕೂಟದ ನಾಯಕರು ನರೇಂದ್ರ ಮೋದಿ ನಾಯಕತ್ವದ ಬಗ್ಗೆ ಏನಂದ್ರು?

**ಹೊಸದಿಲ್ಲಿ:** ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಎನ್‌ಡಿಎ ಮೈತ್ರಿಕೂಟವು ತಮ್ಮ ಸಂಸದದೀಯ ನಾಯಕನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಹೊಸ ಸಂಸತ್ ಭವನದಲ್ಲಿ ಸಭೆ ನಡೆಸಿತು. ಸಭೆಯಲ್ಲಿ ಎನ್‌ಡಿಎ ಕೂಟದಲ್ಲಿರುವ ಎಲ್ಲಾ ಪಕ್ಷಗಳ ಮುಖಂಡರು ಭಾಗಿಯಾಗಿ ತಮ್ಮ ಬೆಂಬಲವನ್ನು ನರೇಂದ್ರ ಮೋದಿಗೆ ಸಲ್ಲಿಸಿದರು.

ಈ ವೇಳೆ ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು, ಬಿಹಾರ ಮುಖ್ಯಮಂತ್ರಿ, ಜೆಡಿಯು ನಾಯಕ ನಿತಿಶ್ ಕುಮಾರ್, ಜೆಪಿ ನಡ್ಡಾ, ಎಚ್‌ಡಿ ಕುಮಾರಸ್ವಾಮಿ ಸೇರಿದಂತೆ ಹಲವು ನಾಯಕರು ಮೋದಿ ಹಾಗೂ ಅವರ ಕಳೆದ 10 ವರ್ಷಗಳ ಆಡಳಿತವನ್ನು ಹೊಗಳಿದರು.

**ಬಿಹಾರ ಸಿಎಂ ನಿತೀಶ್ ಕುಮಾರ್ ಏನಂದ್ರು:** ಎನ್‌ಡಿಎ ಸಭೆಯಲ್ಲಿ ಮಾತನಾಡಿದ ಬಿಹಾರ ಸಿಎಂ ನಿತೀಶ್ ಕುಮಾರ್, ಮೋದಿಯವರ ಅಧಿಕಾರಾವಧಿಯಲ್ಲಿ ನಾವು ಹಾಗೂ ನಮ್ಮ ಪಕ್ಷವು ಪ್ರತಿದಿನ ಎನ್‌ಡಿಎ ಮೈತ್ರಿ ಕೂಟದ ಜತೆ ನಿಲ್ಲುತ್ತದೆ. ಅವರ ಎಲ್ಲಾ ನಿರ್ಧಾರಗಳಲ್ಲಿ ನಾವೆಲ್ಲರೂ ಅವರೊಂದಿಗೆ ನಿಲ್ಲುತ್ತೇವೆ. ವಿರೋಧ ಪಕ್ಷಗಳು ದೇಶಕ್ಕಾಗಿ ಯಾವುದೇ



ಕೆಲಸ ಮಾಡಿಲ್ಲ, ನಾನು ಯಾವಾಗಲೂ ಪ್ರಧಾನಿ ಮೋದಿಯವರೊಂದಿಗೆ ಇರುತ್ತೇನೆ. ಬಿಹಾರದ ಎಲ್ಲಾ ಬಾಕಿ ಕೆಲಸಗಳನ್ನು ಕೈಗೊಳ್ಳಲಾಗುವುದು. ನಿಮ್ಮ (ಮೋದಿ) ನಾಯಕತ್ವದಲ್ಲಿ ನಾವೆಲ್ಲರೂ ಒಗ್ಗೂಡಿರುವುದು ಒಳ್ಳೆಯ ವಿಷಯವಾದ್ದು, ಮುಂದೆಯೂ ನಾವೆಲ್ಲರೂ ನಿಮ್ಮೊಂದಿಗೆ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಭರವಸೆಯ ಮಾತುಗಳನ್ನಾಡಿದ್ದಾರೆ.

**ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಏನಂದ್ರು?:** ಟಿಡಿಪಿ ಮುಖ್ಯಸ್ಥ ನಾಯ್ಡು ಮಾತನಾಡಿ, ಇಂದು ಭಾರತವು ಸರಿಯಾದ ಸಮಯದಲ್ಲಿ ಸರಿಯಾದ ನಾಯಕನನ್ನು ಹೊಂದಿದೆ. ಅವರ ನಾಯಕತ್ವದಲ್ಲಿ ಭಾರತವು ಮುಂದಿನ 5 ವರ್ಷಗಳಲ್ಲಿ 1 ಅಥವಾ 2 ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂಬ ವಿಶ್ವಾಸ ನನಗಿದೆ. ಅವರ ಮುಂದಾಳತ್ವದಲ್ಲಿ ಅದ್ಭುತ ಬಹುಮತ ಗಳಿಸಿದ್ದಕ್ಕಾಗಿ ನಮ್ಮೆಲ್ಲರನ್ನು ಅಭಿನಂದಿಸುತ್ತಿದ್ದೇವೆ. ನಾನು ಚುನಾವಣಾ ಪ್ರಚಾರದ ಸಮಯದಲ್ಲಿ 3 ತಿಂಗಳ ಕಾಲ ಮೋದಿ ಅವರು ಯಾವುದೇ ವಿಶ್ರಾಂತಿ ತೆಗೆದುಕೊಳ್ಳಲಿಲ್ಲ. ಹಗಲು ರಾತ್ರಿ ಪ್ರಚಾರ ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ ನಾವು 3 ಸಾರ್ವಜನಿಕ ಸಭೆಗಳು ಮತ್ತು 1 ದೊಡ್ಡ ರ್ಯಾಲಿಯನ್ನು ನಡೆಸಿದ್ದೇವೆ. ಇವು ಅಲ್ಲಿನ ಚುನಾವಣೆ ಗೆಲ್ಲುವಲ್ಲಿ ಇದು ದೊಡ್ಡ ಬದಲಾವಣೆಯನ್ನು ಮಾಡಿದೆ. ನರೇಂದ್ರ ಮೋದಿ ಅವರಿಗೆ ದೂರದೃಷ್ಟಿ ಮತ್ತು ಉತ್ಸಾಹವಿದೆ. ತಮ್ಮ ಎಲ್ಲಾ ನೀತಿಗಳನ್ನು ಜನಪರವಾಗಿ ಕಾರ್ಯಗತಗೊಳಿಸುತ್ತಿದ್ದಾರೆ. ಭಾರತಕ್ಕೆ ಇದೊಂದು ಉತ್ತಮ ಅವಕಾಶವಾಗಿದೆ. ಇನ್ನು ನಾವು ಈಗ ಅವರ ನಾಯಕತ್ವ ತಪ್ಪಿಸಿಕೊಂಡರೆ, ಶಾಶ್ವತವಾಗಿ ಎಲ್ಲವನ್ನು ಕಳೆದುಕೊಳ್ಳುತ್ತೇವೆ ಎಂದಿದ್ದಾರೆ.

**ಚಿರಾಗ್ ಪಾಸ್ವಾನ್ ಏನಂದ್ರು?:** ಲೋಕ ಜನಶಕ್ತಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಚಿರಾಗ್ ಪಾಸ್ವಾನ್ ಮಾತನಾಡಿ ನನ್ನ ಪ್ರಧಾನಿ ನರೇಂದ್ರ ಮೋದಿ ಅವರನ್ನು ನಾನು ಅಭಿನಂದಿಸುತ್ತೇನೆ. ಎನ್‌ಡಿಎ ಇಷ್ಟೊಂದು ದೊಡ್ಡ ಗೆಲುವನ್ನು ಪಡೆಯುತ್ತಿರುವುದು ಸಾಮಾನ್ಯ ಸಂಗತಿಯಲ್ಲ ನಿಮ್ಮ ಶ್ರಮದಿಂದ ಎನ್‌ಡಿಎ ಈ ಬೃಹತ್ ವಿಜಯವನ್ನು ಸಾಧಿಸಿದೆ. ನಿಮ್ಮಿಂದಾಗಿ ಇಂದು ನಾವು ಜಗತ್ತಿನ ಮುಂದೆ ಸಾಧಿಸುತ್ತಿದ್ದೇವೆ. ಭಾರತವು ದೇಶದ ಐದನೇ ಅತಿದೊಡ್ಡ ಆರ್ಥಿಕತೆ ಹೊಂದಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಭಾರತದ ಜನರು ನಿಮ್ಮ ಮೇಲೆ ಸಂಪೂರ್ಣ ನಂಬಿಕೆ ಹೊಂದಿದ್ದಾರೆ ಎಂದರು.

**ಪವನ್ ಕಲ್ಯಾಣ್ ಏನಂದ್ರು?:** ಜನಸೇನಾ ಪಕ್ಷದ ಮುಖ್ಯಸ್ಥ ಪವನ್ ಕಲ್ಯಾಣ್ ಮಾತನಾಡಿ ವೇದಿಕೆ ಮೇಲೆಯೇ ಮೋದಿ ಕೈ ಎತ್ತಿ ಮುಗಿದರು. ಮೋದಿಜೀ ನೀವು ನಿಜವಾಗಿಯೂ ನಮ್ಮ ದೇಶಕ್ಕೆ ಸ್ಫೂರ್ತಿ ನೀಡುತ್ತೀರಿ. ನೀವು ಪ್ರಧಾನಿಯಾಗಿ ಇರುವವರೆಗೆ ನಮ್ಮ ಭಾರತ ದೇಶವು ಯಾರಿಗೂ ತಲೆಬಾಗುವುದಿಲ್ಲ ಎಂದಿದ್ದಾರೆ.

**ಎನ್‌ಡಿಎ ನಾಯಕನ ಆಯ್ಕೆ ಕುರಿತು ದೆಹಲಿಯ ಹೊಸ ಸಂಸತ್ತಿನಲ್ಲಿ ಸಭೆಯಲ್ಲಿ ಮೈತ್ರಿಕೂಟದ ನಾಯಕರು ಮೋದಿಯನ್ನು ಹೊಗಳಿದ್ದಾರೆ.**

### ಎಚ್‌ಡಿಕೆ ಏನಂದ್ರು?

**ಎಚ್‌ಡಿ ಕುಮಾರಸ್ವಾಮಿ ಮಾತನಾಡಿ, ಕಳೆದ 10 ವರ್ಷಗಳಿಂದ ಮೋದಿ ದೇಶಕ್ಕೆ ನೀಡಿರುವ ಕೊಡುಗೆಯನ್ನು ನಾಯಕರು ವಿವರಿಸಿದ್ದಾರೆ. ನಮ್ಮ ಜೆಡಿಎಸ್‌ನಿಂದ ಮೋದಿಯವರ ನಾಯಕತ್ವಕ್ಕೆ ಬೆಂಬಲ ನೀಡುತ್ತೇವೆ ಎಂದರು.**

## ಮಿನಿ ನ್ಯೂಸ್

### ನದಿಗೆ ಆಹಾರವಾದ ಒಂದೇ ಕುಟುಂಬದ ನಾಲ್ವರು

**ಆನಂದ್:** ಇಬ್ಬರು ಮಹಿಳೆಯರು ಸೇರಿದಂತೆ ಒಂದೇ ಕುಟುಂಬದ ನಾಲ್ವರು ಗುಜರಾತಿನ ಆನಂದ್ ಜಿಲ್ಲೆಯ ಮಹಿಸಾಗರ್ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬೇಸಿಗೆ ಕಾಲದಲ್ಲಿ ಜನಪ್ರಿಯ ಪ್ರವಾಸಿ ತಾಣವಾಗಿರುವ ಖಾನ್‌ಪುರ ಗ್ರಾಮದ ಹೊರವಲಯದಲ್ಲಿ ಈ ಘಟನೆ ನಡೆದಿದ್ದು, ಅಲ್ಲಿಂದ ಹರಿಯುವ ಮಹಿಸಾಗರ ನದಿಯ ನೀರಿನಲ್ಲಿ ಸ್ನಾನ ಮಾಡಲು ಜನರು ಸೇರುತ್ತಿದ್ದರು ಎಂದು ಆನಂದ್ ಜಿಲ್ಲೆಯ ಖಂಬೋಲಾಜ್ ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಗಮ್ಡಿ ಗ್ರಾಮದ ಒಂದು ಕುಟುಂಬದ ನಾಲ್ವರು ಪ್ರವಾಸಿಗರಲ್ಲಿ ನದಿಯಲ್ಲಿ ಸ್ನಾನ ಮಾಡಲು ಬಂದಿದ್ದರು. ಅವರಲ್ಲಿ ಒಬ್ಬರು ಮುಳುಗಲು ಪ್ರಾರಂಭಿಸಿದಾಗ, ಇತರ ಮೂವರು ಆ ವ್ಯಕ್ತಿಯನ್ನು ರಕ್ಷಿಸಲು ನೀರಿನಲ್ಲಿ ಆಳಕ್ಕೆ ಇಳಿದರು. ಆದರೆ, ಅವರೆಲ್ಲರೂ ಅಂತಿಮವಾಗಿ ಮುಳುಗಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಬಗ್ಗೆ ತಿಳಿದ ಗ್ರಾಮಸ್ಥರು ಸ್ಥಳಕ್ಕೆ ಧಾವಿಸಿದರೂ, ಸಂತ್ರಸ್ತರ ಶವಗಳನ್ನು ಮಾತ್ರ ತೆಗೆಯಲು ತಡವಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ನಂತರ ಮತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಆಕಸಿಕ ಸಾವು ಎಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ. ಮತರನ್ನು ಸುರೇಶ್ ವಘೇಲಾ, ಪ್ರಕಾಶ್ ವಘೇಲಾ, ವೆಸುಬೆನ್ ಸೋಲಂಕಿ ಮತ್ತು ಜ್ಯೋತಿ ವಘೇಲಾ ಎಂದು ಗುರುತಿಸಲಾಗಿದೆ. ಜೂನ್ 2 ರಂದು ಆನಂದ್ ಪಟ್ಟಣ ಮತ್ತು ಲಂಬ್ವೆಲ್ ಗ್ರಾಮದ ಇಬ್ಬರು ವ್ಯಕ್ತಿಗಳು ನೀರಿನ ಆಳವನ್ನು ನಿರ್ಣಯಿಸಲು ಸಾಧ್ಯವಾಗದೆ ಅದೇ ಸ್ಥಳದಲ್ಲಿ ಇದೇ ರೀತಿಯಲ್ಲಿ ಸಾವನ್ನಪ್ಪಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

### ಮುಜಾಫರ್‌ಪುರ ಜಿಲ್ಲೆಯಲ್ಲಿ ಸೂಕ್ತ ದಾಖಲೆಗಳಿಲ್ಲದ ಚೀನಿ ವ್ಯಕ್ತಿ ಬಂಧನ

**ಮುಜಾಫರ್‌ಪುರ:** ಬಿಹಾರದ ಮುಜಾಫರ್‌ಪುರ ಜಿಲ್ಲೆಯಲ್ಲಿ ಮಾನ್ಯ ಪ್ರಯಾಣ ದಾಖಲೆಗಳನ್ನು ಹೊಂದಿಲ್ಲ ಎಂಬ ಆರೋಪದ ಮೇಲೆ ಓರ್ವ ಚೀನಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬ್ರಹಪುರ ಪೊಲೀಸ್ ಠಾಣೆ ವ್ಯಾಪ್ತಿಯ ಲಕ್ಷ್ಮೀ ಚೌಕ್ ಬಳಿ ಚೀನಾದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಮುಜಫರ್‌ಪುರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರಾಕೇಶ್ ಕುಮಾರ್ ತಿಳಿಸಿದ್ದಾರೆ.

ಆತನ ವಶದಿಂದ ಚೀನಾದ ನಕ್ಷೆ, ಒಂದು ಮೊಬೈಲ್ ಫೋನ್ ಮತ್ತು ಮೂರು ಸಣ್ಣ ಕಲ್ಲಿನ ಪ್ರತಿಮೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್‌ಎಸ್‌ಪಿ ತಿಳಿಸಿದ್ದಾರೆ. ಲಿ ಜಿಯಾಕಿ ಎಂದು ಗುರುತಿಸಲಾದ ಚೀನಿಯರು ನೆರೆಯ ದೇಶದ ಶಾಂಡೋಂಗ್ ಪ್ರಾಂತ್ಯದ ನಿವಾಸಿಯಾಗಿದ್ದಾರೆ. ವೀಸಾ ಸೇರಿದಂತೆ ಮಾನ್ಯ ಪ್ರಯಾಣದ ದಾಖಲೆಗಳನ್ನು ಸಾಗಿಸದಿದ್ದಕ್ಕಾಗಿ ಚೀನಾದ ವ್ಯಕ್ತಿಯನ್ನು ಬಂಧಿಸಲಾಗಿದೆ. ಅವರ ವಿರುದ್ಧ ವಿದೇಶಿ ಕಾಯಿದೆಯ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ಅವರ ಭಾರತ ಭೇಟಿಯ ಉದ್ದೇಶವನ್ನು ಖಚಿತಪಡಿಸಿಕೊಳ್ಳಲು ಹಿರಿಯ ಪೊಲೀಸ್ ಅಧಿಕಾರಿಗಳು ಅವರನ್ನು ವಿಚಾರಣೆ ನಡೆಸುತ್ತಿದ್ದಾರೆ ಎಂದು ಎಸ್‌ಎಸ್‌ಪಿ ಹೇಳಿದರು.

### ಹಾಸ್ಟೆಲ್‌ನಲ್ಲಿ ಬೆಂಕಿ: ವಿದ್ಯಾರ್ಥಿನಿಯರು ಪಾರು, ವಾಚ್‌ಮೆನ್ ಸಾವು

**ಪೂನಾ:** ಮಹಾರಾಷ್ಟ್ರದ ಪುಣೆ ನಗರದ ಶಾನಿಪರ್ ಪ್ರದೇಶದಲ್ಲಿ ಐದಂತಸ್ತಿನ ಹಾಸ್ಟೆಲ್ ಕಟ್ಟಡಕ್ಕೆ ಶುಕ್ರವಾರ ನಸುಕಿನ ವೇಳೆ ಬೆಂಕಿ ಕಾಣಿಸಿಕೊಂಡು ವಾಚ್‌ವ್ಯಾನ್ ಸಾವನ್ನಪ್ಪಿದ್ದಾರೆ ಮತ್ತು 40 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ರಕ್ಷಿಸಲಾಗಿದೆ. ಮುಂಜಾನೆ 1.30ರ ಸುಮಾರಿಗೆ ಈ ಘಟನೆ ಸಂಭವಿಸಿದೆ ಎಂದು ಪುಣೆ ಮುನ್ಸಿಪಲ್ ಕಾರ್ಪೊರೇಷನ್‌ನ ಮುಖ್ಯ ಅಗ್ನಿಶಾಮಕ ಅಧಿಕಾರಿ ದೇವೇಂದ್ರ ಪೋಟ್‌ಪೋಡ್ ತಿಳಿಸಿದ್ದಾರೆ.


ಕಟ್ಟಡದ ಎರಡನೇ ಮಹಡಿಯಲ್ಲಿರುವ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದ ನಲವತ್ತೆರಡು ವಿದ್ಯಾರ್ಥಿನಿಯರನ್ನು ಬೆಂಕಿಯ ನಂತರ ರಕ್ಷಿಸಲಾಗಿದೆ ಎಂದು ಅವರು ಹೇಳಿದರು. ಐದು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡ ಬಗ್ಗೆ ಅಗ್ನಿಶಾಮಕ ದಳಕ್ಕೆ ಕರೆ ಬಂದಿತು. ನಮ ತಂಡವು ಸ್ಥಳಕ್ಕೆ ತಲುಪಿದ ನಂತರ, ನೆಲ ಮಹಡಿಯಲ್ಲಿರುವ ಅಕೌಂಟಿಂಗ್ ಅಕಾಡೆಮಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಪೋಟ್‌ಪೋಡ್ ಹೇಳಿದರು. ಅಗ್ನಿಶಾಮಕ ದಳದ ತಂಡವು ಸ್ಥಳಕ್ಕೆ ತಲುಪುವಷ್ಟರಲ್ಲಿ ಆ ಪ್ರದೇಶದ ಜನರು ಹಾಸ್ಟೆಲ್‌ನಲ್ಲಿದ್ದ ವಿದ್ಯಾರ್ಥಿನಿಯರನ್ನು ಸ್ಥಳಾಂತರಿಸಿದ್ದರು ಎಂದು ಅವರು ಹೇಳಿದರು.ನೆಲ ಮಹಡಿಯಲ್ಲಿ ಬೆಂಕಿಯನ್ನು ನಂದಿಸುವಾಗ, 40 ರ ಪ್ರಾಯದ ಒಬ್ಬ ವ್ಯಕ್ತಿಯು ಅಲ್ಲಿ ಸತ್ತಿರುವುದು ಕಂಡುಬಂದಿದೆ ಮತ್ತು ಸಾವು ಸುಟ್ಟ ಗಾಯಗಳಿಂದ ಉಂಟಾಯಿತು ಎಂದು ಅವರು ಹೇಳಿದರು.

### ಭಯೋತ್ಪಾದನೆ ಹರಡಲು ಯತ್ನಿಸಿದ ಆರೋಪಿ ಬಂಧನ

**ಇಂಫಾಲ್:** ಮಣಿಪುರದ ಹಿಂಸಾಚಾರ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಂಡು ಭಯೋತ್ಪಾದನೆ ಹರಡಲು ಯತ್ನಿಸಿದ ಆರೋಪದ ಮೇಲೆ ಪ್ರಮುಖ ಆರೋಪಿಯನ್ನು ಎನ್‌ಐಎ ಇಂಫಾಲ್ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ. ಬಂಧಿತ ಆರೋಪಿಯನ್ನು ಕುಕಿ ನ್ಯಾಷನಲ್ ಫ್ರಂಟ್-ಮಿಲಿಟರಿ ಕೌನ್ಸಿಲ್ ಸದಸ್ಯ ಥೋಂಗ್‌ಮಿಂಥಾಂಗ್ ಹಾಕಿಪ್ ಅಲಿಯಾಸ್ ರೋಜರ್ ಎಂದು ಗುರುತಿಸಲಾಗಿದೆ. ಆರೋಪಿ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಾಗಿದೆ. ಅಲ್ಲದೇ ಆತನ ವಿರುದ್ಧ ಕಳೆದ ವರ್ಷ ಜುಲೈ 19ರಂದು ಎನ್‌ಐಎ ಸುಮೋಟೋ ಪ್ರಕರಣ ದಾಖಲಿಸಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ನಕಲಿ ಆಧಾರ್‌ಕಾರ್ಡ್ ತೋರಿಸಿ ಪ್ರವೇಶಿಸಲೆತ್ನಿಸಿದ ಮೂವರು ವಶಕ್ಕೆ

**ನವದೆಹಲಿ:** ನಕಲಿ ಆಧಾರ್‌ಕಾರ್ಡ್ ತೋರಿಸಿ ಸಂಸತ್ ಭವನ ಪ್ರವೇಶಿಸಲು ಮೂವರು ಯತ್ನಿಸಿರುವ ಘಟನೆ ಬೆಳಕಿಗೆ ಬಂದಿದೆ. ಬಂಧಿತರನ್ನು ಖಾಸಿಂ, ಮೋನೀಶ್ ಮತ್ತಿ ಸೋಯೆಬ್ ಎಂದು ಗುರುತಿಸಲಾಗಿದೆ. ಇವರು ಕಳೆದ ಮೂರು ತಿಂಗಳಿಂದಲೂ ಸಂಸತ್ತಿನ ಸಂಕೀರ್ಣದಲ್ಲಿ ಕೆಲಸ ಮಾಡುತ್ತಿದ್ದರು. ಭದ್ರತಾ ಸಿಬ್ಬಂದಿ ನಿತ್ಯದ ನಡೆಸುವಂತೆ ತಪಾಸಣೆ ವೇಳೆ ಈ ಮೂರು ಕಾರ್ಮಿಕರು ನಕಲಿ ಆಧಾರ್ ಕಾರ್ಡ್ ಹೊಂದಿರುವುದು ಪತ್ತೆಯಾಗಿದೆ. ಸಂಸತ್ ಭವನದ ಎದುರು ನಿಯೋಜನೆಗೊಂಡಿರುವ ಭದ್ರತಾ ಸಿಬ್ಬಂದಿ ಮೂವರನ್ನು ತಪಾಸಣೆ ನಡೆಸಿದಾಗ ಇವರ ಬಳಿ ನಕಲಿ ಆಧಾರ್‌ಕಾರ್ಡ್ ಇರುವುದು ಕಂಡು ಬಂದಿದ್ದು, ತಕ್ಷಣ ಅವರನ್ನು ವಶಕ್ಕೆ ಪಡೆದಿದ್ದಾರೆ.




# ಪಾಕ್ ತಂಡದ ಖಾಸಗಿ ಔತಣಕೂಟ ರದ್ದು! ಫ್ಯಾನ್ಸ್‌ಗೆ ಹಣ ವಾಪಸ್

## ಪಾಕಿಸ್ತಾನವನ್ನು ಸೋಲಿಸುವ ಮೂಲಕ ಅಮೆರಿಕ, ಟಿ20 ವಿಶ್ವಕಪ್‌ನ ಸಂಪೂರ್ಣ ಲೆಕ್ಕಾಚಾರ ಬುಡಮೇಲು

ಪಾಕಿಸ್ತಾನಿ ಆಟಗಾರರೊಂದಿಗೆ ನ್ಯೂಯಾರ್ಕ್‌ನಲ್ಲಿ ಅಭಿಮಾನಿಗಳಿಗೆ ಖಾಸಗಿ ಔತಣಕೂಟವನ್ನು ಆಯೋಜಿಸುವ ಪಿಸಿಬಿ ನಡೆಗೆ ಎಲ್ಲೆಡೆ ವಿರೋಧ ವ್ಯಕ್ತವಾಗಿತ್ತು. ಇದೀಗ ಈ ಖಾಸಗಿ ಔತಣಕೂಟವನ್ನು ರದ್ದುಗೊಳಿಸಲಾಗಿದೆ ಎಂದು ಪಾಕಿಸ್ತಾನಿ ಪತ್ರಕರ್ತರೊಬ್ಬರು ಹೇಳಿದ್ದಾರೆ. ಔತಣಕೂಟ ರದ್ದಾದ ಬಳಿಕ ಅಭಿಮಾನಿಗಳ ಹಣವನ್ನೂ ಮಂಡಳಿ ವಾಪಸ್ ಮಾಡಬೇಕಿದೆ.

ಆರಂಭವಾಗಿ ಒಂದು ವಾರ ಕಳೆದರೂ ಅಭಿಮಾನಿಗಳಲ್ಲಿ ಟಿ20 ಕ್ರಿಕೆಟ್‌ನ ರುಚಿ ಹತ್ತಿಸುವಲ್ಲಿ ವಿಫಲವಾಗಿದ್ದ 2024 ರ ಟಿ20 ವಿಶ್ವಕಪ್ ತನ್ನ 11 ನೇ ಪಂದ್ಯದಲ್ಲಿ ಅಭಿಮಾನಿಗಳಿಗೆ ಮನರಂಜನೆಯ ರಸದೌತಣವನ್ನೇ ನೀಡಿದರೆ, ಇತ್ತ ವಿಶ್ವಕಪ್ ಗೆಲ್ಲಬೇಕು ಎಂದು ಬಂದಿದ್ದ ಬಲಿಷ್ಠ ತಂಡಕ್ಕೆ ಆಘಾತ ನೀಡಿದೆ. ಈ ಪಂದ್ಯದಲ್ಲಿ ಪಾಕಿಸ್ತಾನವನ್ನು ಸೋಲಿಸುವ ಮೂಲಕ ಅಮೆರಿಕ, ಟಿ20 ವಿಶ್ವಕಪ್‌ನ ಸಂಪೂರ್ಣ ಲೆಕ್ಕಾಚಾರವನ್ನು ಬುಡಮೇಲು ಮಾಡಿದೆ. ಇಷ್ಟು ದಿನ ಬಲಿಷ್ಠ ತಂಡಗಳೆದುರು ಶರಣಾಗುತ್ತಿದ್ದ ಪಾಕ್ ತಂಡ, ಇದೀಗ ಕ್ರಿಕೆಟ್ ಶಿಶು ಅಮೆರಿಕ ವಿರುದ್ಧ ಮುಜುಗರದ ಸೋಲನ್ನು ಎದುರಿಸಿದೆ. ಈ ಸೋಲು ಪಾಕ್ ತಂಡವನ್ನು ಎಷ್ಟು ಗಾಸಿಗೊಳಿಸಿದೆ ಎಂದರೆ, ಟೀಂ ಇಂಡಿಯಾ ವಿರುದ್ಧದ ಪಂದ್ಯಕ್ಕೂ ಮುನ್ನ ಅಭಿಮಾನಿಗಳೊಂದಿಗೆ ಖಾಸಗಿ ಔತಣಕೂಟ ನಡೆಸಲು ಮುಂದಾಗಿದ್ದ ಪಾಕ್ ಮಂಡಳಿ ಇದೀಗ ಆ ಔತಣಕೂಟವನ್ನು ರದ್ದುಗೊಳಿಸಿದೆ.

**ಔತಣಕೂಟ ರದ್ದು:** ಟಿ20 ವಿಶ್ವಕಪ್‌ಗಾಗಿ ಅಮೆರಿಕಕ್ಕೆ ಕಾಲಿಟ್ಟಿದ್ದ ಪಾಕಿಸ್ತಾನ ಕ್ರಿಕೆಟ್ ಮಂಡಳಿ, ತನ್ನ ಅಭಿಮಾನಿಗಳಿಗೆ ತಂಡದೊಂದಿಗೆ ಖಾಸಗಿ ಔತಣಕೂಟವನ್ನು ಏರ್ಪಟ್ಟಿಸಿತ್ತು. ಈ ಔತಣಕೂಟದಲ್ಲಿ ಭಾಗವಹಿಸಲು 25 ಡಾಲರ್‌ಗಳ ಶುಲ್ಕವನ್ನು ಸಹ ನಿಗದಿಪಡಿಸಿತ್ತು. ಪಾಕ್ ಮಂಡಳಿಯ ಈ ನಡೆ ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು.

### ಯುಎಸ್‌ಎ ವಿರುದ್ಧ ಹೀನಾಯ ಸೋಲು



### ಡ್ರೆಸ್ಸಿಂಗ್ ರೂಮ್‌ನಲ್ಲಿ ಮೌನ

**ಪಾಕಿಸ್ತಾನಿ ತಂಡದ ಮೂಲಗಳನ್ನು ಉಲ್ಲೇಖಿಸಿ, ಜೂನ್ 9 ರಂದು ಭಾರತ ವಿರುದ್ಧದ ಪಂದ್ಯವನ್ನು ಆಡಲು ಬಾಬರ್ ಪಡೆ ನ್ಯೂಯಾರ್ಕ್‌ಗೆ ತಲುಪಿದೆ ಎಂದು ತಿಳಿದುಬಂದಿದೆ. ಅಮೆರಿಕ ವಿರುದ್ಧ ಸೋತ ನಂತರ ಆಟಗಾರರು ತುಂಬಾ ಬೇಸರಗೊಂಡಿದ್ದು, ನಿರಾಸೆಯಿಂದ ಕಂಗೆಟ್ಟಿದ್ದಾರೆ. ಪ್ರಯಾಣದ ವೇಳೆಯೂ ಆಟಗಾರರು ತಮ್ಮ ತಮ್ಮಲ್ಲೇ ಮಾತನಾಡಿದ್ದು ಕಡಿಮೆ. ಈ ಔತಣಕೂಟಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ವಿವಾದಗಳು ಎದ್ದಿದ್ದು, ಇದೀಗ ಆಟಗಾರರ ಮಾನಸಿಕ ಸ್ಥಿತಿಯನ್ನು ಪರಿಗಣಿಸಿ ಮಂಡಳಿಯು ಔತಣಕೂಟವನ್ನು ರದ್ದುಗೊಳಿಸಿದೆ ಎಂದು ವರದಿಯಾಗಿದೆ.**

ಇದೀಗ ಅಮೆರಿಕ ವಿರುದ್ಧದ ನಾಚಿಕೆಗೇಡಿನ ಸೋಲಿನ ನಂತರ ಪಿಸಿಬಿ ಈ ಖಾಸಗಿ ಔತಣಕೂಟವನ್ನು ರದ್ದು ಮಾಡಿದೆ ಎಂಬ ಸುದ್ದಿ ಬಂದಿದೆ.

**ಸೋಶಿಯಲ್ ಮೀಡಿಯಾ ಬಳಸುವಂತಿಲ್ಲ:** ವರದಿಯ ಪ್ರಕಾರ, ಈ ಸೋಲಿನಿಂದ ಪಾಕಿಸ್ತಾನಿ ಆಟಗಾರರು ಎಷ್ಟು ನಿರಾಸೆಗೊಂಡಿದ್ದಾರೆಂದರೆ, ಪಂದ್ಯದ ನಂತರ ಡ್ರೆಸ್ಸಿಂಗ್ ರೂಮ್‌ನಲ್ಲಿ ಆಟಗಾರರು ತಲೆ ಮೇಲೆ ಕೈಹೊತ್ತು ಕುಳಿತಿದ್ದರಂತೆ. ತಂಡ ಹೋಟೆಲ್ ರೂಮ್ ತಲುಪಿದಾಗ ಅಲ್ಲಿಯೂ ಮೌನ ಆವರಿಸಿತ್ತು. ಇನ್ನು ಔತಣಕೂಟಕ್ಕೆ ಸಂಬಂಧಿಸಿದಂತೆ ರಶೀದ್ ಲತೀಫ್ ಸೇರಿದಂತೆ ಹಲವು ಮಾಜಿ ಕ್ರಿಕೆಟಿಗರು ಇದನ್ನು ಟೀಕಿಸಿದ್ದರು. ಇದೀಗ ಸೋಲಿನ ಬಳಿಕ ವಿವಾದ ತಪ್ಪಿಸಲು ಪಿಸಿಬಿ ಈ ಕ್ರಮ ಕೈಗೊಂಡಿದೆ. ಮೂಲಗಳ ಪ್ರಕಾರ, ಇಡೀ ತಂಡ ಸಾಮಾಜಿಕ ಮಾಧ್ಯಮ ಬಳಸದಂತೆ ಪಿಸಿಬಿ ಸೂಚನೆ ನೀಡಿದೆ. ಅಭಿಮಾನಿಗಳ ಪ್ರತಿಕ್ರಿಯೆ ಆತ್ಮವಿಶ್ವಾಸಕ್ಕೆ ಧಕ್ಕೆಯಾಗದಂತೆ ಭಾರತ ವಿರುದ್ಧದ ಪಂದ್ಯದವರೆಗೂ ಆಟಗಾರರು ಸಾಮಾಜಿಕ ಜಾಲತಾಣಗಳಲ್ಲಿ ಏನನ್ನೂ ಪೋಸ್ಟ್ ಮಾಡಬಾರದು ಎಂದು ಮಂಡಳಿ ಆಟಗಾರರಿಗೆ ಹೇಳಿದೆ ಎಂದು ವರದಿಯಾಗಿದೆ.

# ಮೊದಲ ಪಂದ್ಯದಲ್ಲೇ ಪಾಕ್ ಬೌಲರ್ ಕಳ್ಳಾಟ

ಹ್ಯಾರಿಸ್ ರೌಫ್ ತನ್ನ ಬೆರಳಿನ ಉಗುರಿನಿಂದ ಚೆಂಡನ್ನು ವಿರೂಪಗೊಳಿಸಲು ಯತ್ನಿಸಿದ್ದಾರೆ. ಚೆಂಡನ್ನು ರಿವರ್ಸ್ ಸ್ವಿಂಗ್ ಮಾಡಲು ಹ್ಯಾರಿಸ್ ರೌಫ್ ಇಷ್ಟೆಲ್ಲ ಮಾಡಿದ್ದಾರೆ. ರನ್‌ಅಪ್‌ನಲ್ಲಿ ಹೋಗುವಾಗ ಹ್ಯಾರಿಸ್ ತನ್ನ ಹೆಬ್ಬೆರಳಿನ ಉಗುರಿನಿಂದ ಚೆಂಡನ್ನು ಉಜ್ಜಿದ್ದನ್ನು ನೀವು ಸ್ಪಷ್ಟವಾಗಿ ನೋಡಬಹುದು. ಹೀಗಾಗಿ ಈ ಬಗ್ಗೆ ಐಸಿಸಿ ಸೂಕ್ತ ತನಿಖೆ ನಡೆಸಬೇಕೆಂದು ರಸ್ಟಿ ಥೆರಾನ್ ಬರೆದುಕೊಂಡಿದ್ದಾರೆ.

2024 ರ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡ ತನ್ನ ಮೊದಲ ಪಂದ್ಯದಲ್ಲೇ ಅಮೆರಿಕ ವಿರುದ್ಧ ಸೋಲನ್ನು ಎದುರಿಸಬೇಕಾಯಿತು. ಯುಎಸ್‌ಎ ವಿರುದ್ಧದ ಸೋಲಿನ ನಂತರ ಪಾಕಿಸ್ತಾನ ತಂಡವು ಸಾಕಷ್ಟು ಅಪಹಾಸ್ಯಕ್ಕೊಳಗಾಗುತ್ತಿದೆ. ಇದಲ್ಲದೆ ಮೊದಲ ಪಂದ್ಯದಲ್ಲೇ ಸೋತಿರುವ ಬಾಬರ್ ಪಡೆ ಟಿ20 ವಿಶ್ವಕಪ್‌ನಿಂದ ಹೊರಗುಳಿಯುವ ಅಪಾಯದಲ್ಲಿದೆ. ಏಕೆಂದರೆ ಅಮೆರಿಕ ಎರಡು ಪಂದ್ಯಗಳಲ್ಲಿ ಎರಡನ್ನು ಗೆದ್ದಿದೆ ಮತ್ತು ಟೀಂ ಇಂಡಿಯಾ ತನ್ನ ಮೊದಲ ಪಂದ್ಯವನ್ನೂ ಗೆದ್ದಿದೆ. ಈಗ ಪಾಕಿಸ್ತಾನ ಕೂಡ ಟೀಂ ಇಂಡಿಯಾ ವಿರುದ್ಧ ಸೋತರೆ ಸೂಪರ್-8 ತಲುಪುವುದು ಕಷ್ಟವಾಗಲಿದೆ. ಇದೆಲ್ಲದರ ನಡುವೆ ಇದೀಗ ಈ ಪಂದ್ಯಕ್ಕೆ ಸಂಬಂಧಿಸಿದಂತೆ ಹೊಸ ವಿವಾದವೊಂದು ಭುಗಿಲೆದ್ದಿದೆ. ಅದೇನೆಂದರೆ ಈ ಪಂದ್ಯದಲ್ಲಿ ಪಾಕಿಸ್ತಾನ ತಂಡದ ವೇಗದ ಬೌಲರ್ ಹ್ಯಾರಿಸ್ ರೌಫ್ ಬಾಲ್ ಟ್ಯಾಂಪರಿಂಗ್ ಮಾಡಿದ್ದಾರೆ ಎಂದು ಅಮೆರಿಕ ಆಟಗಾರ ಗಂಭೀರ ಆರೋಪ ಹೊರಿಸಿದ್ದಾರೆ.



**ಹ್ಯಾರಿಸ್ ರೌಫ್ ವಿರುದ್ಧ ಬಾಲ್ ಟ್ಯಾಂಪರಿಂಗ್ ಆರೋಪ**

ಪಾಕಿಸ್ತಾನ ಮತ್ತು ಯುಎಸ್‌ಎ ನಡುವಿನ ಪಂದ್ಯದ ನಂತರ, ತಮ್ಮ ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಬರೆದುಕೊಂಡಿರುವ ಅಮೆರಿಕದ ಅನುಭವಿ ಕ್ರಿಕೆಟಿಗ ರಸ್ಟಿ ಥೆರಾನ್, ಪಾಕಿಸ್ತಾನದ ವೇಗದ ಬೌಲರ್ ಹ್ಯಾರಿಸ್ ರೌಫ್ ವಿರುದ್ಧ ಚೆಂಡು ವಿರೂಪಗೊಳಿಸಿದ್ದಾರೆ ಎಂದು ಆರೋಪಿಸಿದ್ದಾರೆ. ರಸ್ಟಿ ಥೆರಾನ್ ಟ್ವೀಟ್ ಮಾಡಿ 'ಹ್ಯಾರಿಸ್ ರೌಫ್ ತನ್ನ ಬೆರಳಿನ ಉಗುರಿನಿಂದ ಚೆಂಡನ್ನು ವಿರೂಪಗೊಳಿಸಲು ಯತ್ನಿಸಿದ್ದಾರೆ. ಚೆಂಡನ್ನು ರಿವರ್ಸ್ ಸ್ವಿಂಗ್ ಮಾಡಲು ಹ್ಯಾರಿಸ್ ರೌಫ್ ಇಷ್ಟೆಲ್ಲ ಮಾಡಿದ್ದಾರೆ. ರನ್‌ಅಪ್‌ನಲ್ಲಿ ಹೋಗುವಾಗ ಹ್ಯಾರಿಸ್ ತನ್ನ ಹೆಬ್ಬೆರಳಿನ ಉಗುರಿನಿಂದ ಚೆಂಡನ್ನು ಉಜ್ಜಿದ್ದನ್ನು ನೀವು ಸ್ಪಷ್ಟವಾಗಿ ಕಂಡುಬಂದಿದೆ.

### ಬಾಬರ್ ಆಝುಂ ಇಂಗ್ಲಿಷ್ ಕೇಳಿ ತಲೆಕೆರೆದುಕೊಂಡ ಅಮೆರಿಕ ಮಂದಿ

ವಿಶ್ವಕಪ್‌ನಲ್ಲಿ ಅಮೆರಿಕದ ವಿರುದ್ಧ ನಡೆದ ಪಂದ್ಯದಲ್ಲಿ ಪಾಕಿಸ್ತಾನ ಸೋಲು ಕಂಡಿದೆ. ಈ ಸೋಲಿನಿಂದ ಪಾಕ್ ಸಾಕಷ್ಟು ಹಿನ್ನಡೆ ಅನುಭವಿಸಿದೆ. ಭಾರತದ ಜೊತೆಗೆ ಸೋತರೆ ಪಾಕಿಸ್ತಾನ ಈ ಬಾರಿಯ ವಿಶ್ವಕಪ್‌ನಿಂದ ಬಹುತೇಕ ಹೊರ ಹೋದಂತೆ ಎನ್ನಲಾಗುತ್ತಿದೆ. ಪಾಕ್ ತಂಡ ಸೋತ ಬಳಿಕ ಬಾಬರ್ ಆಝುಂ ಅವರು ಮಾತನಾಡಿದ್ದಾರೆ. ಅವರು ಆಡಿದ ಇಂಗ್ಲಿಷ್ ಸಾಕಷ್ಟು ಟ್ರೋಲ್ ಆಗುತ್ತಿದೆ. ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ ಕೇವಲ 159 ರನ್ ಕಲೆ ಹಾಕಿತು. ಈ ಮೊತ್ತ ಬೆನ್ನತ್ತಿದ್ದ ಅಮೆರಿಕ ತಂಡ ಒಳ್ಳೆಯ ಬ್ಯಾಟಿಂಗ್ ಮಾಡಿತು. ಕೊನೆಯ ಬಾಲ್‌ಗೆ ಬೇಕಿದ್ದಿದ್ದು 5ರನ್‌ಗಳು. ಈ ವೇಳೆ ಬೌಂಡರಿ ಬಂದಿದ್ದರಿಂದ ಸ್ಕೋರ್ ಸಮ ಆಯಿತು. ಸೂಪರ್ ಓವರ್‌ನಲ್ಲಿ ಅಮೆರಿಕ ಗೆದ್ದಿದೆ ಈ ಸೋಲಿನ ಬಗ್ಗೆ ಬಾಬರ್ ಆಝುಂ ಮಾತನಾಡಿದ್ದಾರೆ. 'ಮೊದಲ 6 ಓವರ್‌ಗಳಲ್ಲಿ ಬ್ಯಾಟಿಂಗ್ ಮಾಡುವಾಗ ನಮಗೆ ಯಾವುದೇ ಲಾಭ ಆಗಿಲ್ಲ. ಒಂದರ ಹಿಂದೆ ಒಂದರಂತೆ ವಿಕೆಟ್‌ಗಳು ಬಿದ್ದವು. ಬ್ಯಾಟ್ಸಮನ್‌ಗಳಾಗಿ ನಾವು ಪಾರ್ಟನರ್‌ಶಿಪ್‌ಗಳನ್ನು ಬೆಳೆಸಬೇಕು. ಆದರೆ, ನಾವು ಅಂದಕೊಂಡಂತೆ ಗೆಲುವು ಸಾಧಿಸಿಲ್ಲ. ನಮ್ಮ ಸ್ಪಿನ್ನರ್‌ಗಳು ಕೂಡ ಉತ್ತಮ ಪ್ರದರ್ಶನ ನೀಡಿಲ್ಲ. ಇದು ನಮಗೆ ದುಬಾರಿ ಆಯಿತು' ಎಂದಿದ್ದಾರೆ ಬಾಬರ್. 'ತುಂಬಾನೇ ಕಷ್ಟ ಇತ್ತು. ಎಲ್ಲಾ ಕ್ರೆಡಿಟ್ ಅಮೆರಿಕ ತಂಡಕ್ಕೆ ಸಲ್ಲಬೇಕು. ಎಲ್ಲಾ ವಿಭಾಗಗಳಲ್ಲಿ ನಮಗಿಂತ ಉತ್ತಮವಾಗಿ ಆಡಿದರು. ಪ್ರೊಫೆಷನಲ್ ಕ್ರಿಕೆಟರ್ ಆಗಿ ಮೈದಾನವನ್ನು ನೀವು ಅರ್ಥೈಸಿಕೊಳ್ಳಬೇಕು' ಎಂದಿದ್ದಾರೆ ಬಾಬರ್. ಬಾಬರ್ ಅವರ ಮಾತನಾಡಿದ್ದು ಬಟ್ಲರ್ ಇಂಗ್ಲಿಷ್ ಆಗಿತ್ತು. ಹೀಗಾಗಿ, ಎಲ್ಲಾರೂ ಇದನ್ನು ಟೀಕೆ ಮಾಡಿದ್ದಾರೆ.



# ಕೆಣಕಿದ ಅಭಿಮಾನಿಯೊಂದಿಗೆ ಜಗಳಕ್ಕಿಳಿದ ಪಾಕ್ ಬ್ಯಾಟರ್!

ಆಝುಂ ಖಾನ್, ಔಟಾದ ಹತಾಶೆಯಲ್ಲಿ ಡ್ರೆಸ್ಸಿಂಗ್ ಕೋಣೆಗೆ ಹಿಂತಿರುಗುತ್ತಿದ್ದಾಗ, ಪಾಕಿಸ್ತಾನಿ ಅಭಿಮಾನಿಯೊಬ್ಬ ಅವರಿಗೆ ಏನೋ ಹೇಳಿದರು. ಇದರಿಂದಾಗಿ ಕೋಪಗೊಂಡ ಆಝುಂ ಖಾನ್, ತಕ್ಷಣವೇ ಕೋಪದಿಂದ ಹಿಂದೆ ತಿರುಗಿ ಆ ಅಭಿಮಾನಿಗೆ ಏನನ್ನೋ ಹೇಳಿದರು. ನಂತರ ಇಬ್ಬರು ಪರಸ್ಪರ ವಾಕ್ಸಮರ ನಡೆಸಿದರು.

ಆತಿಥೇಯ ಅಮೆರಿಕ ವಿರುದ್ಧ ಸೂಪರ್ ಓವರ್ ಥ್ರಿಲ್ಲರ್‌ನಲ್ಲಿ ಮುಗ್ಗರಿಸಿದ ಪಾಕಿಸ್ತಾನ ತಂಡ ವಿಶ್ವ ಕ್ರಿಕೆಟ್ ಮುಂದೆ ಮುಜುಗರಕ್ಕೀಡಾಗಿದೆ. ಕ್ರಿಕೆಟ್‌ನಲ್ಲಿ ಅಮೆರಿಕದಂತಹ ಕ್ರಿಕೆಟ್ ಶಿಶು ದೇಶದ ವಿರುದ್ಧ ಸೋಲನ್ನು ಎದುರಿಸಿದ್ದೇವೆ ಎಂಬುದನ್ನು ಅರಗಿಸಿಕೊಳ್ಳಲು ಪಾಕ್ ತಂಡಕ್ಕೆ ಸಾಧ್ಯವಾಗುತ್ತಿಲ್ಲ. ಗೆಲ್ಲುವ ಪಂದ್ಯವನ್ನು ಕೈಯಾರೆ ಕಳೆದುಕೊಂಡ ಪಾಕ್ ಆಟಗಾರರ ವಿರುದ್ಧ ಅಭಿಮಾನಿಗಳಿಂದ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ಅದರಲ್ಲೂ ಪಂದ್ಯ ವೀಕ್ಷಿಸಲು ಅಮೆರಿಕಕ್ಕೆ ತೆರಳಿರುವ ಪಾಕಿಸ್ತಾನಿ ಅಭಿಮಾನಿಗಳು ಆಟಗಾರರ ಪ್ರದರ್ಶನಕ್ಕೆ ಕ್ರೀಡಾಂಗಣದಲ್ಲೇ ಆಕ್ರೋಶ ಹೊರಹಾಕುತ್ತಿದ್ದಾರೆ.



ಇದಕ್ಕೆ ಪೂರಕವಾಗಿ ಅಮೆರಿಕ ವಿರುದ್ಧ ತಾನು ಎದುರಿಸಿದ ಮೊದಲ ಎಸೆತದಲ್ಲೇ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದ ಪಾಕಿಸ್ತಾನ ತಂಡದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಝುಂ ಖಾನ್ ವಿರುದ್ಧ ಅಭಿಮಾನಿಯೊಬ್ಬ ಬಹಿರಂಗವಾಗೆ ಅಸಮಾಧಾನ ಹೊರಹಾಕಿದ್ದು, ಆ ಅಭಿಮಾನಿಯೊಂದಿಗೆ ಆಝುಂ ಖಾನ್ ಕಾಲ್ಕೆರೆದು ಜಗಳ ಮಾಡಿರುವ ಘಟನೆಯ ವಿಡಿಯೋ ಈಗ ಎಲ್ಲೆಡೆ ವೈರಲ್ ಆಗುತ್ತಿದೆ.

### ಸೊನ್ನೆ ಸುತ್ತಿದ ಹತಾಶೆ

**ಸೊನ್ನೆ ಸುತ್ತಿದ ಆಝುಂ ಖಾನ್**

ಶಾದಾಬ್ ಔಟಾದ ಬಳಿಕ ತಂಡ ಮತ್ತೆ ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ತಂಡದ ಸ್ಕೋರ್ 4 ವಿಕೆಟ್ ನಷ್ಟಕ್ಕೆ 98 ರನ್ ಆಗಿತ್ತು. ಅಂತಹ ಪರಿಸ್ಥಿತಿಯಲ್ಲಿ, ಆಝುಂ ಖಾನ್ ಅವರಿಂದ ದೊಡ್ಡ ಇನ್ನಿಂಗ್ಸ್ ನಿರೀಕ್ಷಿಸಲಾಗಿತ್ತು. ಆದರೆ ಪಾಕಿಸ್ತಾನದ ಈ ಕೆಟ್ಟ ಪರಿಸ್ಥಿತಿಯಲ್ಲಿಯೂ ಅವರು ಮೊದಲ ಎಸೆತದಲ್ಲಿಯೇ ವಿಕೆಟ್ ಒಪ್ಪಿಸಿ ಪೆವಿಲಿಯನತ್ತ ಹೆಜ್ಜೆಹಾಕಿದರು. ಈ ವೇಳೆ ಅವರು ಅಭಿಮಾನಿಗಳ ಕೋಪಕ್ಕೆ ಗುರಿಯಾಗಬೇಕಾಯಿತು.

ಪಂದ್ಯ ವೀಕ್ಷಿಸಲು ಬಂದಿದ್ದವರು ಇಬ್ಬರ ನಡುವೆ ನಿಂದನೆ ನಡೆದಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಿಕೊಂಡಿದ್ದಾರೆ. ಆದಾಗ್ಯೂ, ಈ ಸಮಯದಲ್ಲಿ ಇಬ್ಬರೂ ಪರಸ್ಪರ ಏನು ಹೇಳಿದರು ಎಂಬುದರ ಕುರಿತು ಯಾವುದೇ ಕಾಂಕ್ರೀಟ್ ವೀಡಿಯೊ ಇನ್ನೂ ಸಿಕ್ಕಿಲ್ಲ.

**ಆಝುಂ ಖಾನ್ ಕಳಪೆ ಫಾರ್ಮ್?**

ಅಜಮ್ ಖಾನ್ ಪಾಕಿಸ್ತಾನದ ಮಾಜಿ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಮೊಯಿನ್ ಖಾನ್ ಅವರ ಮಗ. ಹೊಡಿಬಡಿ ಆಟಕ್ಕೆ ಹೆಸರುವಾಸಿಯಾಗಿರುವ ಅವರಿಗೆ ಕೆಲ ದಿನಗಳಿಂದ ಪಾಕಿಸ್ತಾನ ತಂಡದಲ್ಲಿ ನಿರಂತರವಾಗಿ ಆಡುವ ಅವಕಾಶ ಸಿಕ್ಕರೂ ನಿರೀಕ್ಷೆಗೆ ತಕ್ಕಂತೆ ಅವರಿಂದ ಪ್ರದರ್ಶನ ಹೊರಬರುತ್ತಿಲ್ಲ. ಕಳೆದ ಎರಡು ಪಂದ್ಯಗಳಲ್ಲಿ ಅವರು ಸತತವಾಗಿ ಶೂನ್ಯಕ್ಕೆ ಔಟಾಗಿದ್ದಾರೆ. ಇದುವರೆಗೆ 14 ಟಿ20 ಅಂತರಾಷ್ಟ್ರೀಯ ಪಂದ್ಯಗಳನ್ನಾಡಿರುವ ಅವರು 8.8ರ ಸರಾಸರಿಯಲ್ಲಿ 88 ರನ್ ಗಳಿಸಲಷ್ಟೇ ಶಕ್ತರಾಗಿದ್ದಾರೆ.

# ಮೋಕ್ಷಾ ಒಂದು ವಾರ ಸ್ನಾನ ಮಾಡಲ್ವಂತೆ



ಕೆಲವು ಕನ್ನಡ ಸಿನಿಮಾಗಳಲ್ಲಿ, ಶಾರ್ಟ್ ಫಿಲಂಗಳು, ಫೀಚರ್ ಫಿಲಂ ಮತ್ತು ಜಾಹೀರಾತುಗಳಲ್ಲಿ ಈಗಾಗಲೇ ನಟಿಸಿರುವ ಮೋಕ್ಷಾ ಅವರು ಇದೀಗ ಕೋಟಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆದಿಪುರಾಣ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಿದ್ದ ಬೆಡಗಿ, ನವರತ್ನ, ಮೋಡ ಕವಿದ ವಾತಾವರಣ ಸಿನಿಮಾಗಳಲ್ಲಿ ಇದಾಗಲೇ ನಟಿಸಿದ್ದು, ಕೋಟಿಯಲ್ಲಿ ಬ್ರೇಕ್ ನಿರೀಕ್ಷೆಯಲ್ಲಿದ್ದಾರೆ.

ಇದೀಗ ಕಲರ್ಸ್ ಕನ್ನಡ ವೇದಿಕೆಯಲ್ಲಿ ನಟಿ ಇನ್ನೊಂದು ವಾರ ಸ್ನಾನ ಮಾಡುವುದಿಲ್ಲ ಎಂದು ಹೇಳಿಕೆ ನೀಡಿದ್ದಾರೆ! ಅಷ್ಟಕ್ಕೂ ನಟಿ ಹೀಗೇಕೆ ಹೇಳಿದರು ಎಂದರೆ ಮತ್ತಿನ್ನೇನೂ ಅಲ್ಲ... ಕೋಟಿ ಚಿತ್ರದ ಪ್ರೊಮೋಷನ್‌ಗಾಗಿ ಕಲರ್ಸ್ ಕನ್ನಡ ವೇದಿಕೆಯಲ್ಲಿ ಕೋಟಿ ನಮನ ಕಾರ್ಯಕ್ರಮ ನಡೆಯುತ್ತಿದೆ. ಅದಕ್ಕೆ ಅತಿಥಿಯಾಗಿ ಕಿಚ್ಚ ಸುದೀಪ್ ಆಗಮಿಸಿದ್ದರು. ಈ ಸಮಯದಲ್ಲಿ ಕೋಟಿ ನಾಯಕಿ ಮೋಕ್ಷಾ ಅವರನ್ನು ವೇದಿಕೆಯ ಮೇಲೆ ಕರೆಯಲಾಗಿದೆ. ಮೋಕ್ಷಾ ಬನ್ನಿ ಎಂದು ಸುದೀಪ್ ಹೇಳುತ್ತಿದ್ದಂತೆಯೇ ಮೋಕ್ಷಾ ಅವರು, ಇದಾಗಲೇ ನಿಮ್ಮನ್ನು ನೋಡಿ ನರ್ವಸ್ ಆಗಿದ್ದೇನೆ. ನನ್ನ ಹೆಸರನ್ನು ಕರಿಯಬೇಡಿ ಎಂದಿದ್ದಾರೆ. ನಂತರ ಸುದೀಪ್ ಅವರಲ್ಲಿ ಹ್ಯಾಂಡ್‌ಶೇಕ್ ಮಾಡುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಸುದೀಪ್ ಅವರು ಹ್ಯಾಂಡ್‌ಶೇಕ್ ಮಾಡುತ್ತಿದ್ದಂತೆಯೇ, ಆಯಂಕರ್ ಅಕುಲ್ ಬಾಲಾಜಿಯವರು ಹಗ್ ಮಾಡಿ ಎಂದಿದ್ದಾರೆ. ಅಲ್ಲಿ ಒಂದಿಷ್ಟು ತಮಾಷೆ ನಡೆದಿದೆ. ನಂತರ ಎಲ್ಲಾರೂ ಫೋರ್ಸ್ ಮಾಡ್ತಾರಂತ ಹಗ್ ಮಾಡುತ್ತಿದ್ದೇನೆ ಎನ್ನುತ್ತಲೇ ನಟಿ ಮೋಕ್ಷಾ ಸುದೀಪ್ ಅವರನ್ನು ಹಗ್ ಮಾಡಿದ್ದಾರೆ. ಸುದೀಪ್ ಅವರನ್ನು ಅಪ್ಪಿಕೊಂಡ ಹಿನ್ನೆಲೆಯಲ್ಲಿ ನಟಿ ತಮಾಷೆಗಾಗಿ ಇನ್ನೊಂದು ವಾರ ನಾನು ಸ್ನಾನ ಮಾಡುವುದಿಲ್ಲ ಎಂದಿದ್ದಾರೆ ಅಷ್ಟೇ. ಆಗ ನಟಿಯ ಕಾಲೆಳೆದ ಅಕುಲ್ ಅವರು ಇವತ್ತು ಮಾಡಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಅಷ್ಟಕ್ಕೂ ಇದು ತಮಾಷೆಗಾಗಿ ನಟಿ ಹೇಳಿದ್ದು.

### ಹಗ್ ಮಾಡಿದ ಸುದೀಪ್

# ಅದ್ದೂರಿಯಾಗಿ ನಡೆಯಲಿದೆ ಐಶ್ವರ್ಯಾ ಸರ್ಜಾ ಮದುವೆ



ಆಕ್ಷನ್ ಕಿಂಗ್ ಅರ್ಜುನ್ ಸರ್ಜಾ ಪುತ್ರಿ ಐಶ್ವರ್ಯಾ ಸರ್ಜಾ ಮದುವೆಗೆ ಭರ್ಜರಿ ತಯಾರಿ ನಡೆಯುತ್ತಿದೆ. ಇದೇ ಜೂನ್ 10ರಂದು ಚೆನ್ನೈ ಹನುಮಾನ್ ದೇವಸ್ಥಾನದಲ್ಲಿ ಐಶ್ವರ್ಯಾ ಮತ್ತು ಉಮಾಪತಿ ಮದುವೆ ಅದ್ದೂರಿಯಾಗಿ ಜರುಗಲಿದೆ. ಜೂನ್ 14ರಂದು ಆರತಕ್ಷತೆ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಐಶ್ವರ್ಯಾ ಮತ್ತು ತಮಿಳು ನಟ ಉಮಾಪತಿ ರಾಮಯ್ಯ ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಇಬ್ಬರ ಪ್ರೀತಿಗೆ ಎರಡು ಕುಟುಂಬದ ಸಮ್ಮತಿಯ ಮೇರೆಗೆ ಇತ್ತೀಚೆಗೆ ಅದ್ದೂರಿಯಾಗಿ ಎಂಗೇಜ್‌ಮೆಂಟ್ ನಡೆದಿತ್ತು. ಈಗ ಜೂನ್ 10ಕ್ಕೆ ದಾಂಪತ್ಯ ಜೀವನಕ್ಕೆ ಕಾಲಿಡಲು ನಟಿ ರೆಡಿಯಾಗಿದ್ದಾರೆ. ಮಗಳ ಮದುವೆಗೆ ಕನ್ನಡದ ಹೆಸರಾಂತ ನಟ ಜಗ್ಗೇಶ್ ಸೇರಿದಂತೆ ಅನೇಕರಿಗೆ ಆಮಂತ್ರಣ ನೀಡಿದ್ದಾರೆ ಅರ್ಜುನ್ ಸರ್ಜಾ ದಂಪತಿ. ಸ್ಯಾಂಡಲ್‌ವುಡ್ ಮತ್ತು ಸೌತ್‌ನ ಅನೇಕ ನಟ, ನಟಿಯರಿಗೆ ಮತ್ತು ರಾಜಕೀಯ ಕ್ಷೇತ್ರದಲ್ಲಿರುವ ಗಣ್ಯರಿಗೆ ಮದುವೆ ಆಹ್ವಾನ ನೀಡಿದ್ದಾರೆ. ಅಂದಹಾಗೆ, ಐಶ್ವರ್ಯಾ ಅವರು 2018ರಲ್ಲಿ 'ಪ್ರೇಮ ಬರಹ' ಚಿತ್ರದಲ್ಲಿ ಬಿಗ್ ಬಾಸ್ ಖ್ಯಾತಿಯ ಚಂದನ್ ಕುಮಾರ್‌ಗೆ ನಾಯಕಿಯಾಗಿದ್ದರು. ಮಗಳ ಚಿತ್ರಕ್ಕೆ ಅರ್ಜುನ್ ಸರ್ಜಾ ನಿರ್ದೇಶನ ಮಾಡಿದ್ದರು. ಈ ಚಿತ್ರ ಕನ್ನಡ ಮತ್ತು ತಮಿಳಿನಲ್ಲಿ ತೆರೆಕಂಡಿತ್ತು.



# ರಾಗಿಣಿ ಮದುವೆ ಫಿಕ್ಸ್ ಆಯ್ತಾ?

ಅಬ್ಬಬ್ಬಾ ರಾಗಿಣಿ ಧರಿಸಿರುವ ಒಡವೆ ನೋಡಿ ನೆಟ್ಟಿಗರು ಶಾಕ್. ಮದ್ವೆ ಹೆಣ್ಣು ಕೂಡ ಇಷ್ಟೊಂದು ಹಾಕಲ್ಲ ಅಂತಾರೆ ನೆಟ್ಟಿಗರು.... ಕನ್ನಡ ಚಿತ್ರರಂಗದ ತುಪ್ಪದ ಹುಡುಗಿ ರಾಗಿಣಿ ದ್ವಿವೇದಿ ಸೋಷಿಯಲ್ ಮೀಡಿಯಾದಲ್ಲಿ ಸಖತ್ ಆಕ್ಟಿವ್ ಆಗಿದ್ದು ತಮ್ಮ ಪ್ರತಿದಿನದ ಅಪ್‌ಡೇಟ್‌ಗಳನ್ನು ಹಂಚಿಕೊಳ್ಳುತ್ತಾರೆ. ಸದ್ಯ ರಾಗಿಣಿ ರೇಶ್ಮಿ ಸೀರೆ ಧರಿಸಿ ದೊಡ್ಡ ದೊಡ್ಡ ಚಿನ್ನದ ಸರಗಳನ್ನು ಧರಿಸಿರುವ ಫೋಟೋ ಎಲ್ಲೆಡೆ ವೈರಲ್ ಆಗುತ್ತಿದೆ. ಗೊಂಬೆ ರೀತಿ ಕಾಣಿಸುತ್ತಿದ್ದಾರೆ. ಇದೇನಪ್ಪಾ ರಾಗಿಣಿ ಮದುವೆ ಆಗ್ತಿದ್ದಾರಾ? ಯಾರಿಗೂ ಹೇಳದೆ ಮದುವೆ ಮಾಡಿಕೊಳ್ಳುತ್ತಿದ್ದಾರೆ ಇದೆಲ್ಲಾ ಮದುಮಗಳು ಹಾಕುವ ಒಡವೆ ಅಲ್ವಾ ಅಂತ ನೆಟ್ಟಿಗರಲ್ಲಿ ಅನುಮಾನ ಶುರುವಾಗಿತ್ತು. ಸ್ವಲ್ಪ ಸಮಯ ನಂತರ ರಾಗಿಣಿ ಫೋಟೋ ಅಪ್ಲೋಡ್ ಮಾಡುತ್ತಾರೆ. ವೇಣುಗೋಪಾ ಜ್ಯುವೆಲ್ಸ್ ಆಂಡ್ ಡೈಮೆಂಟ್ ಚಾಮರಾಜನಗರದಲ್ಲಿ ಅಂಗಡಿ ಓಪನಿಂಗ್ ಎಂದು. ಮದುವೆ ಎಂದುಕೊಂಡ ನೆಟ್ಟಿಗರು 'ಮೇಡಂ ನಿಮ್ಮ ಬಳಿ ಹಣ ಜಾಸ್ತಿ ಇದೆ ಅಂತ ಗೊತ್ತಿದೆ ದಯವಿಟ್ಟು ಚೌಕಾಸಿ ಮಾಡಬೇಡಿ ದಾರಾಳ ಮನಸ್ಸಿನಿಂದ ದುಡ್ಡು ಸುರಿಯಿರಿ' ಎಂದು ಹಾಸ್ಯ ಮಾಡುತ್ತಾ ಕಾಲೆಳೆದಿದ್ದಾರೆ. ಕಿಕ್ ಸಿನಿಮಾದಲ್ಲಿ ವಿಶೇಷ ಅತಿಥಿಯಾಗಿ ಕಾಣಿಸಿಕೊಂಡ ನಂತರ ವೃಷಭ ಸಿನಿಮಾ ಮತ್ತು ಸಾರಿ –ಕರ್ಮ ರಿಟರ್ನ್ಸ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಬಹುತೇಕ ಚಿತ್ರೀಕರಣ ಮುಗಿದಿದೆ ಎನ್ನಲಾಗಿದೆ.



# ರಜನಿಕಾಂತ್‌ಗೆ ಮದುವೆ ಆಮಂತ್ರಣ

ಕಾಲಿವುಡ್ ನಟ ಶರತ್ ಕುಮಾರ್ ಮನೆಯಲ್ಲಿ ಮದುವೆ ಸಂಭ್ರಮ ಮನೆ ಮಾಡಿದೆ. ಪುತ್ರಿ, ವರಲಕ್ಷ್ಮಿ ಮದುವೆಗೆ ಭರ್ಜರಿ ತಯಾರಿ ನಡೆಯುತ್ತಿದೆ. ಜೊತೆಗೆ ಸೌತ್‌ನ ನಟ-ನಟಿಯರಿಗೆ ಶರತ್‌ಕುಮಾರ್ ಕುಟುಂಬ ಮದುವೆ ಆಮಂತ್ರಣ ನೀಡೋದ್ರಲ್ಲಿ ಬ್ಯುಸಿಯಾಗಿದ್ದಾರೆ. ಸದ್ಯ ರಜನಿಕಾಂತ್ ಮನೆಗೆ ಭೇಟಿ ನೀಡಿ ಮದುವೆ ಆಮಂತ್ರಣ ಪತ್ರಿಕೆ ನೀಡಿದ್ದಾರೆ. ಈ ಕುರಿತು ನಟಿ ವರಲಕ್ಷ್ಮಿ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ನಮ್ಮ ತಲೈವರ್ ರಜನಿಕಾಂತ್ ಸರ್ ಅವರನ್ನು ಭೇಟಿ ಮಾಡಿದೆ. ಅವರನ್ನು ಮತ್ತು ಲತಾ ಆಂಟಿ ಅವರನ್ನು ಮದುವೆ ಆಹ್ವಾನಿಸಿದೆ. ಧನ್ಯವಾದಗಳು ಸರ್ ಎಂದು ವರಲಕ್ಷ್ಮಿ ಬರೆದುಕೊಂಡಿದ್ದಾರೆ. ಭೇಟಿಯಾಗಿರುವ ಫೋಟೋ ಹಂಚಿಕೊಂಡು ನಟಿ ಸಂಭ್ರಮಿಸಿದ್ದಾರೆ. ಅಂದಹಾಗೆ, ಮಾಣಿಕ್ಯ ನಟಿ ವರಲಕ್ಷ್ಮಿ ಅವರು ಉದ್ಯಮಿ ನಿಕೋಲಾಯ್ ಜೊತೆ ಮಾರ್ಚ್ 1ರಂದು ಎಂಗೇಜ್‌ಮೆಂಟ್ ಅದ್ದೂರಿಯಾಗಿ ಮಾಡಿಕೊಂಡಿದ್ದರು. ಹಲವು ವರ್ಷಗಳ ಪ್ರೀತಿಗೆ ಇಬ್ಬರೂ ಉಂಗುರದ ಮುದ್ರೆ ಒತ್ತಿದ್ದರು. ಇದೀಗ ಮದುವೆಗೆ ಸಿದ್ಧತೆ ನಡೆಯುತ್ತಿದೆ.





# ಗೋಕರ್ಣದ ಮಹಾಬಲೇಶ್ವರ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿದ ರಿಷಬ್ ಶೆಟ್ಟಿ ದಂಪತಿ

'ಕಾಂತಾರ ಚಾಪ್ಟರ್ 1 ಸಿನಿಮಾ ಕೆಲಸಕ್ಕೆ ಕೊಂಚ ಬ್ರೇಕ್ ನೀಡಿ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನಕ್ಕೆ ಕುಟುಂಬದ ಜೊತೆ ರಿಷಬ್ ಶೆಟ್ಟಿ ಪೂಜೆ ಸಲ್ಲಿಸಿದ್ದಾರೆ. ಇತ್ತೀಚೆಗೆ ರಿಷಬ್ ಫ್ಯಾಮಿಲಿ, ಚಿಕ್ಕಮಗಳೂರು ಜಿಲ್ಲೆಯ ಹರಿಹರಪುರ ಕ್ಷೇತ್ರಕ್ಕೆ ಭೇಟಿ ನೀಡಿದ್ದರು. ಈಗ ಗೋಕರ್ಣದ ಮಹಾಬಲೇಶ್ವರನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಕುಟುಂಬದ ಜೊತೆ ನಟ ಕಾಲ ಕಳೆದಿದ್ದಾರೆ. ಇನ್ನೂ ರಿಷಬ್ ಶೆಟ್ಟಿ ನಟನೆ, ನಿರ್ದೇಶನ ಮಾತ್ರವಲ್ಲ, ಸಿನಿಮಾ ನಿರ್ಮಾಣ ಕೆಲಸದಲ್ಲೂ ಬ್ಯುಸಿಯಾಗಿದ್ದಾರೆ. ತಮ್ಮದೇ ಸಂಸ್ಥೆಯಿಂದ ಹಲವು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಿದ್ದಾರೆ. ಸದ್ಯ ಶಿವಮ್ಮ ಚಿತ್ರ, ಪ್ರಮೋದ್ ಶೆಟ್ಟಿ ನಟನೆಯ 'ಲಾಫಿಂಗ್ ಬುದ್ಧ' ಸೇರಿದಂತೆ ಹಲವು ಸಿನಿಮಾಗಳಿಗೆ ರಿಷಬ್ ನಿರ್ಮಾಣಕ್ಕೆ ಸಾಥ್ ನೀಡುತ್ತಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966